ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17 | ಸಂಚಿಕೆ 43–45 | ರೂ. 2.00 | 5 ನವೆಂಬರ್ 1995

ನಿಜವಾದ ಪರ್ಯಾಯವೊಂದು ಖಂಡಿತಾ ಮೂಡಿ ಬರುತ್ತದೆ

-ಸುರ್ಜಿತ್

ಮುಂಬರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ಮತ್ತು ಬಿಜೆಪಿಗಳೆರಡನ್ನೂ ಸೋಲಿಸಲು ಎಡ-ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಶಕ್ತಿಗಳ ಮೂರನೇ ಪರ್ಯಾಯವನ್ನು ಕಟ್ಟುವ ಪ್ರಯತ್ನ ಒಂದು ಸಕಾ[illegible] ದಿಕ್ಕಿನಲ್ಲಿ ಸಾಗಿದೆ. ಒಂದು ನಿಜವಾದ ಪರ್ಯಾಯ ಖಂಡಿ[illegible]ಯೂ ಮೂಡಿ ಬರಲಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ.

ಪತ್ರಿಕಾ ಸಮ್ಮೇಳನವೊಂದನ್ನು ಉದ್ದೇಶಿಸಿ ಮಾತನಾಡುತ್ತಾ ತೆಲುಗುದೇಶಂನ ಒಡಕಿನಿಂದ ಈ ಪ್ರಯತ್ನಕ್ಕೆ ಸ್ವಲ್ಪ ಹಿನ್ನಡೆಯಾಗಿದ್ದರೂ ಕೆಲವು ಸಕಾರಾತ್ಮಕ ಬೆಳವಣಿಗೆಗಳೂ ನಡೆದಿವೆ. ಅವುಗಳಲ್ಲಿ ಜಾತ್ಯಾತೀತ ಪ್ರತಿಪಕ್ಷಗಳೊಂದಿಗೆ ಸೇರಿಕೊಳ್ಳಲು ಮುಲಾಯಂ ಸಿಂಗ್ ಯಾದವ್ ಸಿದ್ಧರಾಗಿರುವುದು ಮಹತ್ವದ ಬೆಳವಣಿಗೆ ಎಂದು ಸುರ್ಜಿತ್ ಹೇಳಿದ್ದಾರೆ.

"ಉತ್ತರ ಪ್ರದೇಶದಲ್ಲಿ ಮುಲಾಯಂ ಸಿಂಗ್ ಅತೀ ದೊಡ್ಡ ಜಾತ್ಯತೀತ ಶಕ್ತಿ.... ಕಾಂಗ್ರೆಸ್ ಆ ರಾಜ್ಯದಲ್ಲಿ ಇಲ್ಲ. ಉತ್ತರ ಪ್ರದೇಶದಲ್ಲಿ ಮುಲಾಯಂ ಸಿಂಗರಿಲ್ಲದೆ ಬಿಜೆಪಿ ವಿರುದ್ಧ ಹೋರಾಡಲು ಸಾಧ್ಯವಿಲ್ಲ. ಮತ್ತು ಅವರೀಗ ಬಿಜೆಪಿ ಮತ್ತು ಕಾಂಗ್ರೆಸ್ ವಿರುದ್ಧ ಹೋರಾಡಲು, ಎಡ ಮತ್ತು ಜಾತ್ಯಾತೀತ ಶಕ್ತಿಗಳೊಂದಿಗೆ ಸೇರಿಕೊಳ್ಳಲು ಸಿದ್ಧರಿದ್ದಾರೆ" ಎಂದು ಸುರ್ಜಿತ್ ಹೇಳಿದರು.

ದೇಶದ ಬೇರೆಡೆ ಕೂಡಾ ಬಿಜೆಪಿಯೇತರ ಕಾಂಗ್ರೆಯೇತರ ಶಕ್ತಿಗಳು ತಲೆ ಎತ್ತುತ್ತಿವೆ. ಅವು ಮೂಡಿಬರುತ್ತಿರುವ ಮೂರನೇ ಪರ್ಯಾಯದ ಭಾಗವಾಗಲು ಉತ್ಸುಕರಾಗಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕದಲ್ಲಿ ಎಸ್. ಬಂಗಾರಪ್ಪ ಜನತಾದಳದೊಡನೆ ಕೈ ಜೋಡಿಸಲು ಆಕಾಂಕ್ಷೆ ವ್ಯಕ್ತಪಡಿಸಿರುವುದು ಸುರ್ಜಿತ್ ನೆನಪಿಸಿದರು. ರಾಮಕೃಷ್ಣ ಹೆಗಡೆಯವರೂ ಕಾಂಗ್ರೆಸ್ ನೊಂದಿಗೆ ಸಮ್ಮಿಶ್ರ ಸರಕಾರ ಬಗ್ಗೆ ಮಾತನಾಡಿದರೂ ಕೂಡಾ ಅವರು ಜನತಾದಳದ ಭಾಗವಾಗಿಯೇ ಇದ್ದಾರೆ ಎಂದರು.

ಎಡ ಶಕ್ತಿಗಳ ಪ್ರತಿಷ್ಠೆ

ಒಂದು ಮೂರನೇ ಪರ್ಯಾಯವನ್ನು ರೂಪಿಸುವಲ್ಲಿ ಎಡ ಪಕ್ಷಗಳು ವಹಿಸಬೇಕಾದ ಪ್ರಧಾನ ಪಾತ್ರದ ಬಗ್ಗೆ ಸುರ್ಜಿತ್ ಒತ್ತಿ ಹೇಳಿದರು. ತ್ರಿಪುರಾ ಸ್ವಾಯತ್ತ ಮುಂಡಾ ಚುನಾವಣೆಗಳಲ್ಲಿ ಭಾರೀ ವಿ[illegible]ಯದ [illegible]ಯೂ ಕೇರಳದ [illegible]ಯತು ಮತ್ತು ನಗರಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ಮತ್ತು ಎಲ್.ಡಿ.ಎಫ್.ನ ಪ್ರಶಂಸಾರ್ಹ ವಿಜಯ ಎಡ ಮತ್ತು ಜಾತ್ಯಾತೀತ ಶಕ್ತಿಗಳ ಗಟ್ಟಿತನವನ್ನು ತೋರಿಸಿದೆ. ಹಾಗೂ ದೇಶದಲ್ಲಿ ಎಡ ಶಕ್ತಿಗಳ ಪ್ರತಿಷ್ಠೆಯನ್ನು ಹೆಚ್ಚಿಸಿವೆ. "ಎಡ ಪಕ್ಷಗಳು ಗಳಿಸಿದ ಈ ಪ್ರತಿಷ್ಠೆಯ ನಂತರ ನಾವೀಗ ಎಡ,ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಶಕ್ತಿಗಳ ಐಕ್ಯತೆ ತರುವ ನಿಟ್ಟಿನಲ್ಲಿದ್ದೇವೆ. ಒಂದು ನಿಜವಾದ ಪರ್ಯಾಯ ಖಂಡಿತಾ ಮೂಡಿಬರುತ್ತದೆ ಎಂಬ ವಿಶ್ವಾಸ ನಮಗಿದೆ" ಎಂದು ಸುರ್ಜಿತ್ ಹೇಳಿದರು.

ಬಿಜೆಪಿ ಅಹಂಕಾರ ಟೊಳ್ಳೆಂದು ಬಯಲಾಗಿದೆ

[illegible] ಬೆಳವಣಿಗೆಗಳು ತಾನೊಂದು 'ನೀತಿವಂತ' ಪಕ್ಷ, ಕಾಂಗ್ರೆಸ್(ಐ)ಗೆ ಒಂದು ಸ್ಥಿರ ಪರ್ಯಾಯವನ್ನು ಕೊಡಬಲ್ಲ ಪಕ್ಷ ಎಂಬ ಬಿಜೆಪಿಯ ಅಹಂಕಾರದ ಮಾತುಗಳಲ್ಲಿನ ಟೊಳ್ಳುತನವನ್ನು ಬಯಲಿಗೆಳೆದಿವೆ ಎಂದು ಸುರ್ಜಿತ್ ಹೇಳಿದರು. ಗುಜರಾತಿನಲ್ಲಿ ಒಂದೊಂದಾಗಿ ಅನಾವರಣಗೊಳ್ಳುತ್ತಿರುವ ದೃಶ್ಯಗಳು ಮಂತ್ರಿ-ಅಧಿಕಾರದ [illegible]ಗಳಿಗಾಗಿ ಬಿಜೆಪಿ ಮುಖಂಡರು [illegible]ಲ್ಲಿನ ಕಿತ್ತಾಟ ಬಿಜೆಪಿ ಅಧಿಕಾರದಾಹ ಮತ್ತು ಧನದಾಹದಲ್ಲಿ ಕಾಂಗ್ರೆಸ್(ಐ) ಗಿಂತ ಭಿನ್ನವಾಗಿಲ್ಲ ಎಂದುತೋರಿಸಿಕೊಡುತ್ತಿವೆ. ಇದಕ್ಕೆ ಮೊದಲು ಉತ್ತರ ಪ್ರದೇಶದಲ್ಲಿ ಮಾಯವತಿ ಸರ್ಕಾರಕ್ಕೆ ನೀಡಿದ ಸಮಯಸಾಧಕ ಬೆಂಬಲ ಅದೊಂದು ನೀತಿಗಳಿಲ್ಲದ ಪಕ್ಷ ಎಂಬುದನ್ನು ತೋರಿಸಿತ್ತು. ಅದೇ ರೀತಿ ಮಹಾರಾಷ್ಟ್ರದಲ್ಲಿ ಎನ್ರೋನ್ ಒಪ್ಪಂದವನ್ನು ಭಾರೀ ಆಡಂಬರದ ಮಾತುಗಳ ನಡುವೆ ರದ್ದು ಮಾಡಿ ಬಿಜೆಪಿ-ಶಿವಸೇನೆ ಸರಕಾರ ಈಗ ಆ ಬಗ್ಗೆ ಮರುಮಾತುಕತೆಗೆ ನಿರ್ಧರಿಸಿರುವುದು "ಬಿಜೆಪಿಗೆ ತನ್ನ ಅಮೇರಿಕಾ-ಪರ ನಿಲುವನ್ನು ತ್ಯಜಿಸಲು ಸಾಧ್ಯವಿಲ್ಲ ಎಂಬುದನ್ನು ಮತ್ತೊಮ್ಮೆ ದೃಢಪಡಿಸಿದೆ" ಎಂದು ಸುರ್ಜಿತ್ ಹೇಳಿದರು.

ಘೋರ ಪ್ರಪಾತದಲ್ಲಿ ಕಾಂಗ್ರೆಸ್ (ಐ)

ಹೀಗೆ ಒಂದೆಡೆ ಬಿಜೆಪಿಯ ಪ್ರತಿಷ್ಠೆಗೆ ಬಲವಾದ ಹೊಡೆತಗಳು ಬೀಳುತ್ತಿರುವಾಗ ಅತ್ತ ಚಂದ್ರಸ್ವಾಮಿ ವ್ಯವಹಾರದಿಂದ ಭ್ರಷ್ಟಚಾರಕ್ಕೆ ಪ್ರೋತ್ಸಾಹ ನೀಡುವ, ಕ್ರಿಮಿನಲ್‌ಗಳನ್ನು ರಕ್ಷಿಸುವ ಕಾಂಗ್ರೆಸ್(ಐ)ನ 'ಖ್ಯಾತಿ' ಇನ್ನಷ್ಟು ಹೆಚ್ಚಿದೆ. ಹಿಂದಿನ ಆಂತರಿಕ ಭದ್ರತಾ ಮಂತ್ರಿ ರಾಜೇಶ್ ಪೈಲಟ್ ಚಂದ್ರಸ್ವಾಮಿಯವರನ್ನು ಬಂಧಿಸಬೇಕು ಎಂದು ಆದೇಶ ನೀಡಿದ್ದರೂ ರಾವ್ ಸರಕಾರ ಯಾವುದೇ ಕ್ರಮ ಕೈಗೊಳ್ಳಲು ಸಿದ್ಧವಿಲ್ಲದಿರುವುದು. ಈ ಆಳುವ ಪಕ್ಷ ಎಂತಹ ಘೋರ ಪ್ರಪಾತಕ್ಕೆ ಬಿದ್ದಿದೆ ಎಂಬುದನ್ನು ತೋರಿಸುತ್ತದೆ. ತಕ್ಷಣ ಚಂದ್ರಸ್ವಾಮಿಯನ್ನು ಬಂಧಿಸಬೇಕು. ಆತನ ಎಲ್ಲಾ ಸಂಪರ್ಕಗಳ ಪೂರ್ಣ ಪ್ರಮಾಣದ ತ[illegible]ಯಾಗಬೇಕೆಂದು ಒತ್ತಾಯಿಸಿದ ಸುರ್ಜಿತ್, ಸರ್ಕಾರ ಹಾಗೆ ಮಾಡದಿದ್ದರೆ ಚಂದ್ರಸ್ವಾಮಿ ವ್ಯವಹಾರ ಮುಂಬರುವ ಚುನಾವಣೆಗಳಲ್ಲಿ ಒಂದು ದೊಡ್ಡ ಪ್ರಶ್ನೆಯಾಗಲಿದೆ, 1989ರಲ್ಲಿ ಬೊಫೋರ್ಸ್ [illegible]ಣ ಕಾಡಿದಂತೆ ಆಳುವ ಪಕ್ಷವನ್ನು ಕಾಡುತ್ತದೆ ಎಂದು ಎಚ್ಚರಿಸಿದರು.

ಕಾಂಗ್ರೆಸ್(ಐ)ಗೆ ಮತದಾರರನ್ನು ಎದುರಿಸುವ ಸ್ಥೈರ್ಯವಿಲ್ಲ ಎಂಬುದೀಗ ಸ್ಪಷ್ಟ. ಹಿಂದೆ ಅದು ಬೇಗನೇ ಚುನಾವಣೆ ನಡೆಯಬೇಕೆಂದು ಬರ[illegible]ಯಲ್ಲಿ ತಿಳಿಸಿತ್ತು. ಆದರೆ ಈಗ ಮುಂದಿನ ಸಾರ್ವತ್ರಿಕ ಚುನಾವಣೆಗಳನ್ನು ಮತ್ತಷ್ಟು ಮುಂದೂಡಬಯಸುವ ಏಕೈಕ ಪ್ರಧಾನ ಪಕ್ಷ ಅದಾಗಿದೆ ಎಂದು ಸುರ್ಜಿತ್ ತಿಳಿಸಿದರು. ಬೇರೆ ಎಲ್ಲಾ ಪಕ್ಷಗಳು 1996ರ ಫೆಬ್ರವರಿ 20ರಿಂದ ಮಾರ್ಚ್ 10ರ ನಡುವೆ ಚುನಾವಣೆಗಲು ನಡೆಯಬೇಕು ಎಂದು ಒತ್ತಾಯಿಸಿವೆ. ಆದ್ದರಿಂದ ಅದನ್ನು ಮುಂದೂಡುವಂತೆ ಚುನಾವಣಾ ಆಯೋಗದ ಮೇಲೆ ಒತ್ತಡ ಬರದಿರಲಿ ಎಂದು ಅವರು ಆಶಿಸಿದರು.

ಸಲ್ಮಾನ್ ರಶ್ದಿಯವರ ಹೊಸ ಕೃತಿ 'ಮೂರ್ಸ್ ಲಾಸ್ಟ್ ಸೈ"ಯನ್ನು ಭಾರತದಲ್ಲಿ ಮಾರಟ ಮಾಡದಂತೆ ಭಾರತ ಸರ್ಕಾರ ನಡೆಸಿರುವ ಪ್ರಯತ್ನಗಳ ಬಗ್ಗೆ ಪ್ರತಿಕ್ರಿಯಿಸುತ್ತಾ ಇದು ಕೋಮುವಾದಿ ಶಕ್ತಿಗಳನ್ನು ತುಷ್ಟೀಕರಿಸುವ ಪ್ರಯತ್ನವಾಗಿರಬೇಕು ಎಂದು ಸುರ್ಜಿತ್ ಅಭಿಪ್ರಾಯಪಟ್ಟರು. ರಶ್ದಿಯವರ ಪುಸ್ತಕ ಮೂಲಭೂತವಾದಿ ಶಕ್ತಿಗಳನ್ನು ವಿಮರ್ಶಿಸಿದ್ದು, ಶಿವಸೇನೆ ಮತ್ತು ಬಾಳಠಾಕ್ರೆಯ ಬಗ್ಗೆ ಪರೋಕ್ಷ ಟಿಪ್ಪಣಿಗಳನ್ನು ಹೊಂದಿದೆ. ಈ ಪುಸ್ತಕದ ಬಗ್ಗೆ ತಳೆದಿರುವ ನಿಲುವು ಮೂಲಭೂತವಾಗಿ ಹಾಗೂ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟ ನಡೆಸಬೇಕಾದ ಈಗಿನ ಸಂದರ್ಭದಲ್ಲಿ ಅಪಾಯಕಾರಿಯಾಗಬಹುದು ಎಂದು ಸುರ್ಜಿತ್ ಅಭಿಪ್ರಾಯಪಟ್ಟರು.

(ಐ.ಎನ್.ಎಸ್.)

ಉತ್ತರ ಪ್ರದೇಶ ವಿಧಾನಸಭೆಯನ್ನು ವಿಸರ್ಜಿಸಬೇಕು ಸಿಪಿಐ(ಎಂ) ಕೇಂದ್ರ ಸಮಿತಿ ಒತ್ತಾಯ

ಉತ್ತರ ಪ್ರದೇಶ ವಿಧಾನಸಭೆಯನ್ನು ವಿಸರ್ಜಿಸಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಒತ್ತಾಯಿಸಿದೆ. ಅದನ್ನು ಅಮಾನತ್ತಿನಲ್ಲಿಡುವ ರಾಜ್ಯಪಾಲರ ನಿರ್ಣಯ ಕಾಂಗ್ರೆಸ್(ಐ)ಗೆ ಅನೀತಿಯುತ ಕಸರತ್ತು ನಡೆಸಲು ಅವಕಾಶ ನೀಡಲಿಕ್ಕಾಗಿ ಎಂದು ಅದು ಖಂಡಿಸಿದೆ.

ಸಿಪಿಐ(ಎಂ)ನ ಕೇಂದ್ರ ಸಮಿತಿಯ ಮೂರು ದಿನಗಳ ಸಭೆಯ ನಂತರ ಏರ್ಪಡಿಸಿದ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಅಲ್ಲಿ ಯಾವ ಪ್ರಮುಖ ಪಕ್ಷಗಳೂ ಸರಕಾರ ರಚಿಸುವ ಸ್ಥಿತಿಯಲ್ಲಿಲ್ಲ, ಆದ್ದರಿಂದ ಮುಂದಿನ ಸರ್ಕಾರ ಯಾರು ರಚಿಸಬೇಕು ಎಂದು ಜನತೆ ನಿರ್ಣಯಿಸಬೇಕು ಎಂದರು. ವಿಧಾನಸಭೆಯ ವಿಸರ್ಜಿಸದಿರಲು ಸುಪ್ರೀಂ ಕೋರ್ಟಿನ ನಿರ್ಣಯದ ಪ್ರಸ್ತಾಪ ಮಾಡಿರುವುದು ಇಲ್ಲಿ ಅಸಂಬದ್ಧ ಏಕೆಂದರೆ ಎಲ್ಲಾ ಪಕ್ಷಗಳೂ ಹೊಸ ಚುನಾವಣೆ ನಡೆಸಬೇಕೆಂದು ಒತ್ತಾಯಿಸಿವೆ. ಲೋಕಸಭೆಯ ಚುನಾವಣೆಗಳ ಜೊತೆಗೆ ಉತ್ತರ ಪ್ರದೇಶ ವಿಧಾನ ಸಭೆಗೂ ಚುನಾವಣೆ ನಡೆಸಬೇಕು ಎಂದು ಅವರು ಹೇಳಿದರು.

ಬಿಜು ಪಟ್ನಾಯಕ್ ಸರ್ಕಾರದ ದಾರಿ ಬೇಡ

ಕರ್ನಾಟಕದ ಮುಖ್ಯಮಂತ್ರಿ ಶ್ರೀ ದೇವೇಗೌಡರು ಭಾರತ ಸರಕಾರದ ವಾಣಿಜ್ಯ ಮಂತ್ರಿ ಶ್ರೀ ಚಿದಂಬರಂ ಮತ್ತು ಪ್ರಧಾನಿಯವರಿಗೆ ತ[illegible]ಹಾಯಕ್ಕೆ ಬರಬೇಕೆಂದೂ ರಾಜ್ಯದ ಕಾಂಗ್ರೆಸ್(ಐ) ಪಕ್ಷಕ್ಕೆ ಭೂ-ಸುಧಾರಣಾ (ತಿದ್ದುಪಡಿ) ಕಾನೂನನ್ನು ವಿರೋಧಿಸದೆ ಇರಲು ಕೇಳಿಕೊಳ್ಳಬೇಕೆಂದು ಅರಿಕೆ ಮಾಡಿರುವ ಬಗ್ಗೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಖೇದ ವ್ಯಕ್ತಪಡಿಸಿದೆ.

ಮುಖ್ಯಮಂತ್ರಿಗಳ ಹೇಳಿಕೆಯನ್ನು ಅಧ್ಯಯನ ಮಾಡಿದಾಗ ರಾಜ್ಯದ ಜನತಾದಳ ಸರಕಾರದ ಆರ್ಥಿಕ ನೀತಿಗಳ ತತ್ವಾಂಶದ ಬಗ್ಗೆ ಅನುಮಾನ ಬರುತ್ತಿದೆ.

ಭಾರತ ಸರಕಾರದ ನೂತನ ಆರ್ಥಿಕ ನೀತಿಯಿಂದ ತೀವ್ರ ಆಘಾತಕ್ಕೊಳಗಾದ ಕರ್ನಾಟಕ ರಾಜ್ಯ[illegible] ಜನತೆ ರಾಜ್ಯದಲ್ಲಿ ಜನತಾದಳ ಸರ್ಕಾರವನ್ನು ಅಧಿಕಾರಕ್ಕೇರಿಸಿತ್ತು. ತಾನೆ ಜನತಾದಳ ಪಕ್ಷವು ರಾಷ್ಟ್ರೀಯ ಮಟ್ಟದಲ್ಲಿ ನೂತನ ಆರ್ಥಿಕ ನೀತಿಯನ್ನು ವಿರೋಧಿಸಿತ್ತು. ರಾಜ್ಯದ ವಿಧಾನ ಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ಜನತಾದಳಕ್ಕೆ ತನ್ನ ಬೆಂಬಲವನ್ನು ವ್ಯಕ್ತಪಡಿಸಿತ್ತು.

ಈಗ ಜನತಾದಳ ಸರಕಾರವು ಕಾಂಗ್ರೆಸ್(ಐ) ಪಕ್ಷದ ಧೋರಣೆಗಳನ್ನೇ ಅನುಸರಿಸುತ್ತಿದೆ. ಇದು ಹೀಗೇನೇ ಮುಂದುವರಿದರೆ ರಾಜ್ಯದ ಕಾರ್ಮಿಕ ವರ್ಗ ಮತ್ತು ರೈತ ವರ್ಗಗಳು ಈ ಧೋರಣೆಗಳಿಗೆ ತಮ್ಮ ಬೆಂಬಲ ವ್ಯಕ್ತಪಡಿಸುತ್ತವೆ ಎಂದು ನಿರೀಕ್ಷಿಸಲು ಸಾಧ್ಯವಿಲ್ಲ. ಈ ಧೋರಣೆಗಳ ವಿರುದ್ಧ ತನ್ನ ಪಕ್ಷದ ಸದಸ್ಯರಲ್ಲಿ ಅಸಂತೋಷವಿದ್ದರೂ ಕೂಡಾ ಜನತಾದಳ ಸರಕಾರವು ಈ ಧೋರಣೆಗಳನ್ನು ಅನುಸರಿಸುತ್ತಿರುವುದು ದುರದೃಷ್ಟಕರ. ಆದಕಾರಣ, ಜನತಾ ಸರಕಾರವು ತನ್ನ ಧೋರಣೆಗಳನ್ನು ಮರುಪರಿಶೀಲಿಸಿ ಬದಲಾಯಿಸಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಒತ್ತಾಯಿಸಿದೆ.

ಈಗ, ದೇವೇಗೌಡರ ಜನತಾದಳ ಸರಕಾರವು ಹೀಗೇನೇ ನರಸಿಂಹರಾಯರ ನೂತನ ಆರ್ಥಿಕ ನೀತಿಯನ್ನೇ ಅನುಸರಿಸುತ್ತಾ ಬಂದರೆ, ಅದಕ್ಕೂ ಒರಿಸ್ಸಾದ ಜನತಾದಳದ ಬಿಜುಪಟ್ನಾಯಕ್ ಸರಕಾರದ ಗತಿಯೇ ಸಂಭವಿಸಬಹುದೆಂಬ ಬಲವಾದ ಶಂಕೆ ನಮ್ಮ ಪಕ್ಷಕ್ಕೆ ಬರುತ್ತಿದೆ.

ಆದಕಾರಣ, ಸಿಪಿಐ(ಎಂ) ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು ದೇವೇಗೌಡರಿಗೆ ಕೈಗಾರಿಕಾ, ಭೂಕಾರ್ಮಿಕ ಮತ್ತು ವಿದ್ಯುಚ್ಛಕ್ತಿ ಧೋರಣೆಗಳ ವಿಷಯದ ಕ[illegible] ಒಂದು ಬಹಿರಂಗ ಪತ್ರ ಬರೆಯಲು ನಿರ್ಧರಿಸಿದೆ. ಹಾಗೆಯೇ ಜನತಾದಳ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಬೊಮ್ಮಾಯಿಯವರಿಗೂ ಒಂದು [illegible] ಬರೆದು ಅವರ ಪಕ್ಷದ ಧೋರಣೆಗಳ ಸ್ಪಷ್ಟೀಕರಣ ಕೇಳಿಕೊಳ್ಳಬೇಕೆಂದು ನಿರ್ಧರಿಸಿದೆ.

ಓದುಗರ, ಏಜೆಂಸಿದಾರರ ಗಮನಕ್ಕೆ

ನಮ್ಮ ಡಿ.ಟಿ.ಪಿ. ಘಟಕದಲ್ಲಿ ಅಕಸ್ಮಾತ್ತಾಗಿ ಉಂಟಾದ ತೊಂದರೆ ಹಾಗೂ ಸತತ ವಿದ್ಯುತ್ ಅಡಚಣೆಗಳಿಂದಾಗಿ 'ಐಕ್ಯರಂಗ'ದ ಪ್ರಕಟಣೆಯಲ್ಲಿ ತೀವ್ರ ವ್ಯತ್ಯಯವಾಗಿದೆ. ಇದಕ್ಕಾಗಿ ವಿಷಾಧಿಸುತ್ತೇವೆ.

-ವ್ಯವಸ್ಥಾಪಕರು

ಒಳಪುಟಗಳಲ್ಲಿ

ವಿಜ್ಞಾನ ವರ್ತಮಾನ

ಕಗಳಿಂದ ಇನ್ನೂ ಲಕ್ಷಾಂತರ ಮಂದಿ ಮನೆಯೊಳಗೇ ಕೂತು 'ದೂರದರ್ಶನ'ದ ನೇರ ಪ್ರಸಾರದಲ್ಲಿ ರಾಜಸ್ತಾನ, ಉತ್ತರ ಪ್ರದೇಶ ಹಾಗೂ ಪಶ್ಚಿಮ ಬಂಗಾಳದ ಒಂದೊಂದು ಕಡೆ ನಡೆದ ಪೂರ್ಣ ಸೂರ್ಯಗ್ರಹಣವನ್ನು ಕಂಡರು. ಇನ್ನೂ ಲಕ್ಷಾಂತರ ಮಂದಿ ಮನೆಯ ಕಿಟಕಿ ಬಾಗಿಲುಗಳನ್ನೆಲ್ಲಾ ಮುಚ್ಚಿ, ಜತೆಗೆ ಟಿ.ವಿಯನ್ನು ಆರಿಸಿ ಸೂರ್ಯನ 'ಒಳಿತಿಗೆ' (!) ಜಪತಪ ನಡೆಸಿದರು.- ಗ್ರಹಣ ಬಿಟ್ಟ ಮೇಲೆ ನದಿಗಳಲ್ಲಿ ಮುಳುಗು ಹಾಕಿ ಬಂದರು.

ಆದರೂ ಹಿಂದೆಂದಿಗಿಂತಲೂ ಹೆಚ್ಚು ಮಂದಿ ಈ ಬಾರಿ ಸೂರ್ಯಗ್ರಹಣವನ್ನು ವೀಕ್ಷಿಸಿದರು ಎಂದು ಪತ್ರಿಕೆಯೊಂದು ಅಭಿಪ್ರಾಯಪಟ್ಟಿದೆ. ಪಶ್ಚಿಮ ಬಂಗಾಳದ ಡೈಮಂಡ್ ಹಾರ್ಬರ್‌ನಲ್ಲಿ ಸೂರ್ಯಗ್ರಹಣವನ್ನು ವೀಕ್ಷಿ ಮತ್ತು ತಂತ್ರಜ್ಞಾನ ಸಂವಹನ ಮಂಡಳಿ, ವಿವಿಧ ಸಂಶೋಧನಾ ಸಂಘಟನೆಗಳು, ಅವೆಲ್ಲಕ್ಕೂ ಮಿಗಿಲಾಗಿ ಅಖಿಲ ಭಾರತ ಜನವಿಜ್ಞಾನ ಜಾಲ, ಭಾರತ ಜ್ಞಾನ ವಿಜ್ಞಾನ ಸಮಿತಿ ಮುಂತಾದ ಸಂಘಟನೆಗಳ ಪ್ರಯತ್ನದಿಂದ ಈ ಬಾರಿ ಹಿಂದೆಂದಿಗಿಂತಲೂ ಹೆಚ್ಚು ಮಂದಿ ಸೂರ್ಯಗ್ರಹಣವನ್ನು ವೀಕ್ಷಿಸಿದರು ಎಂದು 'ಟೈಂಸ್ ಆಫ್ ಇಂಡಿಯಾ'ದ ಸಂಪಾದಕೀಯ ಮೆಚ್ಚುಗೆ ವ್ಯಕ್ತಪಡಿಸಿದೆ. ನಿಜವಾಗಿಯೂ ಮೂಢನಂಬಿಕೆ ಮತ್ತು ವೈಜ್ಞಾನಿಕ ಚಿಂತನೆಯ ನಡುವೆ ಈ ದೇಶದಲ್ಲಿ ನಡೆಯುತ್ತಿರುವ ಹೋರಾಟದಲ್ಲಿ ಇದೊಂದು ಮಹತ್ವಪೂರ್ಣ ಮುನ್ನಡೆ. ಕೆಲವೇ ದಿನಗಳ ಹಿಂದೆ ಹಾಲು ಕುಡಿದ ಗಣಪನ ಹೆಸರಲ್ಲಿ ಕೋಮುವಾದಿಗಳು ನಡೆಸಿದ ಪ್ರಯತ್ನ ಅವರು ನಿರೀಕ್ಷಿಸಿದ ಯಶಸ್ಸು

ಜನಸಾಮಾನ್ಯರಲ್ಲಿ ವೈಜ್ಞಾನಿಕ ಮನೋಭಾವ ಹರಡುವ ಉದ್ದೇಶ ಹೊಂದಿರುವ ಈ ವಿಜ್ಞಾನ ವೇದಿಕೆ ಫೆಬ್ರವರಿ 12ರಂದು ಈ ಇಡೀ ವಿದ್ಯಮಾನದ ಹಿಂದಿರುವ ವಿಜ್ಞಾನವನ್ನು ವಿವರಿಸುವ ರಾಜ್ಯಮಟ್ಟದ ವರ್ಕ್‌ಶಾಪ್‌ಗಳನ್ನು ನಡೆಸಿತು. ನಂತರ ಆಗಸ್ಟ್ ತಿಂಗಳವರೆಗೆ ಜಿಲ್ಲಾ ಮಟ್ಟದ ಹಾಗೂ ಸ್ಥಳೀಯ ಮಟ್ಟಗಳ ವರ್ಕ್‌ಶಾಪ್‌ಗಳು ನಡೆದವು. ನಂತರ ಜನಸಾಮಾನ್ಯರ ನಡುವೆ ಹಲವಾರು ಗುಂಪು ಸಭೆಗಳು ನಡೆದವು. ನವಸಾಕ್ಷರರು, ಕೊಳೆಗೇರಿವಾಸಿಗಳು ಹಾಗೂ ಹಿಂದುಳಿದ ಕೋಮುಗಳಲ್ಲಿ ಇಂತಹ ಗುಂಪು ಸಭೆಗಳನ್ನು ನಡೆಸಲು ವಿಶೇಷ ಕ್ರಮ ವಹಿಸಲಾಯಿತು.

ಸೂರ್ಯಗ್ರಹಣವನ್ನು ಸುರಕ್ಷಿತವಾಗಿ ವೀಕ್ಷಿಸಬಹುದಾದ ವಿಶೇಷ ಕನ್ನಡಕಗಳನ್ನು ತಯಾರಿಸಿ ಹಂಚಲಾಯಿತು. ಸುಮಾರು ಪೂರ್ಣ ಸೂರ್ಯಗ್ರಹಣ ಕಾಣುವ ಇನ್ನೊಂದು ಪ್ರಮುಖ ನಗರ ಅಲಹಾಬಾದ್ ತಲುಪಿತು.

ಈ ಪ್ರಚಾರ ಕಾರ್ಯದಲ್ಲಿ ಹಲವು ಪ್ರಸಿದ್ಧ ವಿಜ್ಞಾನಿಗಳೂ ಪಾಲ್ಗೊಂಡರು. ಗ್ರಹಣದ ದಿನ ಐದು ಜಿಲ್ಲೆಗಳಲ್ಲಿ ವಿಶೇಷ ಕ್ಯಾಂಪುಗಳನ್ನು ಏರ್ಪಡಿಸಿ ಜನಗಳನ್ನು ಪೂರ್ಣ ಸೂರ್ಯಗ್ರಹಣದ ಪ್ರಾಕೃತಿಕ ಸೌಂದರ್ಯವನ್ನು ಸ್ವತಃ ಅನುಭವಿಸುವಂತೆ 'ಬಿಜ್ಞಾನ್ ಮಂಚ್' ವ್ಯವಸ್ಥೆ ಮಾಡಿತು. ಪಶ್ಚಿಮ ಬಂಗಾಳ ಸರಕಾರ ಹಾಗೂ ಜಿಲ್ಲಾ ಮಟ್ಟದ ಆಡಳಿತದಿಂದಲೂ ಈ ವಿಜ್ಞಾನ ಕಾರ್ಯಕರ್ತರ ಪ್ರಯತ್ನಗಳಿಗೆ ಬೆಂಬಲ ದೊರೆಯಿತು.

ಕರ್ನಾಟಕದಲ್ಲೂ

ನಮ್ಮ ರಾಜ್ಯದಲ್ಲಿ ಪೂರ್ಣ ಸೂರ್ಯಗ್ರಹಣ ಕಾಣದಿದ್ದರೂ ಈ ಪ್ರಾಕೃತಿಕ ಘಟನೆಯ ಬಗ್ಗೆ ಇರುವ ಮೂಢನಂಬಿಕೆಗಳನ್ನು ತೊಲ

ಬಾನಂಗಳದಲ್ಲೊಂದು ಪ್ರಕೃತಿಯ ಅಮೋಘ ಆಟ

ಇಲ್ಲಿ ಭೂಮಿಯ ಮೇಲೆ ವೈಜ್ಞಾನಿಕತೆಗಾಗಿ ಇನ್ನೊಂದು ಹೋರಾಟ


ಕಲ್ಕತ್ತೆಯ ಬಳಿಯ ಡೈಮಂಡ್ ಹಾರ್ಬರ್‌ನ ಆಗಸದಲ್ಲಿ ಕೊಹಿನೂರು ಉಂಗುರ - ಪ್ರಕೃತಿಯ ವಿಸ್ಮಯ



ಅಕ್ಟೋಬರ್ 24ರ ಮುಂಜಾನೆ ಗಗನದಲ್ಲಿ ಕಂಡು ಬಂದ ಒಂದು ಅಮೋಘ ದೃಶ್ಯ ಇಡೀ ದೇಶದ ಗಮನ ಸೆಳೆಯಿತು. -ವಿವಿಧ ರೀತಿಗಳಲ್ಲಿ ರಾಜಸ್ತಾನದ ಬಿಕಾನೇರ್ ನಿಂದ ಪಶ್ಚಿಮ ಬಂಗಾಳದ ಡೈಮಂಡ್ ಹಾರ್ಬರ್ ವರೆಗಿನ ಒಂದು 40 ಮೈಲು ಅಗಲದ ಪಟ್ಟಿಯಲ್ಲಿ ಸಾವಿರಾರು ಜನರು ದೇಶ-ವಿದೇಶಗಳಿಂದ ಬಂದ ನೂರಾರು ವಿಜ್ಞಾನಿಗಳು ಪೂರ್ಣ ಸೂರ್ಯಗ್ರಹಣವನ್ನು 'ಕಣ್ಣಾರೆ' ಕಂಡರು; ದೇಶದ ಉಳಿದೆಡೆ ಅಪೂರ್ಣ ಸೂರ್ಯಗ್ರಹಣವನ್ನು 'ಕಣ್ಣಾರೆ' ಕಂಡರು. ದೇಶದ ವಿಜ್ಞಾನ ಜನಾಂದೋಲನ ಒದಗಿಸಿದ ವಿಶೇಷ ಕನ್ನಡಸಲು ಜನ ಎಲ್ಲೆಡೆಯಿಂದ ಜಾತ್ರೆಯಂತೆ ಸೇರಿದ್ದರು. ಪೂರ್ಣ ಸೂರ್ಯಗ್ರಹಣವಾದೊಡನೆ ಬೀದಿ ಬೀದಿಗಳಲ್ಲಿ ಪಟಾಕಿ ಸದ್ದು ಕೇಳಿಬಂತು. ಜನ ಹಾಡಿ ಕುಣಿದರು.

ಮತಾಂಧರು ಹೆದರಿಸಿದರೂ, ವಿಜ್ಞಾನಿಗಳೆಂದು ಕೆಲವು ಅರೆಬೆಂದ ಜನ ಬೆದರಿಸಿದರೂ, ಸರಕಾರ ಮತ್ತು ನಮ್ಮ ದೇಶದ ವೈಜ್ಞಾನಿಕ ಸಮುದಾಯ ಜನಗಳಲ್ಲಿ ಆತ್ಮವಿಶ್ವಾಸ ಹಾಗೂ ವೈಜ್ಞಾನಿಕ ಚಿಂತನೆಯನ್ನು ಪ್ರೋತ್ಸಾಹಿಸಿ ಈ ಅಮೋಘ ಪ್ರಾಕೃತಿಕ ಘಟನೆಯನ್ನು ನೋಡುವಂತಹ ವಾತಾವರಣ ನಿರ್ಮಿಸುವಲ್ಲಿ ವಿಫಲವಾದರೂ ಕೂಡಾ ರಾಷ್ಟ್ರೀಯ ವಿಜ್ಞಾನಗಳಿಸಲಾಗದ್ದನ್ನು ದೂರದರ್ಶನ ಪ್ರಸಾರದಲ್ಲಿ ಡೈಮಂಡ್ ಹಾರ್ಬರ್‌ನಲ್ಲಿ ಗ್ರಹಣ ವೀಕ್ಷಿಸುತ್ತಿದ್ದ ವಿಜ್ಞಾನಿಯೊಬ್ಬರು ಈ ಸಂದರ್ಭದಲ್ಲಿ ನೆನಪಿಸಿಕೊಂಡರು. ಆದರೂ ಆಗ ಕೋಮುವಾದಿಗಳ ತಂತ್ರಕ್ಕೆ ಸಾವಿರಾರು ಜನ ಮಾರುಹೋದಂತೆ ಗ್ರಹಣದ ವೇಳೆ ಬೆಂಗಳೂರಿನಂತಹ ನಗರಗಳಲ್ಲಿನ ನಿರ್ಜನ ಬೀದಿಗಳು (ಕರ್ಫ್ಯೂ ಹೇರಿದಂತಹ ವಾತಾವರಣ!), ಗ್ರಹಣ ಬಿಟ್ಟ ಮೇಲೆ 10 ಲಕ್ಷಮಂದಿ ಕುರುಕ್ಷೇತ್ರದಲ್ಲಿ ಮುಳುಗು ಹಾಕಿ "ಶುದ್ಧ"ರಾದ ಸುದ್ದಿ ಈ ಹೋರಾಟ ಇನ್ನೂ ಸಾಗಬೇಕಾದ ಹಾದಿಯೆಷ್ಟು ಎಂದೂ ತೋರಿಸಿ ಕೊಟ್ಟಿದೆ.

ಬೆಂಗಳೂರಿನಲ್ಲಿ ಅ. 24ರಂದು ಬೆಳಿಗ್ಗೆ 8.15ರಿಂದ 8.20ರ ನಡುವೆ ಆಗಸದಲ್ಲಿ ಕಂಡುಬಂದ ದೃಶ್ಯ (ಕೃಪೆ: ಪ್ರಜಾವಾಣಿ)



ಪಶ್ಚಿಮ ಬಂಗಾಳದಲ್ಲಿ ವ್ಯಾಪಕ ಪ್ರಚಾರ

ಪಶ್ಚಿಮ ಬಂಗಾಳದಲ್ಲಿ ಸೂರ್ಯಗ್ರಹಣ ಹಾಗೂ ಜನರು ತೋರಿದ ಆಸಕ್ತಿ ವಿಜ್ಞಾನಿಗಳನ್ನು ದಂಗು ಬಡಿಸಿತು. ದೂರದರ್ಶನದಲ್ಲಿ ಸೂರ್ಯಗ್ರಹಣದ ನೇರ ಪ್ರಸಾರವನ್ನು ನಿರ್ಮಿಸಿಕೊಟ್ಟ ಪ್ರಸಿದ್ಧ ವಿಜ್ಞಾನಿ ಯಶ್‌ಪಾಲ್ ಅದನ್ನು ವ್ಯಕ್ತಪಡಿಸಿದರು.

ಸೂರ್ಯಗ್ರಹಣ ಕುರಿತಾದ ಮೂಢನಂಬಿಕೆ, ಹಾಗೂ ದುರುದ್ದೇಶಪೂರಿತ ಅಪಪ್ರಚಾರಗಳ ವಿರುದ್ದ ಜನಜಾಗೃತಿ ನಡೆಸಲು "ಪಶ್ಚಿಮ ಬಂಗ್ ವಿಜ್ಞಾನ ಮಂಚ್" ಫೆಬ್ರವರಿ ತಿಂಗಳಿಂದಲೇ ಹಂತ-ಹಂತವಾಗಿ ಕಾರ್ಯಕ್ರಮ ಹಾಕಿಕೊಂಡಿತು. ಒಂದೇ ಸ್ಥಳದಿಂದ 420 ವರ್ಷಗಳಿಗೊಮ್ಮೆ ಮಾತ್ರ ವೀಕ್ಷಿಸಬಹುದಾದ ಈ ಅಪರೂಪದ ಘಟನೆಯ ಬಗ್ಗೆ ಸಾರ್ವಜನಿಕರಲ್ಲಿ ಉತ್ಸಾಹವನ್ನು ಜಾಗೃತಿಗೊಳಿಸಿತು.

ಒಂದೂವರೆ ಲಕ್ಷ ಇಂತಹ ಕನ್ನಡಕಗಳನ್ನು ಹಂಚಲಾಯಿತು. ಹಲವು ಲಕ್ಷ ಕರಪತ್ರಗಳನ್ನು ಮುದ್ರಿಸಿ ಎಲ್ಲಾ ಜಿಲ್ಲೆಗಳಲ್ಲಿ ಹಂಚಲಾಯಿತು. ಈ ಘಟನೆಯ ಬಗ್ಗೆ ಜನಸಾಮಾನ್ಯರ ನಡುವೆ ವೈಜ್ಞಾನಿಕ ಜಾಗೃತಿ ಮೂಡಿಸಲು ಪ್ರಸಿದ್ಧ ಜನ-ಪರ ವಿಜ್ಞಾನಿಯ ಹೆಸರಲ್ಲಿ ಮೇಘನಾದ ಸಾಹಾ ಜಾಥಾ ನಡೆಸಲಾಯಿತು. ಸೆಪ್ಟೆಂಬರ್ 16ರಂದು ಕಲ್ಕತ್ತೆಯ ದಕ್ಷಿಣದಲ್ಲಿರುವ ಡೈಮಂಡ್ ಹಾರ್ಬರ್‌ನಿಂದ ಆರಂಭವಾದ ಜಾಥಾ ಪೂರ್ಣ ಸೂರ್ಯಗ್ರಹಣ ಕಾಣಬರುವ ಐದು ಜಿಲ್ಲೆಗಳ ಮೂಲಕ ಹಾದು ಸೆ. 25ರಂದು ಬಿಹಾರವನ್ನು ಪ್ರವೇಶಿಸಿತು. ಅ. 10ರಂದು

ಗಿಸಿ ಜನ ಇವನ್ನೆಲ್ಲಾ ವೈಜ್ಞಾನಿಕವಾಗಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವಂತೆ ಬಿಜಿವಿಎಸ್‌ನ ರಾಜ್ಯ ಘಟಕದ ಕಾರ್ಯಕರ್ತರ ಶ್ರಮ ಸಾಕಷ್ಟು ಫಲಕೊಟ್ಟಿತು. ಅವರು ಹಂಚುತ್ತಿದ್ದ ವಿಶೇಷ ಕನ್ನಡಕಗಳಿಗೆ ಭಾರೀ ಬೇಡಿಕೆ ಇದರ ಒಂದು ದ್ಯೋತಕವಾಗಿತ್ತು. ರಾಜ್ಯದ ಹಲವೆಡೆ ಸಾರ್ವಜನಿಕ ಗ್ರಹಣ ವೀಕ್ಷಣೆಗೆ ವ್ಯವಸ್ಥೆ ಮಾಡಿದ್ದಲ್ಲದೆ ಸಾಮೂಹಿಕ ಉಪಾಹರದ ವ್ಯವಸ್ಥೆಯನ್ನು ಮಾಡಿಸಿ ಗ್ರಹಣದ ಸಂದರ್ಭದಲ್ಲಿ ಅನ್ನ ನೀರು ಮುಟ್ಟಬಾರದೆಂಬ ಮೂಢನಂಬಿಕೆಗೆ ಸಾರ್ವಜನಿಕ ಸವಾಲು ಬರುವಂತಾಯಿತು.

ವಿ.ಹೆಚ್.ಪಿ. ಯಾತ್ರೆಗಳು ಕೋಮುವಾದಿ ವಿಷ ಹರಡುತ್ತಿದೆ

-ಪೊಲಿಟ್ ಬ್ಯೂರೋ

ಈಗ ವಿ.ಹೆಚ್.ಪಿ. ದೇಶದ ವಿವಿಧ ಭಾಗಗಳಲ್ಲಿ ಸಂಘಟಿಸುತ್ತಿರುವ ಏಕಾತ್ಮತಾ ಯಾತ್ರೆಗಳನ್ನು ಬಹಿರಂಗವಾಗಿ ಕೋಮುವಾದೀ ವಿಷಕಾರಲು, ಅಲ್ಪಸಂಖ್ಯಾತರ ಮೇಲೆ ಸುಳ್ಳು ಆರೋಪ ಹಾಕಲು ಬಳಸಲಾಗುತ್ತಿದೆ. ದಿಲ್ಲಿಯ ಒಂದು ಸಾರ್ವಜನಿಕ ಸಭೆಯಲ್ಲಿ ಅಕ್ಟೋಬರ್ 8 ರಂದು ಮಾಡಿದ ಭಾಷಣಗಳು ಆರ್.ಎಸ್.ಎಸ್ ನೇತೃತ್ವದ ಕೂಟ ಬಿಜೆಪಿಗೆ ಚುನಾವಣಾ ಲಾಭ ತಂದುಕೊಡಲು ನಡೆಸಿರುವ ವಿಷಕಾರಿ ಅಪಪ್ರಚಾರದ ಒಂದು ಸೂಚನೆ ನೀಡುತ್ತವೆ. ರಾಜ್ಯ ಸರಕಾರಗಳು ದೇಶದ ಕಾನೂನುಗಳ ಪ್ರಕಾರ ಇಂತಹ ಕೋಮುವಾದಿ ಭಾಷಣಗಳನ್ನು ತಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಕರೆ ನೀಡಿದೆ. ಕೋಮು ಗಲಭೆಗಳು, ಗಂಭೀರ ಪರಿಸ್ಥಿತಿಗಳು ಭುಗಿಲೇಳದಂತೆ ನೋಡಿಕೊಳ್ಳಲು ವಿಶೇಷ ಜಾಗರೂಕತೆ ವಹಿಸಬೇಕು ಎಂದು ಅದು ಒತ್ತಾಯಿಸಿದೆ.

ಕೇಂದ್ರದಲ್ಲಿ ಒಂದು ಹಿಂದೂ-ಪರ ಸರ್ಕಾರ ಸ್ಥಾಪಿಸಿ ಅಯೋಧ್ಯೆ, ಕಾಶಿ, ಮಥುರಾಗಳ ವಿವಾದಿತ ಸ್ಥಳಗಳಲ್ಲಿ ದೇವಸ್ಥಾನ ಕಟ್ಟಲು ಅನುವು ಮಾಡಿಕೊಡಬೇಕೆಂಬ ಕರೆಯೊಂದಿಗೆ ಯಾತ್ರೆಗಳನ್ನು ನಡೆಸಲಾಗುತ್ತಿದೆ. ಸುಪ್ರೀಂ ಕೋರ್ಟಿನ ನಿರ್ಣಯ ಹಾಗೂ ಧಾರ್ಮಿಕ ಪೂಜಾಸ್ಥಾನಗಳನ್ನು ಕುರಿತಾದ ಕಾನೂನಿಗೆ ಸವಾಲೊಡ್ಡಿ ಈ ಕರೆಗಳನ್ನು ನೀಡಿದ 'ಹಿಂದೂ-ಸಮ್ಮೇಳನ'ದಲ್ಲಿ ದಿಲ್ಲಿ ಮುಖ್ಯಮಂತ್ರಿ ಭಾಗವಹಿಸಿದುದನ್ನು ಪೊಲಿಟ್ ಬ್ಯೂರೋ ಖಂಡಿಸಿದೆ.

ನೇಪಾಳ ದೊರೆಗೇನು ಕೆಲಸ

ಆಶ್ಚರ್ಯದ ಒಂದು ಸಂಗತಿಯೆಂದರೆ ಇಂತಹ ಒಂದು ಯಾತ್ರೆಯನ್ನು ಖಾಟ್ಮಂಡುವಿನಲ್ಲಿ ನೇಪಾಳದ ದೊರೆ ಉದ್ಘಾಟಿಸಿದ್ದಾರೆ. ಒಂದು ನೆರೆ ದೇಶದ ಮುಖ್ಯಸ್ಥ ಒಂದು ಜಾತ್ಯಾತೀತ ಪ್ರಭುತ್ವದಲ್ಲಿ 'ಹಿಂದೂ-ಪರ' ಸರಕಾರ ಸ್ಥಾಪಿಸುವ ರಾಜಕೀಯ ಗುರಿಯುಳ್ಳ ಒಂದು ಕಾರ್ಯಕ್ರಮದೊಡನೆ ಸಂಬಂಧವಿಟ್ಟುಕೊಂಡಿರುವುದು ಅತ್ಯಂತ ಆಕ್ಷೇಪಣೀಯ ಎಂದು ಪೊಲಿಟ್ ಬ್ಯೂರೋ ಹೇಳಿದೆ. ಅಕ್ಟೋಬರ್ 20ರಂದು ನಾಗಪುರದಲ್ಲಿ ನಡೆಯುವ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಲೂ ಕೂಡಾ ನೇಪಾಳ ದೊರೆಯನ್ನು ಆಹ್ವಾನಿಸಲಾಗಿದೆಯೆಂತೆ. ಈ ಯಾತ್ರೆಯೊಂದಿಗೆ ನೇಪಾಳ ದೊರೆಯ ಈ ಸಂಬಂಧದ ಬಗ್ಗೆ ಭಾರತ ಸರಕಾರ ತನ್ನ ಅಸಂತೋಷವನ್ನು ತಿಳಿಸಬೇಕು ಹಾಗೂ ಆತ ನಾಗಪುರ ಸಮಾರಂಭದಲ್ಲಿ ಭಾಗವಹಿಸಬಾರದೆಂದು ಆತನನ್ನು ಕೇಳಬೇಕು ಎಂದು ಪೊಲಿಟ್ ಬ್ಯೂರೋ ಆಗ್ರಹಪಡಿಸಿದೆ.

ಚೀಣೀ ಕ್ರಾಂತಿಯ ವಾರ್ಷಿಕೋತ್ಸವ

ಸಿಪಿಐ(ಎಂ) ಕೇಂದ್ರ ಸಮಿತಿ ಅಭಿನಂದನೆ

ಇದೇ ಅಕ್ಟೋಬರ್ 1ರಂದು ಚೀಣಾ ತನ್ನ ಕ್ರಾಂತಿಯ 46ನೇ ವಾರ್ಷಿಕೋತ್ಸವ ಆಚರಿಸಿತು. ಈ ಸಂದರ್ಭದಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಚೀಣೀ ಜನತೆಗಳಿಗೂ ಕ್ರಾಂತಿಗೆ ನೇತೃತ್ವ ನೀಡಿದ ಚೀಣಾ ಕಮ್ಯುನಿಸ್ಟ್ ಪಕ್ಷಕ್ಕೆ ಹಾರ್ದಿಕ ಶುಭಾಶಯ ಕಳಿಸಿದೆ.

ಚೀಣೀ ಕ್ರಾಂತಿ 20ನೇ ಶತಮಾನದ ಒಂದು ಅತ್ಯಂತ ಪ್ರಮುಖ ಘಟನೆಗಳಲ್ಲೊಂದು 1917ರಲ್ಲಿ ಅಕ್ಟೋಬರ್ ಕ್ರಾಂತಿ, 1945 ರಲ್ಲಿ ಫ್ಯಾಸಿಸಂ ಸೋಲಿನ ನಂತರ ಚೀಣೀ ಕ್ರಾಂತಿಯ ಯಶಸ್ಸು ಮಾನವಕುಲದ ಐದನೇ ಒಂದು ಭಾಗವನ್ನು ಸಾಮ್ರಾಜ್ಯಶಾಹಿಯಿಂದ ಮುಕ್ತಗೊಳಿಸಿ ವಿಶ್ವದ ರಾಜಕೀಯ ಶಕ್ತಿಗಳ ಬಲಾಬಲದಲ್ಲೇ ಕ್ರಾಂತಿಕಾರಿ ಬದಲಾವಣೆ ಆರಂಭಿಸಿತು. ವಿಶ್ವಾದ್ಯಂತ ವಸಾಹತುಗಳಲ್ಲಿ ವಿಮೋಚನಾ ಹೋರಾಟಗಳಿಗೆ, ಶೋಷಿತರ ಕ್ರಾಂತಿಕಾರಿ ಹೋರಾಟಗಳಿಗೆ ಹೊಸ ಸ್ಫೂರ್ತಿ ತುಂಬಿತು.

ಈ 45 ವರ್ಷಗಳಲ್ಲಿ ಚೀಣೀ ಜನತೆ ಚೀಣಾ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಸಮಾಜವಾದ ಕಟ್ಟುವಲ್ಲಿ ಹಲವು ಏಳುಬೀಳುಗಳನ್ನು ಕಂಡಿದ್ದಾರೆ 1978ರಲ್ಲಿ ಅಂಗೀಕರಿಸಿದ ಸುಧಾರಣೆಗಳು ಸರ್ವತೋಮುಖ ಅಭಿವೃದ್ಧಿ ತಂದಿದೆ. ಈಗ ಅವು ಒಂದು 'ಸಮಾಜವಾದೀ ಮಾರುಕಟ್ಟೆ ಆರ್ಥಿಕ' ಸ್ಥಾಪಿಸುವ ಕೆಲಸದಲ್ಲಿದ್ದಾರೆ. ಚೀಣೀ ಆರ್ಥಿಕ ದಾಪುಗಾಲಿಟ್ಟು ಸಾಗಿದೆ. ಈ ಸಂದರ್ಭದಲ್ಲಿ ಮೂಡಿಬರುತ್ತಿರುವ ಹೊಸ ಸಮಸ್ಯೆಗಳು, ತೊಂದರೆಗಳನ್ನು ಎದುರಿಸುತ್ತಿದ್ದಾರೆ.

ಚೀಣಾ ಜನತಾ ಗಣತಂತ್ರದಲ್ಲಿ ಸಮಾಜವಾದ ಕಟ್ಟುವ ತಮ್ಮ ಪ್ರಯತ್ನಗಳಲ್ಲಿ ಚೀಣೀ ಜನತೆಗೆ, ಚೀಣೀ ಕಮ್ಯುನಿಸ್ಟ್ ಪಕ್ಷಕ್ಕೆ ಯಶಸ್ಸು ದೊರೆಯಲಿ ಎಂದು ಸಿಪಿಐ(ಎಂ)ನ ಶುಭಾಶಯ ಸಂದೇಶ



-ವಿಶ್ವ

ಸರಕಾರ ಉಳಿಯಿತು ಮಾನ ಹೋಯಿತು!

ಗುಜರಾತಿನ ರಾಜಕೀಯ ವಿದ್ಯಾಮಾನಗಳಿಗೆ ಸಂಬಂಧಿಸಿದ ಒಂದು ಪ್ರತಿಕ್ರಿಯೆ ಇದು. ಹೀಗೆಂದು ಹೇಳಿದವರು ಬೇರೆ ಯಾರೂ ಅಲ್ಲ, ಸ್ವತಃ ಆಡಳಿತ ಬಿಜೆಪಿಯ ಮುಖಂಡರೊಬ್ಬರು. ಕೇಶುಬಾಯಿ ಪಟೇಲ್ ನೇತೃತ್ವದ ಗುಜರಾತ್ ಸಚಿವ ಸಂಪುಟ ಭಿನ್ನಮತೀಯರ ಸವಾಲಿನಿಂದ ಅಪಾಯವನ್ನು ಎದುರಿಸುತ್ತಿತ್ತು. ಸಂಸತ್ ಸದಸ್ಯ ಶಂಕರ್ ಸಿಂಗ್ ವಘೇಲಾ ನೇತೃತ್ವದಲ್ಲಿ ಹಲವು ಶಾಸಕರು ನಾಯಕತ್ವದ ವಿರುದ್ಧ ಬಂಡೆದಿದ್ದರು. ಇದು ಆ ರಾಜ್ಯ ಮಾತ್ರವಲ್ಲದೆ, ಇಡೀ ದೇಶದಲ್ಲಿ ಬಿಜೆಪಿ ವಲಯದಲ್ಲಿ ನಡುಕವನ್ನು ಹುಟ್ಟಿಸಿತು.

ಬಿಜೆಪಿ ಕೇಂದ್ರ ನಾಯಕತ್ವ ಭಾರೀ ಸರ್ಕಸ್ ನಡೆಸಿ ಸರಕಾರ ಉರುಳದಂತೆ ರಾಜಿ ಸೂತ್ರವೊಂದನ್ನು ರೂಪಿಸಿತು. ಇದರ ಅನ್ವಯ, ಅಕ್ಟೋಬರ್ 7 ರಂದು ವಿಧಾನ ಸಭೆಯಲ್ಲಿ ನಡೆದ ವಿಶ್ವಾಸಮತ ಪರೀಕ್ಷೆಯಲ್ಲಿ ವಘೇಲಾ ಬೆಂಬಲಿಗರೂ ಪಟೇಲ್ ಸಂಪುಟಕ್ಕೆ ಬೆಂಬಲ ನೀಡಿದರು. ಇದರಿಂದಾಗಿ ಸರಕಾರ ಉಳಿಯಿತು.

ಕೇಶು ಭಾಯಿ ಪಟೇಲ್ ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟುಕೊಡಬೇಕೆನ್ನುವುದು ಸೂತ್ರದ ಇನ್ನೊಂದು ಅಂಶವಾಗಿತ್ತು. ಪಟೇಲ್ ಮತ್ತು ವಘೇಲಾ ಬಿಟ್ಟು ಮೂರನೇ ವ್ಯಕ್ತಿಯೊಬ್ಬರನ್ನು ಹೊಸ ಮುಖ್ಯಮಂತ್ರಿಯನ್ನಾಗಿ ಮಾಡುವ ನಿರ್ಧಾರವನ್ನು ಕೈಗೊಳ್ಳಲಾಯಿತು.

ಭಿನ್ನಮತೀಯರು ಮರಳಿ ಬರುವಂತೆ ಮಾಡಿ ಸರಕಾರವನ್ನು ಉಳಿಸಿಕೊಂಡಿದ್ದರೂ ಇದು ಕಾಯಂ ಪರಿಹಾರ ಅಲ್ಲ ಎಂಬುದು ಅಲ್ಲಿ ವಿದ್ಯಾಮಾನಗಳಿಂದ ತಿಳಿದು ಬರುತ್ತದೆ. ಭಿನ್ನಮತ ಬಗೆಹರಿದಿರುವಂತೆ ಕಾಣುತ್ತಿಲ್ಲ.

ಮುಖ್ಯಮಂತ್ರಿ ಸ್ಥಾನದಿಂದ ಪಟೇಲರನ್ನು ತೆಗೆದರೆ ತಾವು ಸಾಮೂಹಿಕ ರಾಜಿನಾಮೆ ನೀಡುವುದಾಗಿ ಪಕ್ಷದ ಕೆಲವು ರಾಜ್ಯ ಮುಖಂಡರು ಹಲವು ಶಾಸಕರು ಹಾಗೂ ಸಂಸತ್ ಸದಸ್ಯರು ಬೆದರಿಕೆ ಹಾಕಿದ್ದಾರೆ. ಹೊಸ ನಾಯಕನನ್ನು ಚುನಾಯಿಸಲು ನಿಗದಿಪಡಿಸಿದ ಸಭೆ ಮತ್ತೆಮತ್ತೆ ಮುಂದೂಡಲ್ಪಟ್ಟಿದೆ. ಕೊನೆಗೂ ಹೊಸ ಮುಖ್ಯಮಂತ್ರಿ ಆರಿಸಲ್ಪಟ್ಟಿದ್ದಾರೆ. ಹೋದ ಮಾನ ವಾಪಸಂತೂ ಬರುವಂತಿಲ್ಲ.

ಬೆದರಿಕೆಯಿಂದ ಪರಿಹಾರ

ಗುಜರಾತಿನ ಬಿಕ್ಕಟ್ಟಿನ ಉದ್ದಕ್ಕೂ ಪಕ್ಷದಲ್ಲಿ ಭಾರೀ ಗೊಂದಲ ಇದ್ದದ್ದು ಅಲ್ಲಿನ ವಿದ್ಯಾಮಾನದ ಮೇಲೆ. ಪ್ರತಿಕ್ಷಣದ ನಿಗಾ ಇರಿಸಿದವರಿಗೆ ಸ್ಪಷ್ಟವಾಗಿ ಗೋಚರವಾಗುತ್ತಿತ್ತು. ಇನ್ನು ಈ ಪರಿಹಾರ ಸೂತ್ರ ರೂಪುಗೊಂಡ ರೀತಿ ಮಾತ್ರ ಒಂದು 'ಶಿಸ್ತು ಬದ್ಧ' ರಾಜಕೀಯ ಪಕ್ಷಕ್ಕೆ ಮಾನ ತರುವಂಥ ವಿಷಯವಲ್ಲ.

ಭಿನ್ನಮತೀಯರು ಪಕ್ಷಕ್ಕೆ ಮರಳಿ ಬಿಜೆಪಿ ಸರಕಾರವನ್ ಉಳಿಸದಿದ್ದರೆ ತಾವು 'ಆಮರಣ ಉಪವಾಸ ಸತ್ಯಾಗ್ರಹ' ನಡೆಸುವುದಾಗಿ ಹೈಕಮಾಂಡ್ ದೂತ ಅಟಲ್ ಬಿಹಾರಿ ವಾಜಪೇಯಿ ಬೆದರಿಕೆ ಹಾಕಿದ್ದರು. ಭಿನ್ನರ ಬಣ ತಣ್ಣಗಾಗಲು ಇದು ಪ್ರಮುಖ ಕಾರಣ ಎಂದು ಹೇಳಲಾಗುತ್ತಿದೆ.

ಅಭಿವೃದ್ಧಿ ಕಾರ್ಯ ಸ್ಥಗಿತ

ಗುಜರಾತಿನ ಆಳುವ ಬಿಜೆಪಿಯೊಳಗಿನ ಆಂತರಿಕ ಕಚ್ಚಾಟದಿಂದಾಗಿ ರಾಜ್ಯದ ಅಭಿವೃದ್ಧಿ ಕಾರ್ಯಗಳು ಸಂಪೂರ್ಣವಾಗಿ ಸ್ಥಗಿತಗೊಂಡಿವೆ.

ಪಂಜಾಬ್ : ಕಮ್ಯುನಿಸ್ಟರ ಮಹತ್ವದ ಸಮಾವೇಶ

ಪಂಜಾಬ್‌ನಲ್ಲಿ ಶಾಶ್ವತ ಶಾಂತಿ ನೆಲೆಸುವಂತೆ ಮಾಡಲು ಪಂಜಾಬ್ ಸಮಸ್ಯೆಗೆ ರಾಜಕೀಯ ಪರಿಹಾರವನ್ನು ಕಂಡುಹಿಡಿಯುವಂತೆ ಪಂಜಾಬ್ ರಾಜ್ಯ ಮಟ್ಟದ ಸಮಾವೇಶವೊಂದು ಕರೆಕೊಟ್ಟಿದೆ. ಸಿಪಿಐ(ಎಂ) ಮತ್ತು ಸಿಪಿಐ ರಾಜ್ಯ ಘಟಕಗಳು ಸಂಯುಕ್ತವಾಗಿ ಈ ಸಮಾವೇಶವನ್ನು ವ್ಯವಸ್ಥೆಗೊಳಿಸಿದ್ದರು.

ಸೆಪ್ಟೆಂಬರ್ 20 ರಂದು ಜಲಂಧರ್‌ನಲ್ಲಿ ನಡೆದ ಸಮಾವೇಶ ದೇಶದ ಏಕತೆ ಹಾಗೂ ಸಮಗ್ರತೆಯ ರಕ್ಷಣೆಗಾಗಿ ವಿಶಾಲ ತಳಹದಿಯ ಜಂಟಿ ಆಂದೋಲನವನ್ನು ಆರಂಭಿಸಲು ಕೂಡ ಕರೆ ನೀಡಿತು.

ಪಂಜಾಬ್ ಸಮಸ್ಯೆಯನ್ನು ಮೂರು ದೃಷ್ಟಿಯಿಂದ, ಅಂದರೆ ರಾಜಕೀಯ, ಆಡಳಿತಾತ್ಮಕ ಹಾಗೂ ಸೈದ್ಧಾಂತಿಕ ದೃಷ್ಟಿಕೋನದಿಂದ ನೋಡುವಂತೆ ಸಮಾವೇಶ ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡಿತು.

ಎರಡೂ ಪಕ್ಷಗಳ 2000ಕ್ಕೂ ಹೆಚ್ಚು ಕಾರ್ಯಕರ್ತರು ಈ ಮಹತ್ವದ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರಿಕಿಷನ್ ಸಿಂಗ್ ಸುರ್ಜಿತ್, ಸಿಪಿಐ ಮುಖಂಡ ಸತ್ಪಾಲ್ ದಂಗ್, ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಮಂಗತ್ ರಾಮ್ ಪಸ್ಲಾ, ರಾಜ್ಯ ಸಿಪಿಐ ಕಾರ್ಯದರ್ಶಿ ಜೋಗಿಂದರ್ ದಯಾಳ್ ಮೊದಲಾದವರು ಸಮಾವೇಶದ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು.

ನರಸಿಂಹರಾವ್ ಸರಕಾರದ ದೇಶ ವಿರೋಧಿ ಜನವಿರೋಧಿ ಆರ್ಥಿಕ ಹಾಗೂ ಕೈಗಾರಿಕಾ ನೀತಿಗಳು ಮತ್ತು ತಲೆಯೆತ್ತುತ್ತಿರುವ ಭಯೋತ್ಪಾದನೆ ವಿರುದ್ಧ ನಡೆಸಬೇಕಾದ ಹೋರಾಟದ ಕಾರ್ಯಕ್ರಮಗಳನ್ನು ಸಮಾವೇಶದಲ್ಲಿ ರೂಪಿಸಲಾಯಿತು.

ದೇಶದ ಸಾರ್ವಭೌಮತೆ, ಏಕತೆ ಮತ್ತು ಸಮಗ್ರತೆಯನ್ನು ಉಳಿಸುವ ಐತಿಹಾಸಿಕ ಕರ್ತವ್ಯ ಹಾಗೂ ನಿರ್ವಹಿಸುವಲ್ಲಿ ಎಲ್ಲಾ ಜಾತ್ಯಾತೀತ ದೇಶ ಪ್ರೇಮಿ ಶಕ್ತಿಗಳು ಮುಂದೆ ಬರುವಂತೆ ಸಿಪಿಐ(ಎಂ) ಮತ್ತು ಸಿಪಿಐ ಕರೆ ನೀಡಿದವು.

ಮಹಾರಾಷ್ಟ್ರದಲ್ಲಿ ಎಡರಂಗ ರಚನೆ

ಇಡೀ ದೇಶದ ಜಾತ್ಯಾತೀತ ಹಾಗೂ ಎಡಶಕ್ತಿಗಳಿಗೆ ಒಂದು ಸಂತಸದ ಸಮಾಚಾರ, ಮಹಾರಾಷ್ಟ್ರದಿಂದ. ಆ ರಾಜ್ಯದಲ್ಲಿ ಈಚೆಗೆ ಎಡರಂಗವೊಂದು ಉದಯವಾಗಿದೆ. ರಾಜ್ಯ ಇತ್ತೀಚಿನ ರಾಜಕೀಯ ವಿದ್ಯಾಮಾನಗಳ ಹಿನ್ನೆಲೆಯಲ್ಲಿ ಈ ರಂಗ ರಚನೆ ಮಹತ್ವದ್ದಾಗಿದೆ.

ರೈತರು ಹಾಗೂ ಕಾರ್ಮಿಕರ ಪಕ್ಷ (ಪಿ.ಡಬ್ಲ್ಯು.ಪಿ.), ಸಿಪಿಐ(ಎಂ) ಮತ್ತು ಸಿಪಿಐ ಈ ರಂಗದಲ್ಲಿವೆ.

ರಂಗ ಹಲವು ಕಾರ್ಯಕ್ರಮಗಳನ್ನು ರೂಪಿಸಿದ್ದು ಆ ಪೈಕಿ ಒಂದು ಕಾರ್ಯಕ್ರಮ ಸೆಪ್ಟೆಂಬರ್ 27 ರಂದು ನಡೆದಿದೆ. ಭಗತ್ ಸಿಂಗ್ ಜನ್ಮ ದಿನವಾದ ಸೆ. 27ರಂದು ರಾಜ್ಯದಾದ್ಯಂತಜಿಲ್ಲೆ ಹಾಗೂ ತಾಲೂಕು ಮಟ್ಟಗಳಲ್ಲಿ ಪ್ರದರ್ಶನಗಳನ್ನು ನಡೆಸಲು ರಂಗ ಕರೆ ಕೊಟ್ಟಿತ್ತು. ಅದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಆ ದಿನ ಬಹುತೇಕ ಜಿಲ್ಲೆಗಳಲ್ಲಿ ಪ್ರದರ್ಶನಗಳು ಯಶಸ್ವಿಯಾಗಿ ನಡೆದವು. ಜನರೂ ಉತ್ತಮ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಅಕ್ಟೋಬರ್ 17 ಮತ್ತು 29ರಂದು ಕೊಲ್ಹಾಪುರ, ನಾಸಿಕ, ಔರಂಗಾಬಾದ್, ತನವೇಲ್, ನಾಗಾಪುರಮತ್ತು ವಾರ್ಧಾದಲ್ಲಿ ಪ್ರಾದೇಶಿಕ ಮಟ್ಟದಲ್ಲಿ ಕಾರ್ಯಕರ್ತರ ಸಮಾವೇಶಗಳನ್ನು ನಡೆಸಲು ನಿರ್ಧರಿಸಲಾಗಿದೆ. ಇದು ಎರಡನೇ ಹಂತದ ಕಾರ್ಯಕ್ರಮ.

ಮೂರನೇ ಕಾರ್ಯಕ್ರಮವಾಗಿ ನವೆಂಬರ್ ಕೊನೆ ವಾರದಲ್ಲಿ ಮುಂಬಯಿಯಲ್ಲಿ ರಾಜ್ಯ ಮಟ್ಟದ ಬೃಹತ್ ಎಡಪಂಥೀಯ ರ್‍ಯಾಲಿಯನ್ನು ನಡೆಸಲಾಗುವುದು.

ಆಂಧ್ರ ಪ್ರದೇಶದಲ್ಲಿ ಇನ್ನೊಂದು ಅಂಕ

ಬಂಡವಾಳಶಾಹಿ ಪಕ್ಷಗಳ ಅನಿಷ್ಟ ಗುಣದ ಬಗ್ಗೆ ಗುಜರಾತ್ ವಿದ್ಯಾಮಾನದ ಸಂದರ್ಭದಲ್ಲಿ ಹೇಳಲಾಗಿದೆಯಷ್ಟೆ. ಅದನ್ನು ಸಾಬೀತುಪಡಿಸುವಂಥ ಬೆಳವಣಿಗೆ ಆಂಧ್ರಪ್ರದೇಶದಲ್ಲಿ ವರದಿಯಾಗಿದೆ. ಅಲ್ಲಿನ ತೆಲುಗು ದೇಶಂ ಪಕ್ಷ ಮತ್ತೆ ಬಿಕ್ಕಟ್ಟಿನಲ್ಲಿದೆ.

ಕೇವಲ ಸುಮಾರು ಒಂದುವರೆ ತಿಂಗಳ ಹಿಂದೆ ತೆಲುಗುದೇಶಂ ಅಧ್ಯಕ್ಷ ಹಾಗೂ ಮುಖ್ಯಮಂತ್ರಿ ಎನ್.ಟಿ. ರಾಮರಾವ್ ವಿರುದ್ಧ ಬಂಡಾಯದ ಬಾವುಟವೆತ್ತಿದವರಲ್ಲಿ ಅವರ ಅಳಿಯಂದಿರಾದ ಚಂದ್ರಬಾಬು ನಾಯ್ಡು ಮತ್ತು ಡಿ.ವೆಂಕಟೇಶ್ವರರಾವ್ ಅವರನ್ನು ಉಲ್ಲೇಖಿಸಲೇ ಬೇಕು. ಆ ಪೈಕಿ ನಾಯ್ಡು ಮಾವನ ಸ್ಥಾನಕ್ಕೆ ಬಂದರು.

ಭಾನುವಾರ ಅಂದರೆ ಅಕ್ಟೋಬರ್ 8 ರಂದು ನಾಯ್ಡು ಸಂಪುಟವನ್ನು ವಿಸ್ತರಿಸಲಾಗಿತ್ತು, ವಿಸ್ತರಣೆಯಲ್ಲಿ ಸಚಿವ ಸಂಪುಟದಲ್ಲಿ ಸ್ಥಾನ ಸಿಗದಿರುವ ಅತೃಪ್ತರು ಸೇರಿದಂತೆ ಹಲವಾರು ಶಾಸಕರು ಮತ್ತು ಮುಖಂಡರು ಚಂದ್ರಬಾಬು ನಾಯ್ಡು ನಾಯಕತ್ವವನ್ನು ಧಿಕ್ಕರಿಸಿ ಮತ್ತೆ ರಾಮರಾವ್ ಪಾಳಯವನ್ನು ಸೇರಿದರು.

ಹೀಗೆ ಮರಳಿ ಹೋದವರಲ್ಲಿ ತೆಲುಗುದೇಶಂ ಸಂಸದೀಯ ಪಕ್ಷದ ನಾಯಕರೂ ಆಗಿರುವ ವೆಂಕಟೇಶ್ವರ ರಾವ್ ಕೂಡಾ ಸೇರಿದ್ದಾರೆ. ಒಟ್ಟು 16 ಶಾಸಕರು ಪುನಃ ಎನ್.ಟಿ.ಆರ್. ಬಣಕ್ಕೆ ಹೋಗಿದ್ದಾರೆ.

ಈ ಭಿನ್ನಮತ (ಪಕ್ಷಾಂತರ)ದಿಂದಾಗಿ ತಮ್ಮ ಸರಕಾರ ಅಪಾಯವಿಲ್ಲದೆ ಎಂದು ನಾಯ್ಡು ಹೇಳಿಕೊಂಡಿದ್ದಾರೆ. ಏನೇ ಇರಲಿ ಈಚಿನ ವಿದ್ಯಾಮಾನದಿಂದ ಆಂಧ್ರ ರಾಜಕೀಯ ರಂಗಕ್ಕೆ ಹೊಸ ತಿರುವು ಬಂದಿದೆ. ಈ ಅಂಕದ ನಂತರ ಇನ್ನೇನು ಎಂಬುದುನ್ನು ಕಾದುನೋಡಬೇಕು.

ಪಿಡಿಪಿ-ಬಿಜೆಪಿ ಜೊತೆ ಕಾಂಗ್ರೆ ಮೈತ್ರಿ

ಕೇರಳದ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಪ್ರಮುಖ ಪ್ರತಿಪಕ್ಷವಾದ ಸಿಪಿಐ(ಎಂ) ನೇತೃತ್ವದ ಎಡಪ್ರಜಾಸತ್ತಾತ್ಮಕ ರಂಗ (ಎಲ್.ಡಿ.ಎಫ್.) ಸ್ಪಷ್ಟ ಮೇಲುಗೈ ಸಾಧಿಸಿ ಆಳುವ ಸಂಯುಕ್ತ ಪ್ರಜಾಸತ್ತಾತ್ಮಕ ರಂಗ (ಯುಡಿಎಫ್)ದ ಪ್ರತಿಷ್ಠೆಯನ್ನು ಮಣ್ಣು ಮುಕ್ಕಿಸಿದ್ದು ಈಗ ಇತಿಹಾಸ.

ಸೋಲನ್ನು ಸೋಲೆಂದು ಒಪ್ಪಿಕೊಳ್ಳದೆ ಅದಕ್ಕೆ ಇಲ್ಲಸಲ್ಲದ ನೆವಗಳನ್ನು ಯುಡಿಎಫ್ ಮುಂದೊಡ್ಡಿತ್ತು. ಅಬ್ದುಲ್ ಮದನಿಯ ಪಿ.ಡಿ.ಪಿ. ಮತ್ತು ಬಿಜೆಪಿಯೊಂದಿಗೆ ಎಲ್.ಡಿ.ಎಫ್. ಗುಪ್ತ ಮೈತ್ರಿ ಮಾಡಿಕೊಂಡಿತ್ತು ಎಂದು ಯು.ಡಿ.ಎಫ್. ಆರೋಪಿಸಿತ್ತು.

ವಾಸ್ತವವಾಗಿ ಕಾಂಗ್ರೆ ನೇತೃತ್ವದ ಯುಡಿಎಫ್ ಈ ಎರಡು ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದು 'ಬಹಿರಂಗ ರಹಸ್ಯ' ವಿಶೇಷವಾಗಿ ಚುನಾವಣೆಗಳ ನಂತರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರ ಆಯ್ಕೆ ವಿಚಾರದಲ್ಲಂತೂ ಇದು ಸ್ಪಷ್ಟವಾಗಿದೆ. ಇದಕ್ಕೆ ಹಲವಾರು ಉದಾಹರಣೆಗಳು ಇಲ್ಲಿದೆ.

ಕನಿಷ್ಠ ಮೂರು ಗ್ರಾಮಪಂಚಾಯತಿ ಸಮಿತಿಗಳ ಅಧ್ಯಕ್ಷರ ಆಯ್ಕೆಯಲ್ಲಿ ಯು.ಡಿ.ಎಫ್., ಪಿ.ಡಿ.ಪಿ. ಮತ್ತು ಬಿಜೆಪಿ ಮಧ್ಯೆ ಹೊಂದಾಣಿಕೆ ಏರ್ಪಟ್ಟಿತ್ತು. ಕೋಟ್ಟಾಯಂ ಜಿಲ್ಲೆಯ ಕುಮಾರ ನೆಲ್ಲೂರು ಗ್ರಾಮಪಂಚಾಯಿತಿಯಲ್ಲಿ ಎಲ್.ಡಿ.ಎಫ್.ಗೆ ಆರು, ಯು.ಡಿ.ಎಫ್.ಗೆ ಆರು ಮತ್ತು ಬಿಜೆಪಿಗೆ ಒಂದು ಪಿ.ಡಿ.ಪಿ.ಗೆ ಒಂದು ಸ್ಥಾನ ಲಭ್ಯವಾಗಿದೆ. ಅಧ್ಯಕ್ಷರ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಯುಡಿಎಫ್ ಅಭ್ಯರ್ಥಿಗೆ ಎಂಟು ಓಟುಗಳು ಸಿಕ್ಕವು. ಹಾಗದರೆ ಉಳಿದ ಎರಡು ಹೆಚ್ಚು ಮತಗಳು ಎಲ್ಲಿಂದ ಬಂದವು. ಪಿ.ಡಿ.ಪಿ. ಹಾಗೂ ಬಿಜೆಪಿಯದಲ್ಲವೇ ಅವು?

ಅದೇ ರೀತಿ, ಏರ್ನಾಕುಳಂ ಜಿಲ್ಲೆಯ ಕುರುಮಲ್ಲೂರು ಗ್ರಾಮ ಪಂಚಾಯಿತಿಯಲ್ಲಿ ಕೇವಲ ಎರಡು ಸ್ಥಾನಗಳನ್ನು ಗಳಿಸಿದ್ದ ಪಿಡಿಪಿಯ ಅಭ್ಯರ್ಥಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಯು.ಡಿ.ಎಫ್. ಬೆಂಬಲ ಕೊಟ್ಟಿದ್ದೇ ಇದಕ್ಕೆ ಕಾರಣ. ಕೊಟ್ಟಾಯಂ ಜಿಲ್ಲೆಯ ಏಮನಂ ಗ್ರಾಮ ಪಂಚಾಯತ್ ಸಮಿತಿಯಲ್ಲಿ ಬಿಜೆಪಿ ಬೆಂಬಲ ಕೊಟ್ಟಿದ್ದರಿಂದ ಅಧ್ಯಕ್ಷ ಸ್ಥಾನ ಯುಡಿಎಫ್ ಪಾಲಾಯಿತು.

ಕೆಲವು ದಾಖಲೆಗಳು

ಕೇರಳದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಕೆಲವು ದಾಖಲಾರ್ಹ ಅಂಶಗಳು.

ಸಿಪಿಐ(ಎಂ) ಅತ್ಯಂತ ಹೆಚ್ಚು ಮಹಿಳೆಯರನ್ನು ಚುನಾವಣೆ ಕಣಕ್ಕೆ ಇಳಿಸಿತ್ತು.

ಅತ್ಯಂತ ಕಡಿಮೆ ವಯಸ್ಸಿನವರೊಬ್ಬರು ಗ್ರಾಮಪಂಚಾಯಿತಿಯ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದಾರೆ. ಅವರೇ ಸಿಪಿಐ(ಎಂ)ನ ಪಿ.ಬೇಬಿ. ಸಿಪಿಐ(ಎಂ)ನವರೇ ಆದ ಎಂ.ಪಿ. ಶಾಲಿನಿ ಮುನ್ಸಿಪಾಲಿಟಿಯೊಂದರ ಅಧ್ಯಕ್ಷರಾಗಿದ್ದಾರೆ. ಇವೆರಡೂ ದಾಖಲೆಯಾಗಿದೆ.

ಐದು ಜಿಲ್ಲಾ ಪಂಚಾಯಿತಿಗಳ ಅಧ್ಯಕ್ಷರು ಸಿಪಿಐ(ಎಂ)ನವರಾಗಿದ್ದಾರೆ. ಆ ಪೈಕಿ ಮೂವರು ಮಹಿಳೆಯರು ಅವರೇ ಪಿ.ಕೆ. ಶ್ರೀಮತಿ (ಕಣ್ಣಾನೂರು), ಎಂ.ವಿ. ವಿಶಾಲಾಕ್ಷಿ (ತ್ರಿಶೂರು) ಮತ್ತು ಸುಜಾತಾ (ಅಲೆಪ್ಪಿ)

ದೇವದಾಸಿ ಪದ್ಧತಿಗೆ ಧಿಕ್ಕಾರದ ಕೂಗು

ದೇವದಾಸಿ ಪದ್ಧತಿ ಒಂದು ಅನಾಗರಿಕ ಪದ್ಧತಿ. ಅದು ಭಾರತದ ಸಂಸ್ಕೃತಿಯ ಮೇಲೆ ಒಂದು ಕಪ್ಪು ಚುಕ್ಕಿ ಇದ್ದಂತೆ ಇಂಥ ಕಳಂಕವನ್ನು ತೊಡೆದು ಹಾಕುವುದು ಸಮಾಜದ ಕರ್ತವ್ಯ.

ಆದರೆ ಪುರಿಯ ಪ್ರಖ್ಯಾತ ಜಗನ್ನಾಥ ದೇವಾಲಯದ ಆಡಳಿತ ಮಂಡಳಿ ಆಧುನಿಕ ಕಾಲದ ಅಗತ್ಯವನ್ನು ಕಡೆಗಣಿಸಿದೆ. ಅನಿಷ್ಟ ಪದ್ಧತಿಯನ್ನು ಉಳಿಸಿ ಮುಂದುವರಿಸಿಕೊಂಡು ಹೋಗಲು ಅದು ಸಜ್ಜಾಗಿ ನಿಂತಿದೆ.

ಇಡೀ ಜೀವನವನ್ನು 'ದೇವರ ಸೇವೆ'ಯಲ್ಲಿ ಕಳೆಯಲಿಕ್ಕೆಂದು ಪುರಿ ಜಗನ್ನಾಥ ದೇವಾಲಯದ ಆಡಳಿತ ಕಳೆದ ತಿಂಗಳು ಮಹಿಳೆಯರನ್ನು ಆಹ್ವಾನಿಸಿತು. ಐದು ಮಹಿಳೆಯರನ್ನು ಸಂದರ್ಶನಕ್ಕಾಗಿ ಕರೆದಿತ್ತು.

ಧರ್ಮದ ಹೆಸರಿನಲ್ಲಿ ಸ್ತ್ರೀಯರನ್ನು ದುರಾಚರಕ್ಕೆಳಸುವ ಈ ಕ್ರಮಕ್ಕೆ ಒರಿಸ್ಸಾದಾದ್ಯಂತ ಪ್ರತಿಭಟನೆ ವ್ಯಕ್ತವಾಯಿತು. ದೇವಾಲಯದ ಕ್ರಮವನ್ನು ಬೆಳಕಿಗೆ ತಂದು ಅದನ್ನು ವಿರೋಧಿಸುವಲ್ಲಿ ರಾಜ್ಯ ಸಿಪಿಐ(ಎಂ) ಘಟಕ ಮುಂಚೂಣಿಯಲ್ಲಿತ್ತು. ನಾನಾ ಎಡಪಂಥೀಯ ಹಾಗೂ ಪ್ರಗತಿ ಪರ ಸಂಘಟನೆಗಳು ಮಧ್ಯ ಯುಗದ ದುಷ್ಟ ಪದ್ಧತಿಯನ್ನು ಮುಂದುವರಿಸುವ ಜಗನ್ನಾಥ ಮಂದಿರದ ಆತುರವನ್ನು ಖಂಡಿಸಿದವು. ಸಿಪಿಐ(ಎಂ) ಉಪಕ್ರಮದಿಂದಾಗಿ ಜನ ಜಾಗೃತಿ ಉಂಟಾಯಿತು.

ದೇವಾಲಯದ ಆಡಳಿತ ಕಛೇರಿಯಲ್ಲಿ ವ್ಯವಸ್ಥೆಯಾಗಿದ್ದ ಸಂದರ್ಶನದ ಸಂದರ್ಭದಲ್ಲಿ ಪತ್ರಿಕಾ ಛಾಯಾಗ್ರಹಕರು ನೆರೆದಿದ್ದರಿಂದ ಅಲ್ಲಿ ಗೊಂದಲವುಂಟಾಯಿತು. ದೇವದಾಸಿಯರಾಗಲು ಮುಂದೆ ಬಂದಿದ್ದ ಐವರು ಹೆಂಗಸರೂ ಸಂದರ್ಶನದಲ್ಲಿ ಪಾಲ್ಗೊಳ್ಳದೆ ವಾಪಾಸಾದರು. (ಮಹಿಳೆಯರ ಫೋಟೋ ತೆಗೆಯುವುದಕ್ಕೆ ದೇವಾಲಯ ಸಿಬ್ಬಂದಿ ಅಡ್ಡಿ ಪಡಿಸಿದ್ದೆ ಗೊಂದಲ ಉಂಟಾಗಲು ಕಾರಣ.)

ಮೂರು ಕಾಸಿನ ಸಂಪಾದನೆ

'ನೀವು ಕೊಡುವ ಮೂರು ಕಾಸಿಗಾಗಿ ನಾವು ಜೀವನವಿಡೀ ದೇವದಾಸಿಯರಾಗಿ ಸೇವೆ ಸಲ್ಲಿಸಲು ಸಿದ್ಧರಿಲ್ಲ. ಬೇಕಿದ್ದರೆ ಅರೆಕಾಲಿಕ ಆಧಾರದಲ್ಲಿ ಈ ಸೇವೆಯನ್ನು ಸಲ್ಲಿಸುತ್ತೇವೆ - ಇದು ವಾಪಸಾಗುವ ಸಂದರ್ಭದಲ್ಲಿ ಆ ಐದು ಮಹಿಳೆಯರು ಹೇಳಿದ ಮಾತು.

ಪುರಿ ದೇವಾಲಯದಲ್ಲಿ ಈಗ ಇಬ್ಬರು ದೇವದಾಸಿಯರಿದ್ದಾರೆ. ಅವರಿಗೆ ತುಂಬಾ ಪ್ರಾಯವಾಗಿದೆ. ಅನಾರೋಗ್ಯದಿಂದ ನರಳುತ್ತಿದ್ದಾರೆ. ಎಲ್ಲಕ್ಕೂ ಮೇಲಾಗಿ ಅವರ ಬಡತನದ ಬೇಗೆಯಲ್ಲಿ ಬೇಯುತ್ತಿದ್ದಾರೆ.

ಈ ಕಷ್ಟ ಯಾರಿಗೂ ಬೇಡವಪ್ಪಾ ಎಂದು ದೇವದಾಸಿಯರಾಗಲು ಬಯಸಿದ ಹೆಂಗಸರಿಗೆ ಅವರು ಹೇಳಿ ಕಳುಹಿಸಿದ್ದಾರೆ. ಅವರು ಈ ಮಾತು ದೇವದಾಸಿಯರ ಸ್ಥಿತಿಗತಿಗೆ ಹಿಡಿದ ಕನ್ನಡಿಯಾಗಿದೆ.

ದೇವದಾಸಿ ಪದ್ಧತಿಯನ್ನು ರದ್ದುಪಡಿಸಿರುವುದರಿಂದ ಸಂಪ್ರದಾಯ ಹಾಗೂ ಸರಕಾರವೇ ಅನುಮೋದಿಸಿರುವ ದೇವಾಲಯದ ನಿಯಮದ ಉಲ್ಲಂಘನೆಯಾಗುತ್ತದೆ ಎಂದು ಪುರಿ ಜಗನ್ನಾಥ ದೇವಸ್ಥಾನದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಅಂದರೆ ಸಂಪ್ರದಾಯ ಹಾಗೂ ಕಾನೂನಿನ ಹೆಸರಿನಲ್ಲಿ ಅಸಹ್ಯವಾದ ಆಚರಣೆಯನ್ನು ಮುಂದುವರಿಸಬೇಕೆಂಬುದು ನಿಮ್ಮ ಬಯಕೆಯೇ? ಮಹಿಳೆಯ, ಹಾಗೂ ಒಟ್ಟಾರೆಯಾಗಿ ಸಮಾಜದ ಪ್ರಗತಿಗೆ ಅಡ್ಡಿ ಆತಂಕವೊಡ್ಡುವ ಗೋಡೆಯನ್ನು ಕೆಡವಿ ಹಾಕಲೇ ಬೇಕಾಗುತ್ತದೆ. ಆ ನಿಟ್ಟಿನಲ್ಲಿ ಒರಿಸ್ಸಾ ಪ್ರಗತಿ ಪರ ಜನರ ಪ್ರಯತ್ನಕ್ಕೆ ಶುಭ ಹಾರೈಸೋಣ.

-ಪ್ರಕಾಶ್ ಕಾರಟ್

ಬಿಜೆಪಿಯ 'ನೀತಿವಂತಿಕೆ'ಯ ಗುಳ್ಳೆ ಒಡೆದ "ಮಾದರಿ ರಾಜ್ಯ" ಗುಜರಾತ್!

ಆರು ತಿಂಗಳ ಹಿಂದೆ ಭಾರೀ ಗೆಲುವು ಪಡೆದ ಗುಜರಾತಿನ ಬಿಜೆಪಿ ಸರಕಾರ ಇನ್ನೇನು ಅಕ್ಟೋಬರ್ ೭ ರಂದು ಕುಸಿದೇ ಬಿತ್ತು. ಆಗ ಅದನ್ನು ಉಳಿಸಿದ ರೀತಿ, ಈಗಲೂ ಅದಕ್ಕಾಗಿ ಪ್ರತಿದಿನ ನಡೆಯುತ್ತಿರುವ ತಿಣುಕಾಟ, ಕಾಂಗ್ರೆಸ್ಸಿನ ಹೇಸಿಗೆ ರಾಜಕೀಯವನ್ನೂ ಮೀರಿಸುವ ದೊಂಬರಾಟಗಳು ಒಂದೆಡೆ ಬಿಜೆಪಿಯ 'ಶುದ್ಧತೆ'ಯ, 'ನೀತಿವಂತಿಕೆ'ಯ ಮುಖವಾಡವನ್ನು ಕಳಚಿ ಹಾಕಿದ್ದರೆ ಪಕ್ಷದ ಮಹಾರಾಷ್ಟ್ರದಲ್ಲಿ ಅದರ 'ಸ್ವದೇಶಿ' ಮಂತ್ರದ, ದೇಶಪ್ರೇಮದ ಟೊಳ್ಳುತನವೂ ಬಯಲಾಗುತ್ತಿದೆ. ವಾಸ್ತವವಾಗಿ ಬಿಜೆಪಿ ಕೂಡಾ ಇತರ ಬಂಡವಾಳಶಾಹಿ ಪಕ್ಷಗಳಂತೆಯೇ, ಆಳುವ ವರ್ಗಗಳ ಪಕ್ಷಗಳಂತೆಯೇ, ಬಂಡವಾಳಶಾಹಿಗಳ ಕಪ್ಪು ಹಣದ ಥೈಲಿಗಳಿಗೆ ತಮ್ಮನ್ನು ಕಟ್ಟಿಕೊಂಡ ಪಕ್ಷಗಳಂತೆಯೇ; ಏನೇನೂ ವ್ಯತ್ಯಾಸವಿಲ್ಲ, ವ್ಯತ್ಯಾಸವೇನಾದರೂ ಇದ್ದರೆ ಅದರ ಕೋಮುವಾದ ಮಾತ್ರ ಎಂಬುದೀಗ ಬಟ್ಟಬಯಲಾಗಿದೆ ಈ ಬಲಪಂಥೀಯ ಪಕ್ಷಕ್ಕೆ ಸಂಬಂಧಪಟ್ಟಂತೆ ಇತ್ತೀಚಿನ ಎರಡು ಘಟನೆಗಳ ಎರಡು ವಿಶ್ಲೇಷಣೆಗಳು - ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಿಂದ.

ಅಧಿಕಾರಕ್ಕೆ ಬಂದ ಆರು ತಿಂಗಳೊಳಗೆ ಗುಜರಾತ್ ನಲ್ಲಿ ಬಿಜೆಪಿ ಸರಕಾರಕ್ಕೆ ದೊಡ್ಡ ಹೊಡತ ಬಿದ್ದಿದೆ. ಕೇಂದ್ರದಲ್ಲಿ ಒಂದು "ಹಿಂದೂ-ಪರ" ಸರಕಾರವನ್ನು ಪ್ರತಿಷ್ಠಾಪಿಸುವ ಬಗ್ಗೆ ಆರ್.ಎಸ್.ಎಸ್.ನ ಕೂಟ ಮಾತಾಡುತ್ತಿರುವಾಗಲೇ ಗುಜರಾತಿನ ಈ ಘಟನೆ ಅವರಿಗೊಂದು ಅತ್ಯಂತ ಕಹಿ ಆಘಾತ.

ಏಕೆಂದರೆ ಆರ್.ಎಸ್.ಎಸ್. ಬಿಜೆಪಿ ಕೂಟಕ್ಕೆ ಗುಜರಾತ್ ಕೇವಲ ಇನ್ನೊಂದು ರಾಜ್ಯವಲ್ಲ. 1991ರಲ್ಲಿ ಲೋಕಸಭಾ ಚುನಾವಣೆಗಳಲ್ಲಿ ಇಲ್ಲಿ ಬಿಜೆಪಿ 50.4ಶೇ. ಮತಗಳಿಸಿತು.; 25ರಲ್ಲಿ 20 ಸ್ಥಾನಗಿಟ್ಟಿಸಿತು. ಅಡ್ವಾಣಿ 1990ರಲ್ಲಿ ಹಿಂದುತ್ವ ಶಕ್ತಿಗಳ ಚುನಾವಣಾ ಯಶಸ್ಸಿಗೆ ದಾರಿ ಮಾಡಿಕೊಟ್ಟ ತನ್ನ ಕುಪ್ರಸಿದ್ಧ ರಥಯಾತ್ರೆಯನ್ನು ಆರಂಭಿಸಿದ್ದು ಇದೇ ರಾಜ್ಯದ ಸೋಮನಾಥದಿಂದ. ಅಡ್ವಾಣಿಯವರನ್ನು ಲೋಕಸಭೆಗೆ ಆರಿಸಿದ ಗಾಂಧೀನಗರ ಈ ರಾಜ್ಯದ ರಾಜಧಾನಿ. ಈ ವರ್ಷದ ಮಾರ್ಚ್ ವಿಧಾನಸಭಾ ಚುನಾವಣೆಗಳಲ್ಲಿ ನಿರೀಕ್ಷಿಸಿದಂತೆ ಬಿಜೆಪಿ 182 ರಲ್ಲಿ 122 ಸ್ಥಾನಗಳನ್ನು ಗೆದ್ದು ಭಾರೀ ಉತ್ತಮ ಪ್ರದರ್ಶನ ನೀಡಿತು.

ಇತ್ತೀಚಿನ ಇತಿಹಾಸದಲ್ಲಿ ಆಗಾಗ ಕೆಲವು ಭಯಾನಕ ಕೋಮುಗಲಭೆಗಳನ್ನು ಕಂಡ ರಾಜ್ಯ ಕೂಡಾ ಇದೇ ಗುಜರಾತ್. ಬಾಬ್ರಿ ಮಸೀದಿ ಧ್ವಂಸದ ನಂತರ ಈ ರಾಜ್ಯದ ಸೂರತ್ ಮತ್ತು ಅಹಮದಾಬಾದ್ ಅತ್ಯಂತ ಬರ್ಬರ ಸ್ವರೂಪವನ್ನು ತೋರಿದ ದಂಗೆಗಳನ್ನು ಕಂಡವು. ಕಳೆದ ಕಲವು ವರ್ಷಗಳಿಂದ ವಿ.ಹೆಚ್.ಪಿ. ಮತ್ತು ಇತರ ಆರ್.ಎಸ್.ಎಸ್. ಸಂಘಟನೆಗಳು ನಗರದ ಮಧ್ಯಮ ವರ್ಗಗಳಲ್ಲಿ ಒಂದು ವ್ಯಾಪಕ ಜಾಲ ಹಬ್ಬಿಸಿ ವ್ಯವಸ್ಥಿತವಾಗಿ ಜನಗಳಲ್ಲಿ ಕೋಮು ಭಾವನೆಗಳನ್ನು ಎಬ್ಬಿಸಿ ನಂತರ ಗ್ರಾಮೀಣ ಪ್ರದೇಶಗಳಿಗೂ ಹರಡಿವೆ. ಆದ್ದರಿಂದಲೇ ಬಿಜೆಪಿಗೆ ಗುಜರಾತ್ ಒಂದು 'ಮಾದರಿ ರಾಜ್ಯ'. ಇಂತಹ ಒಂದು ರಾಜ್ಯದಲ್ಲಿ ಬಿಜೆಪಿ ಮೇಲಿಣಂದ ಕೆಳಗೆ ಒಡೆಯುತ್ತದೆ, ಶಂಕರ್ ಸಿಂಗ್ ವಾಘೇಲಾರಂತಹ ಹಿರಿಯ ಮುಖಂಡ ಬಂಡೇಳುತ್ತಾರೆ ಎಂದು ಬಿಜೆಪಿ ಕೇಂದ್ರ ಮುಖಂಡತ್ವ ಕನಸಿನಲ್ಲಿಯೂ ನಿರೀಕ್ಷಿಸಿರಲಿಕ್ಕಿಲ್ಲ. ಬಿಜೆಪಿ ರಾಜಕೀಯದಲ್ಲಿ ವಾಘೇಲಾ ಸಾಮಾನ್ಯರೇನಲ್ಲ. ಸುಮಾರು ಎರಡು ದಶಕಗಳ ಕಾಲ ರಾಜ್ಯ ಘಟಕದ ಅಧ್ಯಕ್ಷರೂ, ಪ್ರಧಾನಕಾರ್ಯದರ್ಶಿಗಳೂ ಆಗಿದ್ದರು.

'ಕಾಂಗ್ರೆಸ್ ರೋಗ' ವೆಂಬುದು ಎಷ್ಟು ನಿಜ?

ಕಾಂಗ್ರೆಸ್ 'ರೋಗ' ಬಿಜೆಪಿಗೂ ತಟ್ಟಿದೆ ಎಂದು ಆರ್.ಎಸ್.ಎಸ್. ಬಿಜೆಪಿ ಬೆಂಬಲಿಗರು ಗೊಣಗುತ್ತಿದ್ದಾರೆ. -ಬಿಜೆಪಿ ಒಂದು ಶುದ್ಧ, ನೀತಿವಂತ ಪಕ್ಷ, ದುರದೃಷ್ಟವಶಾತ್ ಕಾಂಗ್ರೆಸ್ ರೋಗ ಅದಕ್ಕೆ ತಗುಲಿದೆ ಎಂಬಂತೆ ಅಳುಮೋರೆ ಹಾಕಿದ್ದಾರೆ. ಬಿಜೆಪಿ ತಾನು ಭಾರತದ ರಾಜಕಾರಣದಲಿ ಅತ್ಯಂತ ನೀತಿಯುತ ಪಕ್ಷ ಎಂಬ ಭ್ರಮೆ[illegible] ಬಹಳ ಕಷ್ಟಪಟ್ಟು ನಿರ್ಮಿಸಿತ್ತು. ಇದಕ್ಕೆ ಸುದ್ದಿ ಮಾಧ್ಯಮಗಳೂ ತಮ್ಮ ಹಿತಾಸಕ್ತಿಯಿಂದಲೇ ನೆರವಾಗಿದ್ದವು. ಈ ಭ್ರಮೆಯ ಗುಳ್ಳೆ ಈಗ ಒಡೆದಿದೆ. ಬಂಡೆದ್ದ ಎಂ.ಎಲ್.ಎ.ಗಳನ್ನು ಹೆದರಿಸಲು ಜನಜಂಗುಳಿ ಕೂ[illegible] ವಾಘೇಲಾ ಗುಂಪಿನ ಮೇಲೆ[illegible] ಅವರು ಪಕ್ಷದ ರಾಜ್ಯದ [illegible] ಪಲಾಯನ ಮಾಡಿದ್ದು ಇವೆ[illegible] ಹರ್ಯಾಣಾ ಅಥವಾ ಹೈದ[illegible] ಭಾಸ್ಕರ್ ರಾವ್ ರವರು ಮು[illegible] [illegible]ಯ ಪಕ್ಷಾಂತರ ಘಟನೆಗಳ[illegible] [illegible]ತವು.



'ಶುದ್ಧತೆ' ಬಿಜೆಪಿಯ[illegible]

ವಾಸ್ತವವಾಗಿ ಬಿಜೆಪಿಯ[illegible] ಅಹಂಗೆ ಏನೂ ಅರ್ಥವಿಲ್ಲ[illegible] ವಾಳಿಗರನ್ನು ಅಥವಾ ಭೂಮಾ[illegible] ನಿಧಿಸುವ ಯಾವುದೇ ಪಕ್ಷಕ[illegible] ಮೌಲ್ಯಗಳು ನೀತಿಗಳಿಗೆ ಸ[illegible] ವ್ಯತ್ಯಾಸವೇನೂ ಇಲ್ಲ. ವ್ಯತ್ಯಾ[illegible] ಇದ್ದರೆ ಅದು ಬಿಜೆಪಿಯ [illegible]

ಕಾವಿಪಡೆಗಳ 'ಸ್ವದೇಶಿ' ಮಂತ್ರದ ಹಿಂದೇನಿದೆ?

-ಸೀತಾರಾಂ ಯೆಚೂರಿ


ಎನ್ರೋನ್ ಪ್ರಶ್ನೆಯಲ್ಲಿ ಬಿಜೆಪಿ-ಶಿವಸೇನೆ ಸರಕಾರದ ಮಹಾವಂಚನೆ ಅವರ 'ಸ್ವದೇಶೀ' ಮಂತ್ರದ ಹಿಂದೆ ಎಷ್ಟು ಅಪ್ರಾಮಾಣಿಕತೆಯಿದೆ ಎಂಬುದನ್ನು ಬಯಲಿಗೆಳೆದಿದೆ. ಆದರೂ ಕಾವಿಪಡೆಗಳ ಒಂದು ವಿಭಾಗ ಪ್ರತಿಪಾದಿಸುತ್ತಿರುವ 'ಸ್ವದೇಶೀ' ಘೋಷಣೆಯ ಬಗ್ಗೆ ಸ್ವಲ್ಪ ವಿಚಾರ ಮಾಡುವುದು ಅಗತ್ಯ. ಹೀಗೆ ವಿಚಾರ ಮಾಡುವಾಗ ತಕ್ಷಣ ನೆನಪಿಗೆ ಬರುವ ಒಂದು ಘಟನೆಯೆಂದರೆ ಅಮೇರಿಕಾದ ಅಧ್ಯಕ್ಷೀಯ ಚುನಾವಣೆಗಳ ಕಾಲದಲ್ಲಿ ನಡೆದ ಒಂದು ಘಟನೆ.

ರೋಸ್ ಪೆರೋ ಎಂಬ ಒಬ್ಬ ತಿಕ್ಕಲು ಕೋಟ್ಯಾಧೀಶ ಆ ಚುನಾವಣೆಯಲ್ಲಿ ಒಬ್ಬ ಉಮೇದುವಾರನಾಗಿದ್ದ. ಎಲ್ಲಾ ಬಲಪಂಥೀಯ ಶಕ್ತಿಗಳಂತೆ ತನ್ನ ರಾಜಕೀಯ ಆಕಾಂಕ್ಷೆ ಈಡೇರಿಸಿಕೊಳ್ಳಲು ಒಂದು ಸಂಕುಚಿತ ದೇಶಭಕ್ತಿಯ ಭಾವನೆ ಎಬ್ಬಿಸಲು ಆತ ಪ್ರಯತ್ನಿಸಿದ - ದೇಶದ ಆರ್ಥಿಕ ಸುಧಾರಿಸಲು ಅಮೇರಿಕನ್ ಸರಕುಗಳನ್ನೇ ಕೊಳ್ಳಿ ಎಂದು ಅಮೇರಿಕನ್ ಜನರಿಗೆ ಕರೆ ನೀಡಿದ. ಈ ಕರೆಯನ್ನು ಗಂಭೀರವಾಗಿ ತೆಗೆದುಕೊಂಡ ಕೆಲವರು ಜನಪ್ರಿಯ ಜಪಾನೀ ಮಜ್ದಾ ಕಾರಿನ ಬದಲು ಅಮೇರಿಕನ್ ಫೋರ್ಡ್‌ಗೆ ಕಾರನ್ನು ಖರೀದಿಸೋಣ ಎಂದುಕೊಂಡರು. ಆದರೆ ಹಾಗೆ ಮಾಡಿದರೆ ಆಸ್ಟ್ರೇಲಿಯಾದಲ್ಲಿರುವ ಅಮೇರಿಕನ್ ಕಂಪೆನಿ ಫೋರ್ಡ್‌ಗೆ ಆರ್ಡರುಗಳು ಹೆಚ್ಚಿ ಅಲ್ಲಿ ಆಸ್ಟ್ರೇಲಿಯನ್ ಕಾರ್ಮಿಕರ ಉದ್ಯೋಗಾವಕಾಶ ಹೆಚ್ಚುತ್ತದೆ, ಆದರೆ ಅಮೇರಿಕಾದಲ್ಲಿರುವ ಜಪಾನೀ ಮಜ್ದಾ ಕಾರಿನ ಕಂಪೆನಿಗೆ ಆರ್ಡರುಗಳು ಕಮ್ಮಿಯಾಗಿ ಅಮೇರಿಕನ್ ಕಾರ್ಮಿಕರು ಕೆಲಸ ಕಳಕೊಳ್ಳುವಂತಾಗುತ್ತದೆ ಎಂಬುದು ಅವರ ಅರಿವಿಗೆ ಬಂತು. ಸಂಕುಚಿತ ದೇಶಭಕ್ತಿಯ ಮನವಿ ವ್ಯರ್ಥವಾಯಿತಷ್ಟೇ ಅಲ್ಲ, ತದ್ವಿರುದ್ಧ ಫಲ ನೀಡಿತು!

ವಿಕಟ ಅಟ್ಟಹಾಸ

ನಮ್ಮ ದೇಶದ ಸಮಕಾಲೀನ ರಾಜಕೀಯದಲ್ಲಿ ಹಲವು ಅಸಂಬದ್ಧತೆಗಳೆಂದೇ ಹೇಳಬಹುದಾದ ಸಂಗತಿಗಳಿವೆ. ಅವುಗಳಲ್ಲಿ ವಿಕಟರೀತಿಯಲ್ಲಿ ಎದ್ದು ಕಾಣುವಂತದ್ದು ಕಾವಿಪಡೆಗಳ ಒಂದು ಪ್ರಯತ್ನ. ಈ ಹಿಂದೆ ಯಾವ ಚಾರಿತ್ರಿಕ ಪ್ರಕ್ರಿಯೆಗಳನ್ನು ಈ ಶಕ್ತಿಗಳು ವಿರೋಧಿಸಿದ್ದ ಈಗ ಅವನ್ನೇ ತಮ್ಮದಾಗಿಸಿಕೊಳ್ಳುವ ಪ್ರಯತ್ನ! ಗಾಂಧೀಜಿಯ ಕೊಲೆಗಾರರು ಒಂದು ಹಂತದಲ್ಲಿ ತಾವು ಗಾಂಧೀ ಸಮಾಜವಾದಿಗಳು ಎಂದು ಹೇಳಿಕೊಂಡರು! ಆರ್.ಎಸ್.ಎಸ್. ಸ್ವಾತಂತ್ರ್ಯ ಹೋರಾಟದಿಂದ ದೂರವುಳಿದಿತ್ತು ಎಂದು ಇತಿಹಾಸದ ದಾಖಲೆಗಳು ಹೇಳುತ್ತವಷ್ಟೇ ಅಲ್ಲ. ಸ್ವತಃ ಅದರ ಮುಖಂಡರೂ ಅದನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಈಗ ಅದೇ ಸಂಘಟನೆಯ ನೇತೃತ್ವದಲ್ಲಿರುವ ಕಾವಿಪಡೆಗಳು ಸ್ವಾತಂತ್ರ್ಯ ಹೋರಾಟ ಕಾಲದ ಗಾಂಧೀಜಿಯ 'ಸ್ವದೇಶೀ' ಪರಿಕಲ್ಪನೆಯನ್ನು ತಮ್ಮದಾಗಿಸಿಕೊಳ್ಳುವ ಪ್ರಯತ್ನ ನಡೆಸಿದ್ದಾರೆ - ತಮ್ಮ ರಾಜಕೀಯ ಆಕಾಂಕ್ಷೆಗಳ ಈಡೇರಿಕೆಗಾಗಿ.

ಗಾಂಧೀಜಿಗಾಗಲಿ, ಸ್ವಾತಂತ್ರ್ಯ ಹೋರಾಟಕ್ಕಾಗಲಿ, ಸ್ವದೇಶೀ ಆಂದೋಲನವೆಂಬುದು ಕೇವಲ ಬ್ರಿಟಿಷ್ ಉತ್ಪಾದನೆಗಳ ಬಹಿಷ್ಕಾರವಷ್ಟೇ ಆಗಿರಲಿಲ್ಲ. ಅದು ಹಲವು ಪದರಗಳ ಆಂದೋಲನ. ಒಂದು ಹಂತದಲ್ಲಿ ಅದು ಬ್ರಿಟಿಷರ ವಿರುದ್ಧ ಎಲ್ಲಾ ದೇಶಪ್ರೇಮಿಗಳನ್ನು ಅಣಿನೆರೆಸಿದ ಸಂಗತಿಯಾಗಿತ್ತು. ಬ್ರಿಟಿಶ್ ಬಟ್ಟೆಗಳನ್ನು ಬಹಿಷ್ಕರಿಸುವುದು ಬ್ರಿಟಿಷರ ವಿರುದ್ಧ ವೈಯುಕ್ತಿಕ ಹಾಗೂ ಸಾಮೂಹಿಕ ಪ್ರತಿಭಟನೆಯ ಸಂಕೇತವಾಗಿತ್ತು. ಇನ್ನೊಂದು ಮಟ್ಟದಲ್ಲಿ ಬ್ರಿಟಿಷರಿಗೆ ಲಾಭದ ಮೂಲವನ್ನು ನಿರಾಕರಿಸುವುದು, ಭಾರತೀಯ ಮಾರುಕಟ್ಟೆಯಲ್ಲಿ ಅವರು ತಮ್ಮ ಸರಕುಗಳನ್ನು ಮಾರಿ ಲಾಭಗಿಟ್ಟಿಸದಂತೆ ತಡೆಯುವುದು ಅದರ ಗುರಿಯಾಗಿತ್ತು. ಮತ್ತೊಂದು ಮಹತ್ವದ ಸಂಗತಿಯೆಂದರೆ ಬ್ರಿಟಿಷರು ತಮ್ಮ ಸರಕುಗಳಿಗೆ ಮಾರುಕಟ್ಟೆ ಪಡೆಯಲು ಇಲ್ಲಿಯ ಉದ್ದಿಮೆ, ಗುಡಿಕೈಗಾರಿಕೆಗಳನ್ನು ವ್ಯವಸ್ಥಿತವಾಗಿ ನಾಶಮಾಡಿದರು. ಇದನ್ನು ಪ್ರತಿಭಟಿಸಿ ಭಾರತೀಯ ಉದ್ದಿಮೆಗಳ ಪುನರುಜ್ಜೀವನ ಈ ಆಂದೋಲನದ ಮತ್ತೊಂದು ಗುರಿಯಾಗಿತ್ತು.



ಕೃಪೆ: ದಿ ಹಿಂದೂ

ಗಾಂಧೀಜಿ ಲ್ಯಾಂಕಾಶಾಯರ್ ನ ಗಿರಣಿ ಬಟ್ಟೆಗೆದುರಾಗಿ ಭಾರತದ ಕೈಯಲ್ಲಿ ನೇದ ಸಾಂಪ್ರದಾಯಿಕ ಹತ್ತಿ ಬಟ್ಟೆಯನ್ನು ಮುಂದಿಟ್ಟರು. ಚರಖಾ ಮತ್ತು ಖಾದಿ ಇದರ ಸಂಕೇತಗಳಾದವು. ಭಾರತೀಯ ಉ[illegible]ಮೆಯನ್ನು ಇದು ಎಷ್ಟರ ಮಟ್ಟಿಗೆ ಪುನರುಜ್ಜೀವನಗೊಳಿಸಿತು ಎಂಬುದು ಬೇರೆ ಪ್ರಶ್ನೆ. ಅದೇ ರೀತಿ ಕೇವಲ ಸ[illegible]ಣದ ಕೈಗಾರಿಕೆಗಳಿಂದಲೇ ಎಷ್ಟರ ಮಟ್ಟಿ, ದೀರ್ಘಕಾಲದ ಆರ್ಥಿಕ ಬೆಳವಣಿಗೆ ಸಾಧ್ಯವೇ ಎಂಬ ಪ್ರಶ್ನೆಯೂ ಇದೆ. ಅದೇನೇ ಇರಲಿ, ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಸ್ವದೇಶೀ ಆಂದೋಲನ ವಿದೇಶೀ ಸರಕುಗಳ ಪ್ರಾಬಲ್ಯದ ವಿರುದ್ಧವಷ್ಟೇ ಅಲ್ಲ, ಜನಗಳಿಗೆ ಅಧಿಕಾರ ನೀಡುವ, ಅವರ ಆರ್ಥಿಕ ಅದೃಷ್ಟವನ್ನು ಉತ್ತಮಗೊಳಿಸುವ, ಆ ಮೂಲಕ ಸ್ವಾತಂತ್ರ್ಯ ಆಂದೋಲನದಲ್ಲಿ ಅವರ ಭಾಗವಹಿಸುವಿಕೆ ಮತ್ತು ಶಕ್ತಿಕಿಯನ್ನು ಹೆಚ್ಚಿಸುವ ಅಂಶಗಳೂ ಅದರಲ್ಲಿದ್ದವು.

ಒಂದೆಡೆ ಸ್ವದೇಶೀ ಮಂತ್ರ ಇನ್ನೊಂದೆಡೆ ಸ್ವಾವಲಂಬನೆಯನ್ನು ಹೂಳಲು ನೆರವು!

ಸಾಮ್ರಾಜ್ಯಶಾಹಿ ಮೂರನೇ ಜಗತ್ತಿನ ದೇಶಗಳನ್ನು ಆರ್ಥಿಕವಾಗಿ ಗುಲಾಮತನಕ್ಕಿಳಿಸಲು ಹೊಸ-ಹೊಸ ವಿಧಾನಗಳನ್ನು ಬಳಸುತ್ತಿರುವ ಈಗಿನ ಸನ್ನಿವೇಶದಲ್ಲಿ ನಮ್ಮ ಆರ್ಥಿಕ ಸಂಪನ್ಮೂಲಗಳ ಹಾ[illegible] ಮನಬಂದಂತೆ ಲೂಟಿ ಹೊ[illegible] ಕಾಶವನ್ನು ಒದಗಿಸುವ ಪ್ರ[illegible] ರೋಧಿಸುವುದು ಎಲ್ಲಾ[illegible] ಕರ್ತವ್ಯ. ದೇಶದ ಸ್ವಾತಂತ್ರ್[illegible] ಕರಿಸುವಲ್ಲಿ ನಮ್ಮ ಆರ್ಥಿಕ [illegible] ಮತ್ತು ಸ್ವಾವಲಂಬನೆಯನ್[illegible] ವುದು ಒಂದು ಮುಖ್ಯ ಅಂಶ[illegible] ಸಾಧಿಸುವ ಏಕೈಕ ಮಾರ್ಗ[illegible] ಪ್ರತಿರೋಧವನ್ನು ಬಲಪಡಿಸ[illegible] ಗಬೇಕಾದರೆ ಅವರ ಜೀವನ[illegible] ಸುಧಾರಿಸುವುದು ಅಗತ್ಯ[illegible] ಇಂತಹ ಪ್ರಯತ್ನ ವಿಫ[illegible] ಖಂಡಿತ, ಇದರಿಂದ ಸಾ[illegible] ತಂತ್ರಗಳನ್ನು ಬಲಪಡಿಸಿದ[illegible]

ಇಂದು ಕಾವಿಪಡೆಗಳ[illegible] ವುದು ಇದನ್ನೇ. ಕಾಂಗ್ರೆಸ್[illegible] ಕರಣದ ಹೊಸ ಆರ್ಥಿ[illegible] ಸಂಪೂರ್ಣ ಅನುಮೋದಿಸಿ[illegible] ಗಳೆಂದರೆ ದೇವರ ಹೊಸ[illegible] ಎತ್ತಿ ಹಿಡಿಯುತ್ತಾ, ಈ ನಿ[illegible] ಭಿಸಿದಾಗ ಕಾಂಗ್ರೆಸ್ ತಮ್ಮ[illegible] ಕೊಂಡಿದೆ ಎಂದು ಹೇಳಿ[illegible] ಭಾರತದ ಸ್ವಾವಲಂಬನೆಯ[illegible] ಕಲು ಕಾದಿರುವ ಶವಸಂಸ[illegible] ವಹಿಸುತ್ತಿದೆ. ಹೀಗೆ ಅವರ[illegible]

ಗಳಲ್ಲ, ತನ್ನ ಪಿತೃ ಸಂಘಟನೆ ಆರ್.ಎಸ್.ಎಸ್. ಬಯಸಿದಾಗಲೆಲ್ಲಾ ಅತ್ಯಂತ ಕೋಮುವಾದಿ ನಿಲುವು ತಳೆಯಲು ಸಿದ್ಧವಾಗಿರುವುದೊಂದೇ ಅದರ ವಿಶಿಷ್ಟತೆ. ಬೇರೆಲ್ಲಾ ಅಂಶದಲ್ಲೂ ತಾನು ಪ್ರತಿನಿಧಿಸುವ ವರ್ಗಗಳ ಗುಣಗಳನ್ನೆಲ್ಲಾ ಬಿಜೆಪಿ ಪಡೆದುಕೊಂಡಿದೆ. ಬಿಜೆಪಿ ರಾಜಕಾರಣಿಗಳೂ ಸಾಮಾನ್ಯವಾಗಿ ತಮ್ಮ ರಾಜಕೀಯ ಕೆಲಸಕ್ಕೆ 'ಪ್ರತಿಫಲ' ನಿರೀಕ್ಷಿಸುತ್ತಾರೆ, ಗ್ರಾಮೀಣ ಮತ್ತು ನಗರದ ಶ್ರೀಮಂತರನ್ನು ಅವರು ಪ್ರತಿನಿಧಿಸುತ್ತಾರೆ. ಬೇರೆಲ್ಲಾ ಬೂರ್ಜ್ವಾ ಪಕ್ಷಗಳಂತೆ ಅಧಿಕಾರದ ಆಸೆ ಗುಂಪುಗಾರಿಕೆಯನ್ನು ಈ ಪಕ್ಷದಲ್ಲೂ ಉಂಟು ಮಾಡಿದೆ.

ಗುಜರಾತಿನಲ್ಲಿ ಬಿಜೆಪಿಯ ಆಂತರಿಕ ಕಲಹ, ಕಚ್ಚಾಟಕ್ಕೆ ಮುಖ್ಯ ಕಾರಣ ಅಧಿಕಾರ ಮತ್ತು ಅದರೊಂದಿಗೆ ಬರುವ ಐಷಾರಾಮ. ವಾಘೇಲಾರಿಗೆ ಮುಖ್ಯಮಂತ್ರಿ ಸ್ಥಾನ ನಿರಾಕರಿಸಲಾಯಿತು. ಅವರ ಗುಂಪಿನವರನ್ನು ಕಾರ್ಪೋರೇಟರ್‌ಗಳ ಅಧ್ಯಕ್ಷಗಿರಿಗಳನ್ನು ಪಂಚುವಾಗ ಮೂಲೆಗೊತ್ತಲಾಯಿತು. ಯಾವುದೇ ಬೂರ್ಜ್ವಾ ಪಕ್ಷದ ಪ್ರಾಣ ಪಕ್ಷಿ ಇದೇ ತಾನೇ. ಜಾತಿ ಪರಿಗಣನೆಗಳೂ ಗುಂಪುಗಾರಿಕೆಯನ್ನು ಪ್ರವೇಶಿಸಿವೆ. ಅದೂ ಇಂತಹ ಪಕ್ಷಗಳಿಗೆ ಸಾಮಾನ್ಯ ಸಂಗತಿ. ಗುಜರಾತಿನಲ್ಲಿ ಹೀಗೆ ನಡೆಯುತ್ತಿರುವುದು ಮೊದಲ ಬಾರಿಯೇನಲ್ಲ. ಆರ್.ಎಸ್.ಎಸ್.ನ 'ಶುದ್ಧ' ಹಿಂದುತ್ವ ಬಿಜೆಪಿ ಮೂಲಕ ಅಧಿಕಾರ ಪೀಠಕ್ಕೆ ಬಂದಾಗ ಬೇಗನೇ ಹ್ರಾಸಗೊಳ್ಳುತ್ತದೆ. 1990-92 ರಲ್ಲಿ ಮಧ್ಯಪ್ರದೇಶ, ರಾಜಸ್ಥಾನ, ಉತ್ತರ ಪ್ರದೇಶ, ಹಿಮಾಚಲ ಪ್ರದೇಶಗಳ ಬಿಜೆಪಿ ಸರಕಾರಗಳು ಇದನ್ನು ಸಾಕಷ್ಟು ಪ್ರಮಾಣದಲ್ಲಿ ಪ್ರದರ್ಶಿಸಿದವು. ವಾಸ್ತವವಾಗಿ

ಈ ಪಕ್ಷದ ಅತ್ಯಂತ ಹಳೆಯ ನೆಲೆಯಾದ ಮಧ್ಯಪ್ರದೇಶದಲ್ಲಿ ಬಿಜೆಪಿ ಸ್ಥಿರತೆ ಒಂದು ಒಳ್ಳೆ ಉದಾಹರಣೆ. ಅಧಿಕಾರ ಕಳಕೊಂಡಾಗಲೂ ಅಧಿಕೃತ ಗುಂಪು ಮತ್ತು ಮಾಜಿ ಮುಖ್ಯಮಂತ್ರಿ ಪಟ್ವಾ ಗುಂಪಿನ ನಡುವೆ ಅಧಿಕಾರಕ್ಕೆ ಘರ್ಷಣೆ ನಡೆದೇ ಇದೆ. ಪಟ್ವಾ ಸರಕಾರದ ಹಲವು ದೊಡ್ಡ ಕಾಂಟ್ರಾಕ್ಟರ್-ವ್ಯಾಪಾರಿ-ಭೂಮಾಲಕ ಕೂಟಕ್ಕೆ ಪರವಾದ ಹಲವು ಮೋಸದ ನಿರ್ಣಯಗಳು ಆ ಸರಕಾರವನ್ನು ಜನಸಾಮಾನ್ಯರಿಂದ ದೂರಕ್ಕೆ ತಳ್ಳಿದವು. ರಾಮರಾಜ್ಯದ ಉಪದೇಶ ನೀಡುವುದೇನೋ ಸುಲಭ. ಆದರೆ ಆಸ್ತಿವಂತ ವರ್ಗಗಳ ಸೇವೆಯಲ್ಲಿ ಒಂದು ರಾಜ್ಯದ ಆಡಳಿತ ನಡೆಸುವಾಗ ಹಲವು ಸಮಸ್ಯೆಗಳು, ವೈರುಧ್ಯಗಳನ್ನು ಎದುರಿಸಬೇಕಾಗುತ್ತದೆ.

ದಿಲ್ಲಿಯಲ್ಲಿ ಅಧಿಕಾರ ಕಸಿದುಕೊಳ್ಳುವ ಆತುರದಲ್ಲಿ ಬಿಜೆಪಿ ತನ್ನ ಸೈದ್ಧಾಂತಿಕ ನಂಬಿಕೆಗಳನ್ನು ಬಿಡಲೂ ಅದು ಸಿದ್ಧವಿದೆ. ಉತ್ತರ ಪ್ರದೇಶದಲ್ಲಿ ಕಾಣುತ್ತಿರುವ ದೃಶ್ಯ ಅದರ ವಿಶ್ವಾಸಾರ್ಹತೆಗೆ ಬಿದ್ದಿರುವ ಮತ್ತೊಂದು ಆಘಾತ. ದಲಿತರ ಬಗ್ಗೆ ತನಗಿರುವ ಆತಂಕದಿಂದಾಗಿ ಮಾಯವತಿಯವರನ್ನು ಮುಖ್ಯಮಂತ್ರಿಯಾಗಿ ಮಾಡಿದೆವು, ಬಿ.ಎಸ್.ಪಿ.ಯೊಂದಿಗೆ ಒಂದು ನೀತಿಬಾಹಿರ

ಪುಟ ೬ಕ್ಕೆ

ಎಷ್ಟೇ ಯಾತ್ರೆಗಳನ್ನು ನಡೆಸಿದರೂ, ಎಷ್ಟೇ ಗಂಗಾಜಲ ಸಿಂಪಡಿಸಿದರೂ ಬಿಜೆಪಿಯ ಹೆಸರನ್ನು ಇನ್ನೂ ಶುದ್ಧ ಪಡಿಸುವುದು ಸಾಧ್ಯವಿಲ್ಲ. ಗುಜರಾತ್ ಈಗ ಕಾಂಗ್ರೆಸ್(ಐ)ಗೆ ತಾನೇ ಏಕೇ ಸುಸಂಗತ ಪರ್ಯಾಯ ಎಂಬ ಅದರ ಕನಸಿನ ಗೋರಿ,

-ಪೀಪಲ್ಸ್ ಡೆಮಾಕ್ರಸಿ ಸಂಪಾದಕೀಯ

ದೇಶಬಾಂಧವರನ್ನು ದಾರಿದ್ರ್ಯಕ್ಕೆ ತಳ್ಳುವ ಒಂದು ಆರ್ಥಿಕ ಕಾರ್ಯತಂತ್ರದಲ್ಲಿ ಶಾಮೀಲಾದವರು ಎನ್ನಬಹುದು.

ಆದರೆ ಅದೇ ವೇಳೆಗೆ ಆರ್ಥಿಕ ನೀತಿಗಳ ವಿರುದ್ಧ ಜನಗಳಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿಯನ್ನು ಕಂಡು ಕಾವಿಪಡೆಗಳ ಒಂದು ವಿಭಾಗ 'ಸ್ವದೇಶೀ' ಘೋಷಣೆಯನ್ನು ಪುನರುಜ್ಜೀವನಗೊಳಿಸಿ ಭಾರತೀಯ ಜನಗಳ ರಾಷ್ಟ್ರೀಯ ಭಾವನೆಯನ್ನು ಉದ್ದೀಪನಗೊಳಿಸಬಯಸುತ್ತಿದೆ. ಆದರೆ ಇದು ಕೇವಲ ಕಣ್ಣೊರೆಸುವ ಚುನಾವಣಾ ಸಮಯಸಾಧಕತೆ ಎಂದು ಮೊದಲ ಪರೀಕ್ಷೆಯಲ್ಲೇ ಸಾಬೀತಾಯಿತು. ಅಮೇರಿಕಾದ ಬಹುರಾಷ್ಟ್ರೀಯ ಕಂಪೆನಿ ಎನ್ರೋನ್‌ನೊಂದಿಗಿನ ವ್ಯವಹಾರವನ್ನು ರದ್ದು ಮಾಡುವ ಭರವಸೆ ನೀಡಿ ಅವರು ಮ[illegible] ಗಳಿಸಿದ ಮೇಲೆ ತಕ್ಷಣ ಕ್ರಮಕೈಗೊಳ್ಳದೆ ಕಾಲೆಳೆದು ಎನ್ರೋನ್‌ಗೆ ತನ್ನ ನಷ್ಟಗಳನ್ನು ಕಮ್ಮಿಮಾಡಿಕೊಳ್ಳಲು ಸಾಕಷ್ಟು ಸಮಯ ಹಾಗೂ ಅವಕಾಶ ನೀಡಿದರು. ಕೊನೆಗೂ ವ್ಯವಹಾರವನ್ನು ರದ್ದುಮಾಡಿರುವುದಾಗಿ ಕ್ಷೀಣ ದನಿಯಲ್ಲಿ ಹೇಳಿದರು. ಕೆಲವೇ ದಿನಗಳೊಳಗೆ ತಲೆಬಾಗಿ ಕೊನೆಗೆ ಎನ್ರೋನ್‌ನೊಂದಿಗೆ ಮರುಮಾತುಕತೆ ನಡೆಸುವುದಾಗಿ ಸಾರಿದರು! ಈ ವ್ಯವಹಾರದಲ್ಲಿ ಕಾಂಗ್ರೆಸ್ ನಲ್ಲಿರುವ ಕೆಲವರ ಕೈಬೆಚ್ಚಗೆಯಾಗಿತ್ತು ಎಂಬುದು ಸ್ವಯಂವೇದ್ಯ. ಈಗ ಎನ್ರೋನ್ ನೊಂದಿಗೆ ಮರು ಮಾತುಕತೆಯಲ್ಲಿ ಕಾವಿಪಡೆಗಳು ಈ ಲೂಟಿಯಲ್ಲಿ ತಮ್ಮ ಪಾಲು ಪಡೆಯಲಿವೆ! ಈ ಇಡೀ ಘಟನೆಯ ಮೂಲಕ ಬಿಜೆಪಿ ತನ್ನ ನಿಜಸ್ವರೂಪವನ್ನು ತಾನೇ ಬಯಲಿಗೆ ತಂದಿಟ್ಟಿದೆ. [illegible]ದಗ 'ಸ್ವದೇಶಿ' ಘೋ[illegible] ಭಾರತದ ಸ್ವಾವಲಂಬನೆಯ ರಕ್ಷಣೆಗಾಗಿ ಅಲ್ಲ, ಸಾಮ್ರಾಜ್ಯಶಾಹಿ [illegible]ತ್ರಗಳಿಂದ ದೇಶವನ್ನು ರಕ್ಷಿಸಲಿಕ್ಕೂ ಅಲ್ಲ, ತೀವ್ರ ಆರ್ಥಿಕ ಹಲ್ಲೆಗಳಿದರು ಜನಗಳ ಸ್ಥಿತಿಯನ್ನು ಸುಧಾರಿಸುವುದಕ್ಕೂ ಅಲ್ಲ ಎಂದು ಸ್ಪಷ್ಟಪಡಿಸಿದೆ. ಈ ಘೋಷಣೆ ಕೇವಲ ಜನಗಳನ್ನು ಮರುಳು ಮಾಡಲು ಮಾತ್ರ. ಜನಗಳ ಭಾವನೆಯನ್ನು ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳ ಬಳಸಿಕೊಳ್ಳುವುದು ಅದರ ಫ್ಯಾಸಿಸ್ಟ್ ಮಾದರಿ ಸ್ವರೂಪಕ್ಕೆ ಅನುಗುಣವಾಗಿ[illegible] ಇದೆ.

ಸ್ವದೇಶೀ ಯಾವುದು? -ವಿದೇಶೀ ಯಾವುದು?

ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು. ಕಾವಿಪಡೆಗಳು ತಮ್ಮ 'ಸ್ವದೇಶೀ' ಘೋಷಣೆಯ ಬಗ್ಗೆ ಪ್ರಾಮಾಣಿಕರಾಗಿದ್ದರೂ ಅದನ್ನು ಹೇಗೆ ಅನುಷ್ಠಾನಕ್ಕೆ ತರುತ್ತಿದ್ದರು? ಒಂದು ಉದಾಹರಣೆ - ದೂರದರ್ಶನದಲ್ಲಿ, ಜಾಹೀರಾತು ಲಲಿತಾಜಿ ಎಂಬ ಕೆಳಮಧ್ಯಮ ವರ್ಗದ ಗೃಹಿಣಿ ಶತಪ್ರತಿಶತ ಭಾರತೀಯ ರೀತಿ, ವೇಷ-ಭೂಷಣಗಳಲ್ಲಿ ಸರ್ಫ್ ಬಟ್ಟೆ ಒಗೆಯುವ ಪೌಡರನ್ನು ಬಳಸುವಲ್ಲಿನ ಜಾಣತನದ ಬಗ್ಗೆ ವಿವರಿಸುವುದನ್ನು ನೋಡಿರುವಿರಿ. ಈ ಸರ್ಫ್‌ನ್ನು ಹಿಂದುಸ್ತಾನ್ ಲೀವರ್ ಕಂಪೆನಿ ಸಂಪೂರ್ಣವಾಗಿ ಭಾರತದಲ್ಲೇ ತಯಾರಿಸುತ್ತದೆ. ಆದರೆ ಈ 'ಸರ್ಫ್'ನ್ನು ಖರೀದಿಸುವ ಕೆಲಸ 'ಸ್ವದೇಶೀ' ಎನ್ನಲು ಸಾಧ್ಯವೇ? ಸಾಧ್ಯವಿಲ್ಲ-ಏಕೆಂದರೆ ಹಿಂದೂಸ್ತಾನ್ ಲೀವರ್ ದೈತ್ಯ ಬಹುರಾಷ್ಟ್ರೀಯ ಕಂಪೆನಿ. ಯುನಿಲಿವರ್‌ನ ಉಪಸಂಸ್ಥೆ. ಆದ್ದರಿಂದ ಈ 'ಸರ್ಫ್' ಮಾರಾಟದ ಲಾಭ ಕೊನೆಗೂ ಹೋಗುವುದು ಅದರ ಖಜಾನೆಗೆ. ಇನ್ನೊಂದು ಉದಾಹರಣೆ ತಗೊಳ್ಳಿ. ಕೆಲವರು ಕೋಕಾ ಕೋಲದ ಬದಲು ಭಾರತೀಯ ಹಗುರ ಪೇಯನ್ನು ರಿಸಿಕೊಳ್ಳಬೇಕೆಂಬ ಗೀಳು ಹಚ್ಚಿಕೊಂಡಿದ್ದಾರೆ. ಆದರೆ ಭಾರತದ ಹಗುರ ಪೇಯ ಮಾರುಕಟ್ಟೆಯ ಶೇ. 80ನ್ನು ಹತೋಟಿಯಲ್ಲಿಟ್ಟುಕೊಂಡಿದ್ದ ಪಾರ್ಲೆ ಕಂಪನಿಯನ್ನೇ ಕೋಕಾ ಕೋಲಾ ಖರೀದಿಸಿಬಿಟ್ಟಿದೆ ಎಂದು ಅರಿವಾದಾಗ? ಅದೇ ರೀತಿ ನಮ್ಮ ಗೋದ್ರೆಜ್‌ನ್ನು ಬಹುರಾಷ್ಟ್ರೀಯ ಕಂಪನಿ ಪ್ರಾಕ್ಟರ್ ಅಂಡ್ ಗ್ಯಾಂಬಲ್ ವಶಪಡಿಸಿಕೊಂಡಿದೆ. ಬ್ರೂಕ್ ಬಾಂಡನ್ನು ಲಿಪ್ಟನ್ ವಹಿಸಿಕೊಂಡಿದೆ. ಟಾಟಾ ಆಯಿಲ್ ಮಿಲ್ಲನ್ನು ಯುನಿಲಿವರ್ ವಹಿಸಿಕೊಂಡಿದೆ. ಇಂತಹ

ಪುಟ 8 ಕ್ಕೆ

ನಿಯಮಗಳನ್ನು ಗಾಳಿಗೆ ತೂರಿದ ವಿದೇಶಿ ಸಿಟಿ ಬ್ಯಾಂಕ್

ವಿದೇಶೀ ಬ್ಯಾಂಕುಗಳು ಭಾರತದ ಕಾನೂನು/ನಿಬಂಧನೆಗಳನ್ನು ತಮಗೆ ಲಾಭವಾಗುವುದಿದ್ದರೆ ಮಾತ್ರ ಪಾಲಿಸುತ್ತವೆ. ಇಲ್ಲವಾದರೆ ಅವನ್ನು ಗಾಳಿಗೆ ತೂರಿಬಿಡುತ್ತವೆ. ಇಂತಹ ಅಕೃತ್ಯಗಳನ್ನು ಮಾಡಿಯೂ ಅವನ್ನು ದಕ್ಕಿಸಿಕೊಳ್ಳುತ್ತವೆ. ಯಾವುದಾದರೂ ಮಾರ್ಗದಿಂದ.

ಬ್ಯಾಂಕ್ ಶೇರು ಹಗರಣದ ವಿಚಾರಣೆ ನಡೆಸುತ್ತಿರುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ನ್ಯಾಯ ಮೂರ್ತಿ ಎಸ್.ಎಸ್. ವರಿಯತಾ ಸಿಟಿ ಬ್ಯಾಂಕ್ ಭಾರತೀಯ ರಿಸರ್ವ್ ಬ್ಯಾಂಕ್ ನ ನಿಯಮಗಳನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿದೆ ಎಂದಿದ್ದಾರೆ. ಹರ್ಷದ್ ಮೆಹ್ತಾನ ಪರವಾಗಿದ್ದ ಡಿಕ್ರಿಯೊಂದರ ವಿರುದ್ಧ ಸಿಟಿ ಬ್ಯಾಂಕು ಹೂಡಿದ ಮೊಕದ್ದಮೆ ವಿಚಾರಣೆ ನಡೆಸಿದ ಅವರು ಈ ರೀತಿ ಹೇಳಿದ್ದಾರೆ.

ಸಿಟಿ ಬ್ಯಾಂಕಿ ಉಪಾಧ್ಯಕ್ಷರು ನ್ಯಾಯಾಲಯದಲ್ಲಿ ಸಾಕ್ಷಿ ನೀಡಿದ ರೀತಿಯ ಬಗ್ಗೆ ಹೇಳುತ್ತಾ ಅದು ಅತ್ಯಂತ ನಿರ್ಲಕ್ಷದಿಂದ ಕೂಡಿತ್ತು ಎಂದು, ಯಾವುದೇ ಆಧಾರಗಳಿಲ್ಲದ್ದಾಗಿತ್ತು ಎಂದಿದ್ದಾರೆ. ಅವರು ಸುಳ್ಳು ಮೊಕದ್ದಮೆ ಹೂಡಿದ ಸಿಟಿಬ್ಯಾಂಕ್ ಪ್ರತಿವಾದಿಯ ಖರ್ಚು ಮತ್ತು ಮೊಕದ್ದಮೆ ಹಣವನ್ನು ನೀಡಬೇಕೆಂದು ಅವರು ಆದೇಶ ಹೊರಡಿಸಿದ್ದಾರೆ.



ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದದ್ದು ಈ ಮೊಕದ್ದಮೆ ಸಿಟಿ ಬ್ಯಾಂಕ್ ಮತ್ತು ಹರ್ಷದ್ ಮೆಹ್ತಾನ ನಡುವೆ ಶೇರು ಹಗರಣದ ನಂತರ ದೇಶವೇ ಹರ್ಷದ್ ಮೆಹ್ತಾ ಎಂತಹ ಮೋಸಗಾರ ಎಂಬುದನ್ನು ಕಂಡುಕೊಂಡಿತು. ಇಂತಹ ಮೋಸಗಾರನಿಗೆ ಮೋಸ ಮಾಡ ಹೊರಡುವ ಈ ವಿದೇಶೀ ಬ್ಯಾಂಕ್ ಎಂತಹ ಮೋಸಗಾರನಿರಬೇಕು.

ಇಂತಹ ದೊಡ್ಡ ಕುಳಗಳನ್ನೇ ಹೆದರಿಸಿಕೊಂಡು ವ್ಯವಹಾರ ಮಾಡಬಲ್ಲ ವಿದೇಶೀ ಬ್ಯಾಂಕುಗಳು ಬೇರೆಯವರನ್ನು ಹೇಗೆ ಪರಿಗಣಿಸಬಹುದು? ಇದು ವಿದೇಶೀ ಬ್ಯಾಂಕುಗಳ ನೀತಿ.

ಐ.ಎಂ.ಎಫ್. ಧಣಿಗಳ ತಾಕೀತು

ಭಾರತ ಹಣಕಾಸು ಕೊರತೆಯನ್ನು ಇನ್ನೂ ಕಡಿತಗೊಳಿಸಬೇಕೆಂದು ಐ.ಎಂ.ಎಫ್.ನ ಧಣಿಗಳು ಹೇಳಿದ್ದಾರೆ. ಇದರ ಜೊತೆಗೆ ರಚನಾತ್ಮಕ ಸುಧಾರಣೆಯ ವೇಗವನ್ನು ಹೆಚ್ಚಿಸಬೇಕು ಎಂದಿದೆ. ಫಂಡ್ ಹಣದುಬ್ಬರದ ದರವನ್ನು ಕಡಿಮೆಗೊಳಿಸಿ ಖಾಸಗಿ ಹಣಹೂಡಿಕೆಗೆ ಹೆಚ್ಚು ಹಣ ಲಭ್ಯವಾಗುವಂತೆ ಮಾಡಬೇಕೆಂದು ಅದು ಆದೇಶಿಸಿದೆ.

ಈಗ ಇಂತಹ ಕ್ರಮಗಳನ್ನು ಕೈಗೊಳ್ಳದೇ ಹೋದಲ್ಲಿ ಮುಂದೆ ಇನ್ನೂ ಬಿಗಿಯಾದ ಹಣಕಾಸು ನೀತಿಯನ್ನು ಅನುಸರಿಸಬೇಕಾದ ಅವಶ್ಯಕತೆ ಬೀಳಬಹುದೆಂಬ ಎಚ್ಚರಿಕೆಯನ್ನು ಅದು ನೀಡಿದೆ.

ಮೆಕ್ಸಿಕೋದಲ್ಲಿ ಬೀಸಿದಂತಹ ಬಿರುಗಾಳಿ ಈಗ ಬೇರೆ ದೇಶಗಳಲ್ಲಿ ಮರುಕಳಿಸುವಂತಹ ಸಾಧ್ಯತೆ ಇಲ್ಲವಂತೆ.

ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬಂತೆ ತೋರುವ ಫಂಡ್‌ನ ಈ ಹೇಳಿಕೆಗಳು ಆರ್ಥಿಕ ಸುಧಾರಣೆಯಿಂದ ಭಾರತದಂತಹ ದೇಶಗಳು ಅಪಾರ ಆರ್ಥಿಕ ಪ್ರಗತಿ ಸಾಧಿಸುತ್ತವೆ ಎನ್ನುತ್ತವೆ. ಈ ದೇಶದ ಬಡಜನಗಳೆಲ್ಲ ತೀವ್ರವಾಗಿ ಹೆಚ್ಚುತ್ತಿರುವ ಬಡತನದಿಂದ ನರಳುತ್ತಿರುವಾಗ ಇಂತಹ ಹೇಳಿಕೆ ನೀಡುವ ಐ.ಎಂ.ಎಫ್. ಕಾಳಜಿ ಯಾರ ಬಗ್ಗೆ ಎಂದು ಸ್ಪಷ್ಟವಾಗುತ್ತಲ್ಲವೆ?

ಮಂಗ ತಿಂದು ಮೇಕೆಯ ಬಾಯಿಗೊರೆಸಿದ ಕತೆ

ದೇಶದ ಕೃಷಿ ಮಂತ್ರಿ ಡಾ. ಬಲರಾಮ್ ಜಾಖಡ್ ಎಂಬ ಜಮೀನುದಾರಿ ಕುಳ ಜನಸಂಖ್ಯೆ ಹೀಗೆ ಹೆಚ್ಚುತ್ತಿದ್ದರೆ ಆಹಾರ ಸುಭದ್ರತೆ ದುರ್ಬಲವಾಗುತ್ತದೆ ಎಂದಿದ್ದಾರೆ.

ಉದಾರೀಕರಣದ ವಕ್ತಾರನಾಗಿರುವ ಈತ ಉದಾರೀಕರಣದಿಂದ ದೊಡ್ಡ ರೈತ ಜಮೀನುದಾರರಿಗೆ ಅಪಾರ ಲಾಭ ದೊರೆಯಬೇಕೆಂಬ ಪ್ರಯತ್ನ ಮಾಡುತ್ತಿರುವ ಭೂಪ.

ಜನಸಂಖ್ಯೆ ಹೆಚ್ಚಿದರೆ ಆಹಾರ ಕೊರತೆಯಾಗುತ್ತದೆ ಎಂಬುದು ಎಲ್ಲರಿಗೂ ಅರ್ಥವಾಗುವಂತಹದ್ದೆ. ಆದರೆ ಹೀಗಾದಾಗ ಅಷ್ಟು ಹೆಚ್ಚಿನ ಪ್ರಮಾಣದಲ್ಲಿ ದೇಶದೊಳಗೆ ಆಹಾರ ಉತ್ಪಾದನೆಯೂ ಆಗುವಂತೆ ಸರಕಾರ ನೋಡಿಕೊಳ್ಳಬೇಕಾಗುತ್ತದೆ. ಇದಕ್ಕೆ ಬದಲು ಈ ಸರ್ಕಾರ ಉದಾರೀಕರಣ ತಂದು ದೇಶದ ರೈತರು ಆಹಾರ ಧಾನ್ಯಗಳನ್ನು ಬೆಳೆಯದಂತೆ ಮಾಡಿದೆ. ಬೆಳೆಗಳ ಪ್ರಮಾಣ ಏರುಪೇರಾಗುವಂತೆ ಮಾಡಿದೆ. ಇದು ದೇಶದ ಆಹಾರ ಸುಭದ್ರತೆಯ ಮೇಲೆ ದೀರ್ಘ ಕಾಲದ ದುಷ್ಪರಿಣಾಮ ಬೀರುತ್ತದೆ. ಬರುವ ದಿನಗಳು ಖಂಡಿತವಾಗಿಯೂ ಕಷ್ಟದ ದಿನಗಳಾಗುತ್ತವೆ. ಈ ಪರಿಸ್ಥಿತಿಗೆ ಜವಾಬ್ದಾರಿ ಹೊರಬೇಕಾಗುವುದನ್ನು ತಪ್ಪಿಸುವ ಸಲುವಾಗಿ ಈ ಮಂತ್ರಿ ಮಹೋದಯರು ಇಂತಹ ಮಾತನಾಡತೊಡಗಿದ್ದಾರೆ.

ಎನ್ರಾನ್‌ಗೆ ರತ್ನಗಂಬಳಿ ಹಾಸಿದ ಮಹಾರಾಷ್ಟ್ರ ಸರ್ಕಾರ

ಎನ್ರಾನ್ ದಾಬೋಲ್ ಯೋಜನೆಯ ಒಪ್ಪಂದವನ್ನು ರದ್ದುಗೊಳಿಸಿ ಪ್ರಗತಿಪರ/ಸ್ವದೇಶೀ/ಸ್ವಾವಲಂಬನೆಯ ಪೋಸು ನೀಡಿದ ಮಹಾರಾಷ್ಟ್ರ ಶಿವಸೇನೆ ಬಿಜೆಪಿ ಸರ್ಕಾರ ಈಗ ಈ ೬೦೦೦ ಕೋಟಿ ರೂಪಾಯಿಗಳ ಯೋಜನೆಯನ್ನು ಪುನರುಜ್ಜೀವನಗೊಳಿಸ ಹೊರಟಿದೆ.

ಮಂತ್ರಿ ಮಂಡಲದ ಸಭೆಯಲ್ಲಿ ಈ ಯೋಜನೆಯನ್ನು ಪುನರುಜ್ಜೀವನಗೊಳಿಸುವ ನಿರ್ಧಾರ ಕೈಗೊಂಡ ಮೇಲೆ ಇದಕ್ಕಾಗಿ ಒಂದು ತಜ್ಞರ ಸಮಿತಿ ನೇಮಿಸುವ ವಿಚಾರದಲ್ಲಿ ಈಗ ಮಹಾರಾಷ್ಟ್ರ ರಾಜ್ಯ ಸರ್ಕಾರವಿದೆ.

ಈಗ ಈ ಬದಲಾದ ಧೋರಣೆ ಯಾಕೆ? ಯಾಕೆಂದರೆ ಶಿವಸೇನೆಯ ಮುಖ್ಯಸ್ಥ ಬಾಳಠಾಕರೆ ಹಾಕಿರುವ ಎಲ್ಲ ಷರತ್ತುಗಳನ್ನು ಎನ್ರಾನ್ ಕಂಪನಿ ಒಪ್ಪಿದೆಯಂತೆ. ಇದಲ್ಲದೆ ಸರ್ಕಾರ ನೀಡಿರುವ ಎಲ್ಲಾ ಸೂಚನೆಗಳನ್ನು ಒಪ್ಪಿದೆಯಂತೆ.

ಇದು ಶಿವಸೇನೆ ಬಿಜೆಪಿ ಸರ್ಕಾರದ ಕೆಲಸದ ಪರಿ. ಎನ್ರಾನ್ ಹಿಂದಿನ ಕಾಂಗ್ರೆಸ್ ಸರ್ಕಾರ ಹೇರಿದ ಎಲ್ಲ ಷರತ್ತುಗಳನ್ನು ಒಪ್ಪಿತ್ತು. ಆದರೆ ಯೋಜನೆಯ ವೆಚ್ಚದಲ್ಲಿ ಭಯಂಕರ ಮೋಸ ಮಾಡಿತ್ತು. ಇದರ ವಿರುದ್ಧ ಧ್ವನಿಯೆತ್ತಿದ ಶಿವಸೇನೆ ಬಿಜೆಪಿ ರಾಜಕೀಯ ಲಾಭ ಪಡೆದವು.

ಈಗ ಇನ್ನೊಂದು ರೀತಿಯ ಲಾಭ ಪಡೆಯಲು ಮತ್ತೆ ಈ ಕಂಪನಿಯ ಯೋಜನೆ ನೀಡುತ್ತಿರಬಹುದಲ್ಲವೆ? ಅಥವಾ ರದ್ದು ಮಾಡುವಾಗಲೇ ಮತ್ತೆ ಒಪ್ಪಂದ ಪುನರುಜ್ಜೀವನ ಮಾಡುತ್ತೇವೆಂದು ಮಾತುಕತೆ ಆಗಿತ್ತೆ?

ಅರೆ ಹೊಟ್ಟೆ ಉಣ್ಣಿ ಉಪವಾಸವಿರಿ

ಇದು ಸ್ವಲ್ಪ ವಿಚಿತ್ರ ಉಪದೇಶ. ಯಾರು ಈ ಉಪದೇಶ ಮಾಡಿರುವುದು ಗೊತ್ತೆ ಕರ್ನಾಟಕದ ಕಂದಾಯ ಸಚಿವ ಆರ್.ಎಲ್. ಜಾಲಪ್ಪನವರು ಮೇಲೆ ಹೇಳಿದಂತೆ ಉಪದೇಶ ನೀಡದಿದ್ದರೂ ಅವರ ಮಾತಿನ ಗೂಡಾರ್ಥ ಇದೇ.

ಕರ್ನಾಟಕ ರಾಜ್ಯದ ರೈತರಿಗೆ ಜಾಲಪ್ಪನವರು ನಿಮ್ಮ ಜಮೀನಿನ ಮೂರನೇ ಒಂದು ಭಾಗವನ್ನು ಮಾತ್ರ ಸಾಗುವಳಿ ಮಾಡಿ ಎಂದು ಉಪದೇಶಿಸಿದ್ದಾರೆ. ಕಾರಣ? ರಾಜ್ಯದಲ್ಲಿರುವ ನೀರು ಮತ್ತು ವಿದ್ಯುತ್ತಿನ ತೀವ್ರ ಅಭಾವ.

ಪ್ರತಿವರ್ಷವು ಹಿಂದಿನ ವರ್ಷಕ್ಕಿಂತ ಹೆಚ್ಚು ಕೃಷಿ ಉತ್ಪಾದನೆ ಮಾಡಬೇಕಾದ ಕರ್ನಾಟಕದ ಕೃಷಿಯಲ್ಲಿ ಬೆಳವಣಿಗೆ ತೀವ್ರ ಕುಸಿದು ಹೋಗಿದೆ. ಹೀಗಿರುವಾಗ ಈ ಬೆಳವಣಿಗೆಯ ಗತಿಯನ್ನು ಹೆಚ್ಚಿಸಿ ಉತ್ಪಾದನೆ ಹೆಚ್ಚುವಂತೆ ಮಾಡಬೇಕಾದ್ದು ಇಂದಿನ ಅತಿ ಮುಖ್ಯ ಅವಶ್ಯಕತೆ. ಆದರೆ ಕಂದಾಯ ಸಚಿವರ ಉಪದೇಶ ಅದಕ್ಕೆ ತದ್ವಿರುದ್ಧವಾಗಿದೆ.

ಇದು ಪರಿಣಾಮವಂತೂ ರಾಜ್ಯದ ಆರ್ಥಿಕ ಅಭಿವೃದ್ಧಿಗೆ ತೀರ ಹಾನಿಕರವಾಗುತ್ತದೆ. ಇಂತಹ ಪರಿಸ್ಥಿತಿಯಿಂದ ರಾಜ್ಯದ ಸಣ್ಣ ಮತ್ತು ಅತಿ ಸಣ್ಣ ರೈತರು ಕೃಷಿ ಮಾಡುವುದೇ ಸಾಧ್ಯವಾಗುವುದಿಲ್ಲ, ಕೃಷಿ ಕೂಲಿಕಾರ/ ಬಡರೈತರಿಗೆ ಕೆಲಸವಿಲ್ಲದೆ ಹೋಗುತ್ತದೆ. ಅವರು ಉಪವಾಸ ಬೀಳುವ ಪರಿಸ್ಥಿತಿ ಬರುತ್ತದೆ. ಇದರಿಂದ ರಾಜ್ಯದ ಉತ್ಪಾದನೆ ಕಡಿಮೆ ಆಗುತ್ತದೆ. ಹೀಗಾದಾಗ ರಾಜ್ಯದ ಆರ್ಥಿಕ ಪ್ರಗತಿಯೇ ಕುಂಟಿತವಾಗಿ ಬಿಡುತ್ತದೆ. ಬೆಲೆಗಳು ಗಗನಕ್ಕೇರುತ್ತವೆ.

ಹೆಚ್ಚಿಗೆ ಬೆಳೆಯಿರಿ ಅದಕ್ಕೆ ಬೇಕಾಗುವ ಎಲ್ಲ ಅನುಕೂಲತೆಗಳನ್ನು ಶತಾಯಗತಾಯ ನಾವು [illegible]ಸಿಕೊಡುತ್ತೇವೆ ಎಂಬ ಪ್ರೋತ್ಸಾಹದಾಯಕ ಮಾತುಗಳನ್ನಾಡಬೇಕಾದ ಕಂದಾಯ ಮಂತ್ರಿಗಳು ಇಂತಹ ಮಾತನ್ನಾಡಿದರೆ?

ಇದು ನರಸಿಂಹರಾಯರ ಉದಾರೀಕರಣ ನೀತಿಯ ಅನುಬಂಧವೆ?

ರೂಪಾಯಿಗೆ ತ್ರಿಶಂಕು ಸ್ವರ್ಗ

ಇತ್ತೀಚಿನ ದಿನಗಳಲ್ಲಿ ಪೂರ್ಣ ಪರಿವರ್ತನೆಯಿಂದಾಗಿ ಡಾಲರ್ ನ ಎದುರು ರೂಪಾಯಿಯ ಬೆಲೆ ಇಳಿಯುತ್ತಲೇ ಇತ್ತು. ಪೂರ್ಣ ಪರಿವರ್ತನೆ ಬಂದಂದಿನಿಂದ ಮಾರುಕಟ್ಟೆಯಲ್ಲಿ ರೂಪಾಯಿಯ ಬೆಲೆಯನ್ನು ಕೃತಕವಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಒಂದೇ ಮಟ್ಟದಲ್ಲಿ ಹಿಡಿದು ನಿಲ್ಲಿಸಿತು. ಈ ಬೆಂಬಲವನ್ನು ಅದು ನಿಲ್ಲಿಸಿದೊಡನೆ ರೂಪಾಯಿಯ ಬೆಲೆ ಕುಸಿಯ ತೊಡಗಿತು.

ಹೀಗೆ ಬೆಲೆ ಕುಸಿಯತೊಡಗಿದಾಗ ರೂಪಾಯಿ ಇನ್ನು ತನ್ನ ಮಟ್ಟವನ್ನು ತಾನೇ ಕಂಡುಕೊಳ್ಳುತ್ತದೆ ಹೊರತು ನಾವು ಅದರ ಬೆಲೆಯನ್ನು ಯಾವುದೇ ಮಟ್ಟದಲ್ಲಿ ಹಿಡಿದು ನಿಲ್ಲಿಸಲು ಸಾಧ್ಯವಿಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಕೇಂದ್ರ ಸರ್ಕಾರ ಹೇಳತೊಡಗಿದ್ದವು. ರೂಪಾಯಿಯ ಬೆಲೆ ಅಲ್ಪಸ್ವಲ್ಪ ಕುಸಿದರೂ ತೀರ ದೊಡ್ಡ ಪ್ರಮಾಣದಲ್ಲೇನು ಕುಸಿಯುವುದಿಲ್ಲ ಎಂಬ ನಂಬಿಕೆಯನ್ನು ಅವರು ವ್ಯಕ್ತಪಡಿಸಿದ್ದರು.

ದರೆ ರೂಪಾಯಿಯ ಬೆಲೆ ತೀವ್ರವಾಗಿ ಕುಸಿಯತೊಡಗಿ ಹಿಂದೆ ಒಂದು ಡಾಲರಿಗೆ 31 ರೂಪಾಯಿಯ ಸುತ್ತ ಮುತ್ತ ಇದ್ದದ್ದು 34.90 ರೂಪಾಯಿಗೆ ಕುಸಿದಾಗ (ಒಂದು ಡಾಲರಿನ ಬೆಲೆ ರೂಪಾಯಿಗಳಲ್ಲಿ ಏರಿದಂತೆಲ್ಲ ರೂಪಾಯಿಯ ಬೆಲೆ ಕುಸಿದಂತೆ) ಭಾರತೀಯ ರಿಸರ್ವ್ ಬ್ಯಾಂಕ್ ಮತ್ತೆ "ನಿಲ್ಲು ಅಲ್ಲೇ ನಿಲ್ಲು ನೀನು ನಿಂತಲ್ಲೇ ಸ್ಥಿರವಾಗು" ಎನ್ನುವಂತೆ ರೂಪಾಯಿಯ ಬೆಲೆಯನ್ನು ಸ್ಥಿರಗೊಳಿಸಲು ಪ್ರಯತ್ನಿಸಿತು.

ರೂಪಾಯಿಯ ಪೂರ್ಣ ಪರಿವರ್ತನೆಯಿಂದ ಏನೂ ದುಷ್ಪರಿಣಾಮ ಆಗದು ಎಂದು ಸುಳ್ಳೇ ರೀಲು ಬಿಡುತ್ತಿದ್ದ ಕೇಂದ್ರ ಸರ್ಕಾರ ರೂಪಾಯಿಯ ಅವಸ್ಥೆಯನ್ನು ನೋಡಿ ಕಂಗಾಲಾಗಿರುವುದಂತೂ ಸ್ಪಷ್ಟ

ಬಹುರಾಷ್ಟ್ರೀಯ ಕಂಪನಿಗಳ ಅಖಾಡಾ ವಾಹಿ ಭಾರತ

ಬಹುರಾಷ್ಟ್ರೀಯ ಕಂಪನಿಗಳ ವ್ಯಾಪಾರೀ ಯುದ್ಧಗಳಿಗೆ ಭಾರತ ಈಗ ಅಖಾಡವಾಗಿ ಮಾರ್ಪಟ್ಟಿದೆ. ಇದು ಮೊದಮೊದಲು ನಮ್ಮಲ್ಲಿನ ಕೆಲವರಿಗೆ ತಮಾಷೆಯಾಗಿ ಕಂಡರು ಬರುವ ದಿನಗಳಲ್ಲಿ ನಮ್ಮ ಜನತೆಗೆ ತೀರಾ ನೋವು ತರುತ್ತವೆ.

ಟೀವಿ ನೋಡುತ್ತಿರುವವರಿಗೆಲ್ಲಾ ಈ ಬಹುರಾಷ್ಟ್ರೀಯ ಕಂಪನಿಗಳ ಪ್ರಚಾರ ವೈಖರಿ ಕಣ್ಣು ಕುಕ್ಕುತ್ತವೆ. ಒಂದು ಉದಾಹರಣೆ ತೆಗೆದುಕೊಳ್ಳೋಣ. ತೀರಾ ಇತ್ತೀಚಿನ ದಿನಗಳಲ್ಲಿ ತಂತಿಗಳಿಲ್ಲದ ಫೋನ್ ಗಳು ಬಂದಿವೆ. ಎಲ್ಲ ಬಹುರಾಷ್ಟ್ರೀಯ ಕಂಪನಿಗಳದ್ದು ನೋಕಿಯಾ ಮೋಟರೋಲಾ ಇತ್ಯಾದಿ ಭಾರೀ ಅಬ್ಬರದ ಪ್ರಚಾರ. ಈ ಪ್ರಚಾರಕ್ಕೆ ಕನಿಷ್ಠ ನೈತಿಕತೆಯ ಜವಾಬ್ದಾರಿಯೂ ಇಲ್ಲ, ಅದು ಬೇರೆ ಪ್ರಶ್ನೆ.

ಇವುಗಳ ದುಷ್ಪರಿಣಾಮವೆಂದರೆ ನಮ್ಮ ಅವಶ್ಯತೆಗಳ [illegible] ಹೋಗುವಂತೆ ಮಾಡಿ ಅವರು ತಮ್ಮ ವ್ಯಾಪಾರ ಮಾಡಿಕೊಂಡು ಹೋಗುವುದು ನಮ್ಮ ದೇಶದ ಸುಮಾರು ತೊಂಬತ್ತು ಕೋಟಿ ಜನರಲ್ಲಿ ಹಲವು ಕೋಟಿ ಜನ ಈಗಲೂ ಎರಡೊತ್ತಿನ ಊಟಕ್ಕೆ ಗತಿಯಿಲ್ಲದವರು ಹಾಗೆಯೇ ಸಂಪರ್ಕ ವ್ಯವಸ್ಥೆ ತೆಗೆದುಕೊಂಡರೆ ನಮ್ಮ ಎಲ್ಲ ಹಳ್ಳಿಗಳಿಗ ಫೋನ್ ವ್ಯವಸ್ಥೆ ಮಾಡುವುದೇ ಆಗಿಲ್ಲ, ಎಲ್ಲರಿಗೆ ಕನಿಷ್ಠ ಪ್ರಮಾಣದಲ್ಲಿ ಬಟ್ಟೆ, ಶಿಕ್ಷಣ, ಆರೋಗ್ಯ ಇತ್ಯಾದಿ ಆವಶ್ಯಕ ಸೌಲಭ್ಯಗಳನ್ನೇ ನಾವು ನೀಡುವುದು ಸಾಧ್ಯವಾಗಿಲ್ಲ, ಇವನ್ನೆಲ್ಲ ಸಾಧಿಸುವುದು ನಮ್ಮ ಗುರಿಯಾಗಬೇಕು.

ಬಹುರಾಷ್ಟ್ರೀಯ ಕಂಪನಿಗಳು ಇವುಗಳಲ್ಲಿ ನಮಗೆ ನೆರವಾಗು[illegible] ಇಲ್ಲ, ನಮ್ಮ ಜನತೆಯಲ್ಲಿ ಹಣವಿದ್ದರೆ ಅದನ್ನು ದೋಚುವ [illegible] ಮಾಡಬಲ್ಲರು.

ಕೆಲವೇ ಕೆಲವರ (ಶ್ರೀಮಂತರ)ಭೋಗಕ್ಕಾಗಿ ಎಲ್ಲ ತರಹದ [illegible] ಗಳನ್ನು ಅವರು ಮಾರಲು ಇಲ್ಲಿ ಬರುತ್ತಾರೆ. ಇ[illegible] ಈ ಕೆಲ ಶ್ರೀ[illegible] ತರು ಬಹುತೇಕ ಜನರನ್ನು ಶೋಷಿಸಿ ಈ ಎಲ್ಲ[illegible] ಅನುಕೂಲ[illegible] ಯುತ್ತಾರೆ.

ಇದೇ ಬಹುರಾಷ್ಟ್ರೀಯ ಕಂಪನಿಗಳು [illegible] ಸಂಸ್ಕೃತಿ

ಹೊಸ ಉತ್ಸಾಹ ತುಂಬಿದ ಸಮ್ಮೇಳನ

ಡಿ.ವೈ.ಎಫ್.ಐ. 5 ನೇ ರಾಜ್ಯ ಸಮ್ಮೇಳನ

ದಕ್ಷಿಣ ಕನ್ನಡ ಜಿಲ್ಲೆ ಇತ್ತೀಚಿನ ದಿನಗಳಲ್ಲಿ ಕಂಡ ಅಪೂರ್ವ ಮೆರವಣಿಗೆ ಅದು. ಜಿಲ್ಲೆಯ ವಿವಿಧ ಭಾಗಗಳಿಂದ ಯುವಜನರು ಹೋರಾಟದ ಸಾಗರಕ್ಕೆ ನದಿಗಳು ಸೇರುವಂತೆ ಸೇರಿದರು. ಮಂಗಳೂರಿನ ಬಾವುಟಗುಡ್ಡೆಗೆ ವಿಶಿಷ್ಟ ಇತಿಹಾಸವಿದೆ. ಬ್ರಿಟಿಷರ ಸಾಮ್ರಾಜ್ಯಶಾಹಿ ನೀತಿ, ದಬ್ಬಾಳಿಕೆಯನ್ನು ವಿರೋಧಿಸಿ ಬ್ರಿಟಿಷರ ಯೂನಿಯನ ಜ್ಯಾಕ್ ಬಾವುಟವನ್ನು ಕೆಳಗಿಳಿಸಿ ತ್ರಿವರ್ಣ ಧ್ವಜವನ್ನು ಅರಳಿಸುವ ಕೆಚ್ಚನ್ನು ದಕ್ಷಿಣ ಕನ್ನಡ ತೋರಿಸಿತ್ತು. ಈ ಕಾರಣಕ್ಕಾಗಿಯೇ ಇದು 'ಬಾವುಟಗುಡ್ಡೆ' ಎಂದೇ ಹೆಸರುವಾಸಿ. ಇಂತಹ ಐತಿಹಾಸಿಕ ಬಾವುಟಗುಡ್ಡೆಯಿಂದ ಮತ್ತೊಂದು ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡುವ ಸ್ಫೂರ್ತಿಯನ್ನು ಹೊತ್ತು ಸಾಗರದಂತೆ ಹರಿದರು.

ಕೆಂಪು ನಕ್ಷತ್ರವನ್ನು ಹೊತ್ತು ಪಟಪಟನೆ ಹಾರುತ್ತಿದ್ದ ಬಿಳಿಯ ಬಾವುಟವನ್ನು ಹಿಡಿದು ಸಮವಸ್ತ್ರ ತೊಟ್ಟ ಡಿ.ವೈ.ಎಫ್.ಐ.ನ ಸಂಗಾತಿಗಳು ಶಿಸ್ತಿನಿಂದ ಹೆಜ್ಜೆಹಾಕಿದರು. ಡಿ.ವೈ.ಎಫ್.ಐ.ನ ಇಂದಿನ, ಹಿಂದಿನ ನಾಯಕರುಗಳು ಹಿನ್ನೆಲೆಗೆ. ಮುಕ್ತಾಯಗೊಳ್ಳುವ ಮನಸ್ಸೇ ಇಲ್ಲದ ಮೆರವಣಿಗೆ. ಯುವಜನರ ಉತ್ಸಾಹವನ್ನು ಬಿಚ್ಚಿಡುವಂತೆ ಮೆರವಣಿಗೆಯ ಉದ್ದಕ್ಕೂ ಹಾಡು, ಕುಣಿತ, ನೃತ್ಯಗಳು.

ದಕ್ಷಿಣ ಕನ್ನಡ ಇದು ಎಂದು ನೆನಪಿಗೆ ತರಿಸುವ ಯಕ್ಷಗಾನ ವೇಷಗಳು, ಕಲ್ಲಡ್ಕದ ಡಿ.ವೈ.ಎಫ್.ಐ. ಸಂಗಾತಿಗಳು ಜೊತೆಯಲ್ಲಿ ತಂದಿದ್ದ ಎರಡಾಳೆತ್ತರದ ಗಾರುಡಿ ಗೊಂಬೆಗಳು, ಕತ್ತಿವರಸೆ, ದೊಣ್ಣೆವರಸೆ ತಂಡಗಳು, ಮುಖಕ್ಕೆ ಮುಖವಾಡ ತೊಟ್ಟು ಹಿನ್ನೆಲೆಯ ವಾದ್ಯದ ಗತ್ತಿಗೆ ತೂಗಿ ಕುಣಿಯುವ ಉತ್ಸಾಹಿಗಳು, ಈ ಎಲ್ಲಕ್ಕೂ ಕಳಸವಿಟ್ಟಂತೆ ಭಗತ್ ಸಿಂಗ್ ಹಾಗೂ ಗ್ಯಾಟ್ ಒಪ್ಪಂದದ ಸ್ತಬ್ಧ ಚಿತ್ರಗಳು.

ಮಂಗಳೂರಿನ ಹೃದಯ ಭಾಗದಲ್ಲಿ ಮೂರು ದಿನಗಳ ಡಿ.ವೈ.ಎಫ್.ಐ. ರಾಜ್ಯ ಸಮ್ಮೇಳನದಲ್ಲಿ ಮೂಡಿ ಬಂದ ನವ ಉತ್ಸಾಹವನ್ನು ಬಿಂಬಿಸುವಂತೆ ಹರಿದ ಈ ಮೆರವಣಿಗೆ ಜನರ ಕಣ್ಮನಗಳನ್ನು ಸೆಳೆದಿತ್ತು.

ಪಶ್ಚಿಮ ಬಂಗಾಳದ ಶಿಕ್ಷಣ ಸಚಿವ ಅನಿಸೂರ್ ರೆಹಮಾನ್ ತುಂಬಿದ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಪ್ರಧಾನಿ ನರಸಿಂಹರಾವ್ ಹಾಗೂ ಅರ್ಥ ಸಚಿವ ಮನಮೋಹನ್ ಸಿಂಗ್ ಅವರು ದೇಶವನ್ನು ಮುಕ್ತ ಮಾರುಕಟ್ಟೆಯನ್ನಾಗಿಸಲು ಹೊರಟಿದ್ದು ಅದನ್ನು ತಡೆಯದಿದ್ದರೆ ದೇಶವು ಸಾರ್ವಭೌಮತೆಯನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಕರೆ ನೀಡಿದರು.

ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನೂರು ದಿವಸಗಳೊಳಗೆ ಬೆಲೆ ಇಳಿಸುವುದಾಗಿ ಹೇಳಿತ್ತು. ಆದರೆ ನರಸಿಂಹರಾಯರ ಹೊಸ ಆರ್ಥಿಕ ನೀತಿಯಿಂದಾಗಿ ಇಂದು ಬೆಲೆಗಳು ಗಗನಕ್ಕೇರಿವೆ. ಉದಾರೀಕರಣದಿಂದಾಗಿ ಭಾರತ ಇತರ ರಾಷ್ಟ್ರಗಳ ಜೊತೆ ಸ್ಪರ್ಧಿಸುತ್ತದೆ ಎನ್ನುತ್ತಾರೆ. ಆದರೆ ಅಮೇರಿಕಾದಂತಹ ರಾಷ್ಟ್ರದ ಜೊತೆ 120 ನೇ ಸ್ಥಾನದಲ್ಲಿರುವ ಬಡ ಭಾರತ ಸ್ಪರ್ಧಿಸುವುದು ಹೇಗೆ ಎಂದು ಪ್ರಶ್ನಿಸಿದರು. ಅಲಿಪ್ತ ದೇಶಗಳಲ್ಲಿ ಮುಖ್ಯ ರಾಷ್ಟ್ರವಾಗಿದ್ದ ಭಾರತ ಈಗ ಹೊಸ ವಿದೇಶ ನೀತಿಯ ಫಲವಾಗಿ ಅಮೇರಿಕಾಗೆ ಮಾರಾಟವಾಗುವ ಹಂತ ತಲುಪಿದೆ ಎಂದು ಟೀಕಿಸಿದರು.

ಡಿ.ವೈ.ಎಫ್.ಐ.ನ ಮುಖ್ಯ ಬೇಡಿಕೆಯಾದ ನಿರುದ್ಯೋಗ ನಿವಾರಣೆಯ ಬಗ್ಗೆ ಮಾತನಾಡಿದ ಅವರು ನಿರುದ್ಯೋಗ ವಿಶ್ವದ ಎಲ್ಲೆಡೆ ಇದೆ, ಅದರ ನಿವಾರಣೆ ಅಸಾಧ್ಯ ಎಂದು ಬೂರ್ಜ್ವಾ ಅರ್ಥಶಾಸ್ತ್ರಜ್ಞರು ಹೇಳುತ್ತಾರೆ. ಆದರೆ ಸೋವಿಯತ್ ಒಕ್ಕೂಟದಲ್ಲಿ ಚೀನಾ, ಕ್ಯೂಬಾ, ಕೊರಿಯಾಗಳಲ್ಲಿ ವಿಯೆಟ್ನಾಂನಲ್ಲಿ ನಿರುದ್ಯೋಗ ಇರಲಿಲ್ಲ. ನಿರುದ್ಯೋಗ ಬೂರ್ಜ್ವಾ ಸಮಾಜದ ಸೃಷ್ಟಿಯಾಗಿದ್ದು ಬಂಡವಾಳಶಾಹಿ ಪದ್ಧತಿ ಇರುವಲ್ಲಿ ನಿರುದ್ಯೋಗ ಇರುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.

ಶಾಸಕ ಜಿ.ವಿ.ಶ್ರೀರಾಮರೆಡ್ಡಿ ಡಿವೈಎಫ್ಐನ ನೂತನ ಅಧ್ಯಕ್ಷ ಎಸ್.ವೈ.ಗುರುಶಾಂತ್, ಕಾರ್ಯದರ್ಶಿ ಪೀಟರ್ ಲೋಬೋ, ಉಪಾಧ್ಯಕ್ಷ ವಸಂತ ಆಚಾರಿ, ಗೋಪಿ, ಬಿ.ಮಾಧವ, ಕೃಷ್ಣಪ್ಪ ಕೊಂಚಾಡಿ, ಯಾದವಶೆಟ್ಟಿ, ಕಾವೇರಿ, ನಾರಾಯಣಸ್ವಾಮಿ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಪಾರಿವಾಳ ಹಾರಿಸಿ ಸಮ್ಮೇಳನ ಉದ್ಘಾಟಿಸುತ್ತಿರುವ ಎಂ.ಎಸ್.ಸತ್ಯು. ಎಂ.ಎ.ಬೇಬಿ.ಎಚ್.ಎಸ್.ನಾಗಮೋಹನ್‌ದಾಸ್.ಎಸ್.ವೈ. ಗುರುಶಾಂತ್ ಅವರೊಂದಿಗೆ

ಸಂಭ್ರಮ ಹರಡಿದ ಸಮ್ಮೇಳನ

ಮಂಗಳೂರಿನಲ್ಲಿ ಡಿ.ವೈ.ಎಫ್.ಐ.ನ ರಾಜ್ಯ ಸಮ್ಮೇಳನ ನಡೆಯುವುದು ಸಂಭ್ರಮದ ವಾತಾವರಣವನ್ನು ಹುಟ್ಟುಹಾಕಿತ್ತು. ದಕ್ಷಿಣ ಕನ್ನಡ ಬಹುತೇಕ ಗೋಡೆಗಳಲ್ಲಿ ಯುವಜನರ ಸಮಸ್ಯೆ ಡಿ.ವೈ.ಎಫ್.ಐ. ಹಾಗೂ ರಾಜ್ಯ ಸಮ್ಮೇಳನದ ಬಗ್ಗೆ ಮಾಹಿತಿ ನೀಡುವ ಗೋಡೆಬರಹಗಳು ಸಾಕಷ್ಟು ಮುಂಚೆಯೇ ಕಾಣಿಸಿಕೊಂಡವು. ಎಲ್ಲಾ ಪ್ರಧಾನ ವೃತ್ತಗಳನ್ನು ಬಣ್ಣ ಬಣ್ಣದ ಕಾಗದಗಳಿಂದ ಸಿಂಗರಿಸಲಾಗಿತ್ತು. ನೂರಾರು ಬ್ಯಾನರುಗಳು, ಪೋಸ್ಟರ್‌ಗಳು ಸಮ್ಮೇಳನದ ಬಗ್ಗೆ ಜನರಿಗೆ ಸುದ್ದಿ ಮುಟ್ಟಿಸಿದವು.

ಸಮ್ಮೇಳನ ನಡೆಯುವ ಕುಮಾರ್ ನಗರ ಬಹಿರಂಗ ಸಭೆ ನಡೆಯುವ ಭಗತ್ ಸಿಂಗ್ ನಗರವಂತೂ ಜನರ ಗಮನ ಸೆಳೆಯುವಂತಿತ್ತು.

ಡಿವೈಎಫ್ಐ ಸಮ್ಮೇಳನದ ಬಗ್ಗೆ ಜಿಲ್ಲೆಯ ಪ್ರತೀ ಕಡೆ ಮನೆ ಮನೆಗೆ ಹೋಗಿ ಸುದ್ದಿ ತಿಳಿಸಲಾಯಿತು. ಪ್ರತಿ ಮನೆಗೆ ಹೋದಾಗಲೂ ಜನ ಪ್ರೀತಿಯಿಂದ ಬರಮಾಡಿಕೊಂಡರು. ನಿಧಿ ಕೊಟ್ಟರು. ಸಮ್ಮೇಳನಕ್ಕೆ ಹಗಲು ರಾತ್ರಿ ತಯಾರಿ ನಡೆದವು" ಎನ್ನುತ್ತಾರೆ ಬಜಾಲ್ ಘಟಕದ ಸದಸ್ಯ ಸಮ್ಮೇಳನದ ಮಾಧ್ಯಮ ಸಮಿತಿಯ ಸದಸ್ಯ ಶರತ್.

ಇದೇ ಪ್ರತಿಕ್ರಿಯೆ ಎಲ್ಲೆಡೆಯೂ ಕಂಡು ಬಂತು. ಡಿ.ವೈ.ಎಫ್.ಐ. ಬಲಿಷ್ಠವಾಗಿರುವ ಪ್ರದೇಶಗಳಲ್ಲಂತೂ ಜನ ಇದು ನಮ್ಮ ಸಮ್ಮೇಳನ ಎಂಬಂತೆ ಉತ್ಸಾಹ ತೋರಿಸಿದರು. ಪಶ್ಚಿಮ ಬಂಗಾಳದ ಶಿಕ್ಷಣ ಸಚಿವ ಅನಿಸೂರ್ ರೆಹಮಾನ್ ದಕ್ಷಿಣ ಕನ್ನಡದಲ್ಲಿ ಶಿಕ್ಷಣ ವ್ಯವಸ್ಥೆ ತಿಳಿಯುವ ಉತ್ಸಾಹದಿಂದ ದಿಢೀರನೇ ಹಲವು ಕಡೆ ಭೇಟಿ ನೀಡಿದಾಗ ಡಿ.ವೈ.ಎಫ್.ಐ. ಕಾರ್ಯಕರ್ತರು ಕೇವಲ ಅರ್ಧ ಗಂಟೆಯಲ್ಲಿ ನೂರಾರು ಜನರನ್ನು ಸಂಘಟಿಸುತ್ತಿದ್ದರು.

"ಇದು ನಮಗೆ ತೃಪ್ತಿ ತಂದ ಸಮ್ಮೇಳನ. ನಮಗೆ ಸಮ್ಮೇಳನ ನಡೆಸಿದ ಅನುಭವ ಇರಲಿಲ್ಲ. ಹೀಗಾಗಿ ಆರಂಭದಲ್ಲಿ ಆತಂಕ ಇತ್ತು. ಆದರೆ ಹಗಲು ರಾತ್ರಿ ಸರಿಯಾಗಿ ಕಾರ್ಯ ನಿರ್ವಹಿಸಿದ್ದರಿಂದ ಸಮ್ಮೇಳನ ಯಶಸ್ವಿಯಾಯಿತು. ಇನ್ನು ಯಾವುದೇ ಸಮ್ಮೇಳನವಾದರೂ ನಾವು ಸಿದ್ಧ" ಎಂದು ಮುಗುಳ್ನಗುತ್ತಾರೆ ಸಮ್ಮೇಳನದ ಹಿಂದಿನ ರೂವಾರಿ ವಸಂತ ಆಚಾರಿ.

ಸಮ್ಮೇಳನ ಮುಗಿದ ನಂತರವೂ ಯಾರಲ್ಲೂ ಸುಸ್ತಾದ ಲಕ್ಷಣಗಳಿಲ್ಲ. ಕಾರಣ ಕೇಳಿ ತಕ್ಷಣವೇ ಉತ್ತರಿಸುತ್ತಾರೆ. -"ಮೆರವಣಿಗೆ ಬಹಿರಂಗ ಸಭೆಗೆ ಅಷ್ಟೊಂದು ಜನ ಸುಸ್ತು ಆಗುವುದಾದರೂ ಹೇಗೆ?"

"ಮಣ್ಣು ಮುಕ್ಕಿಸುವ ಸರ್ಕಾರ"

'ಇದು ಯಾವ ಸರ್ಕಾರ?' ಶಾಸಕ ಜಿ.ವಿ. ಶ್ರೀರಾಮರೆಡ್ಡಿ ಡಿ.ವೈ.ಎಫ್.ಐ.ನ ಬಹಿರಂಗ ಸಭೆಯಲ್ಲಿ ಪ್ರಶ್ನೆ ಎಸೆದರು.

ನನ್ನದು ಮಣ್ಣಿನ ಮಗನ ಸರ್ಕಾರ ಎಂದು ಹೇಳಿಕೊಳ್ಳುತ್ತಿರುವ ದೇವೇಗೌಡರು ರೈತರನ್ನು ಮಣ್ಣು ಮುಕ್ಕಿಸುತ್ತಿದ್ದಾರೆ. ಇದು ಮಣ್ಣು ಮುಕ್ಕಿಸುವ ಸರ್ಕಾರ ಎಂದು ಕಟುವಾಗಿ ಟೀಕಿಸಿದರು.

ಕರ್ನಾಟಕ ಸರ್ಕಾರ ರೈತರು, ಕಾರ್ಮಿಕರ ಹೆಸರೇಳಿಕೊಂಡೇ ತಂದಿರುವ ಭೂಸುಧಾರಣಾ ತಿದ್ದುಪಡಿಯನ್ನು ಟೀಕಿಸಿದ ಶ್ರೀರಾಮರೆಡ್ಡಿ ರೈತರು ಕಾರ್ಮಿಕರಿಗಾದರೆ ಮನೆ ಕಟ್ಟಲು ನನ್ನ ತಲೆಯ ಮೇಲೆ ಜಾಗ ಕೊಡಲಾ ಎಂದು ಪ್ರಶ್ನಿಸುವ ದೇವೇಗೌಡರು ಅದೇ ಬಹುರಾಷ್ಟ್ರೀಯ ಕಂಪನಿಗಳಿಗಾಗಿ ನೂರಾರು ಎಕರೆ ಜಾಗ ಒದಗಿಸಿಕೊಡಲು ಭೂ ಸುಧಾರಣಾ ತಿದ್ದುಪಡಿ ತಂದಿದ್ದಾರೆ.

ಒಂದೆರಡು ಎಕರೆ ಸಾಗುವಳಿ ಸಾಧ್ಯವಿಲ್ಲ, ಮಾರಿಬಿಡಿ ಎಂದು ಪ್ರಚೋದಿಸಿ ಆ ಜಮೀನೆಲ್ಲವನ್ನು ಉಳ್ಳವರಿಗೆ ಎರೆಯುತ್ತಿರುವ ಸರ್ಕಾರ ಮುಂದಿನ ಆಹಾರ ಸಮಸ್ಯೆಯನ್ನೇ ಯೋಚಿಸಿಲ್ಲ.

ಈ ಹಿಂದೆ ದೇವರಾಜ ಅರಸು ಸರ್ಕಾರ ಉಳುವವನೇ ಹೊಲದೊಡೆಯ ಎಂಬ ನೀತಿಯನ್ನು ಜಾರಿಗೆ ತಂದಿತು. ಆದರೆ ಈಗಿನ ದೇವೇಗೌಡರ ಸರ್ಕಾರ ಉಳ್ಳವರಿಗೇ ಜಾಗ ಎನ್ನುವ ನೀತಿಗೆ ಮಣೆ ಹಾಕಿದೆ. ಚಿಕಕ ಹಿಡುವಳಿದಾರರು ಇರುವ ದಕ್ಷಿಣ ಕನ್ನಡಕ್ಕೆ ಈ ನೀತಿ ಹೇಗೆ ಅಪಾಯಕಾರಿ ಎಂಬುದನ್ನು ವಿವರವಾಗಿ ಬಿಡಿಸಿಟ್ಟರು.

ಯುವಜನರಲ್ಲಿ ಇರುವ ಅನಕ್ಷರತೆ ಬಡತನ ಹಾಗೂ ನಿರುದ್ಯೋಗದ ಹತಾಶೆಯನ್ನು ಬಳಸಿಕೊಂಡು ಅವರನ್ನು ತಪ್ಪು ದಾರಿಗೆ ಎಳೆಯಲಾಗುತ್ತಿದೆ. ಯುವಜನರ ಮೂಲ ಸಮಸ್ಯೆಗಳಿಗೆ ಯಾವುದೇ ಸರ್ಕಾರ ಯಾವುದೇ ಕಾರ್ಯಕ್ರಮ ರೂಪಿಸಿಲ್ಲ ಎಂದು ಅವರು ಟೀಕಿಸಿದರು.

ಕೊಜೆಂಟ್ರಿಕ್ಸ್, ಪ್ರತಿಭಾ ಪಲಾಯನದ ಬಗ್ಗೆ ಶ್ರೀರಾಮರೆಡ್ಡಿ ಯುವಜನರ ಗಮನ ಸೆಳೆದರು.

ಕೋಮು ಶಕ್ತಿ ವಿರುದ್ಧ ಹೋರಾಟ: ಎಂ.ಎಸ್. ಸತ್ಯು

ಧರ್ಮ, ಮತ, ಜಾತಿ, ಜನಾಂಗ ಆಧರಿಸಿ ನಮ್ಮನ್ನು ನಾವು ಗುರುತಿಸಿಕೊಳ್ಳುವ ಕೆಟ್ಟ ಪ್ರವೃತ್ತಿಯಿಂದ ಹೊರಬರುವ ನಿಟ್ಟಿನಲ್ಲಿ ಇಂದಿನ ಯುವ ಜನಾಂಗ ಚಿಂತನೆ ನಡೆಸುವ ತುರ್ತು ಅಗತ್ಯ ಇದೆ' ಎಂದು ಖ್ಯಾತ ಚಲನಚಿತ್ರ ನಿರ್ದೇಶಕ ಎಂ.ಎಸ್. ಸತ್ಯು ಅವರು ಇಲ್ಲಿ ತಿಳಿಸಿದರು.

ಭಾರತ ಪ್ರಜಾಸತ್ತಾತ್ಮಕ ಯುವಜನ ಒಕ್ಕೂಟದ (ಡಿ.ವೈ.ಎಫ್.ಐ.) ಐದನೇ ರಾಜ್ಯ ಸಮ್ಮೇಳನವನ್ನು ಪಾರಿವಾಳ ಹಾರಿ ಬಿಡುವುದರ ಮೂಲಕ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

'ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕೋಮು ಶಕ್ತಿಗಳು ವಿಜೃಂಭಿಸುವುದನ್ನು ತಡೆಯುವ ಗುರುತರ ಜವಾಬ್ದಾರಿ ಯುವಜನಾಂಗದ ಮೇಲಿದ್ದು ಅದನ್ನು ಯಶಸ್ವಿಯಾಗಿ ನಿಭಾಯಿಸಲು ಈಗಿನಿಂದಲೇ ಕಾರ್ಯ ಪ್ರವೃತ್ತರಾಗಬೇಕು' ಎಂದರು.

'ಧರ್ಮದ ಆಚರಣೆ ಮತ್ತು ಉದ್ದೇಶ ಭಿನ್ನವಾಗಿರುವುದು ಕಂಡು ಬರುತ್ತಿದೆ. ಧರ್ಮದಲ್ಲಿ ರಾಜಕೀಯ ಬೆರೆತು ಅದರ ಪಾವಿತ್ರ್ಯ ಹಾಳಾಗಿದೆ. ಮಾನವೀಯತೆ ಮರೆತು, ವಿಭಿನ್ನ ಧರ್ಮದ ಜನರಲ್ಲಿ ಅಪನಂಬಿಕೆ ಬಿತ್ತುವ ಕಾರ್ಯದಲ್ಲಿ ತೊಡಗಿರುವ ಧರ್ಮ ಗುರುಗಳು ಸಮಾಜಕ್ಕೆ ಪ್ರಸ್ತುತರೇ ಎಂಬುದರ ಕುರಿತು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಧರ್ಮದಲ್ಲಿ ರಾಜಕೀಯದ ವಿಪರೀತ ಹಸ್ತಕ್ಷೇಪದಿಂದಾಗಿ ಕೋಮುವಾದ ತಲೆ ಎತ್ತಿದೆ. ಈ ಪರಿಸ್ಥಿತಿ ನಿರ್ಮಾಣಕ್ಕೆ ಬಿಜೆಪಿ, ವಿ.ಹೆಚ್.ಪಿ., ಶಿವಸೇನೆ, ಅಕಾಲಿದಳ, ಮುಸ್ಲಿಂ ಲೀಗ್ ಮುಂತಾದವುಗಳು ಸಾಕಷ್ಟು ಕೊಡುಗೆ ನೀಡಿವೆ' ಎಂದರು.

'ಪ್ರಜಾಸತ್ತಾತ್ಮಕ, ಜಾತ್ಯಾತೀತ ವ್ಯವಸ್ಥೆಗೆ ಇಂತಹ ಕೋಮುವಾದಿ ಸಂಸ್ಥೆಗಳ ಕೊಡುಗೆ ಸೊನ್ನೆ. ಪ್ರಜಾಪ್ರಭುತ್ವ ವ್ಯವಸ್ಥೆ ಹಾಳು ಮಾಡಲು ಈ ಸಂಘಟನೆಗಳು ಕಾರ್ಯಪ್ರವೃತ್ತವಾಗಿವೆ. ಇವುಗಳಿಂದಾಗಿ ಸರ್ವರ ಒಳಿತಿಗಾಗಿ ಸ್ವೀಕರಿಸಿದ ವ್ಯವಸ್ಥೆ ಹಾಳಾಗುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ದುಷ್ಟ ಶಕ್ತಿಗಳ ಉಗಮ ಮತ್ತು ಬೆಳವಣಿಗೆಗೆ ಅವಕಾಶ ಕೊಟ್ಟವರಾರು ಎಂಬ ಬಗ್ಗೆ ಚಿಂತಿಸಬೇಕಾಗಿದೆ' ಎಂದರು.

'ಸ್ವಾತಂತ್ರ್ಯ ದೊರೆಯುವ ಕಾಲದಲ್ಲಿ ಬ್ರಿಟಿಷರ ಅಥವಾ ಸ್ಥಳೀಯರ ಕುಟಿಲತೆಯಿಂದ ರಾಷ್ಟ್ರ ಒಡೆದು ಹೋಯಿತು. ಹಲವು ದಶಕಗಳ ನಂತರವೂ ಅದೇ ಕಾರ್ಯದಲ್ಲಿ ತೊಡಗಿರುವುದು ಎಷ್ಟು ಸಮಂಜಸ ಮತ್ತು ಅಪಾಯಕಾರಿ ಕ್ರಮ ಎಂಬುದನ್ನು ಎಲ್ಲರೂ ಅರಿಯಬೇಕಾಗಿದೆ' ಎಂದು ಅಭಿಪ್ರಾಯಪಟ್ಟರು.

ಒಡಕಿನ ಬೀಜ:

ಜಾತಿ, ಧರ್ಮ ಆಧರಿಸಿ ನಮ್ಮನ್ನು ನಾವು ಗುರುತಿಸಿಕೊಳ್ಳುವ ಪ್ರವೃತ್ತಿ ಪ್ರತಿಯೊಬ್ಬನಲ್ಲಿಯೂ ಕ್ರೂರತನ, ಅನ್ಯ ಧರ್ಮೀಯರ ಬಗ್ಗೆ ಅಸಹನೆಯ ಭಾವನೆ ಬೆಳೆಸುತ್ತವೆ. ಪ್ರಾರ್ಥನಾ ಮಂದಿರಗಳಲ್ಲಿಯೇ ಒಡಕಿನ ಬೀಜ ಬಿತ್ತಲಾಗುತ್ತಿದೆ' ಎಂದು ಅವರು ಆರೋಪಿಸಿದರು.

'ಜಾತಿ, ಮತ, ಕೋಮು ಭಾವನೆ ಭಾಷಾಭಿಮಾನ ಮುಂತಾದವುಗಳಿಗೆ ಅನಗತ್ಯ ಹಿರಿಮೆ, ಪ್ರಾಶಸ್ತ್ಯ ನೀಡುತ್ತ ಹೋದರೆ ಭವಿಷ್ಯತ್ತಿನಲ್ಲಿ ಎಂದಿಗೂ ಸರಿಪಡಿಸಲಾಗದ ದುರಂತ ಎದುರಿಸಬೇಕಾಗುದೀತು' ಎಂದು ಅವರು ಎಚ್ಚರಿಸಿದರು.

'ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ಸರ್ಕಾರ, ಸಮಾಜ ಪ್ರಾಮಾಣಿಕ ಪ್ರಯತ್ನ ಮಾಡಲು ವಿಫಲವಾದ ಪರಿಣಾಮವಾಗಿಯೇ ದೇಶದ ಕೆಲವೆಡೆ ಯುವಕರು ಶಸ್ತ್ರ ಕೈಗೆತ್ತಿಕೊಂಡಿದ್ದಾರೆ. ಅನೈಕ್ಯತೆಗೆ ಬಾಹ್ಯ ಶಕ್ತಿಗಳು ಪ್ರಚೋದನೆ ನೀಡುತ್ತಿವೆಯೆಂದು ಆಪಾದಿಸುವುದರಲ್ಲಿ ಅರ್ಥವಿಲ್ಲ' ಎಂದರು.

ಡಿವೈಎಫ್ಐ ಅಖಿಲ ಭಾರತ ಅಧ್ಯಕ್ಷ ಹಾಗೂ ರಾಜ್ಯ ಸಭಾ ಸದಸ್ಯ ಎಂ.ಎ. ಬೇಬಿ ಅವರು ಮಾತನಾಡಿ ಕೋಮುವಾದಿಗಳು, ವಿಚ್ಛಿದ್ರಕಾರಿ ಶಕ್ತಿಗಳು ಯುವಜನಾಂಗದ ಹತಾಶೆಯನ್ನು ಬಳಸಿಕೊಂಡು ಅವರನ್ನು ಹಾಳು ಮಾಡುತ್ತಿವೆ, ಯುವ ಚಳವಳಿ ಮುಂದೆ ಹೆಜ್ಜೆ ಹಾಕದಂತೆ ತಡೆಯಲು ಪ್ರಯತ್ನಿಸುತ್ತಿವೆ ಎಂದರು.

ಕೋಮುವಾದಿಗಳು ಇಂದು ಸಮಾಜದಲ್ಲಿ ಅಸಹನೆಯ ವಾತಾವರಣವನ್ನು ನಿರ್ಮಿಸಿದ್ದಾರೆ. ಒಂದು ಕಥೆ, ಒಂದು ಚಲನಚಿತ್ರವನ್ನು ವಿಮರ್ಶಿಸುವ ಪ್ರವೃತ್ತಿ ತೊಡೆದುಹಾಕಿ ಅಲ್ಲಿ ಅಸಹನೆ ಬೆಳೆಸಿದೆ ಈ ಕಾರಣಕ್ಕಾಗಿಯೇ 'ಬಾಂಬೆ' ಸಿನೆಮಾ ವಿರುದ್ಧ ಪತ್ರಿಕೆಯಲ್ಲಿ ಪ್ರಕಟವಾದ ಕಥೆ ವಿರುದ್ಧ ರಕ್ತ ದೋಕುಳಿ ನಡೆಯುವ ಪರಿಸ್ಥಿತಿ ಬಂದಿದೆ ಎಂದು ವಿಷಾದಿಸಿದರು.

ಕೋಮುವಾದ ರಾಜಕೀಯ ಶಕ್ತಿ ಆಗುವುದರ ವಿರುದ್ಧ ಹೋರಾಡುವಂತೆ ಯುವಜನರಿಗೆ ಬೇಬಿ ಕರೆ ನೀಡಿದರು. ಸಾಹಿತಿ, -ನಟ ಜಿ.ಕೆ. ಗೋವಿಂದರಾಜು ಅವರು ಸಭೆಯಲ್ಲಿ ಉಪಸ್ಥಿತರಿದ್ದರು.

ಸಭೆಗೆ ಮುನ್ನ ಡಿ.ವೈ.ಎಫ್.ಐ. ರಾಜ್ಯ ಅಧ್ಯಕ್ಷ ಎಚ್.ಎನ್. ನಾಗಮೋಹನ್ ದಾಸ್ ಧ್ವಜಾರೋಹಣ ಮಾಡಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಗುರುಶಾಂತ್ ಪ್ರಾಸ್ತಾವಿಕ ಭಾಷಣ ಮಾಡಿದರು. ಗೋಪಾಲಕೃಷ್ಣ ಸಂದೇಶ ವಾಚಿಸಿದರು. ವಸಂತ ಆಚಾರಿ ಸ್ವಾಗತಿಸಿದರು. ಯಾದವ ಶೆಟ್ಟಿ ವಂದಿಸಿದರು.

ನಿಮಗೆ ಕೆಂಪು ವಂದನೆ

ಕಾಮ್ರೇಡ್ ಕುಮಾರ್ ಗೆ ಕೆಂಪು ವಂದನೆ. ಕೆಂಪು ವಂದನೆ ಕೆಂಪು ವಂದನೆ. ಯುವ ಜನರ ಸಮಸ್ಯೆಗಳಿಗಾಗಿ ಹೋರಾಡುತ್ತಲೇ ಪ್ರಾಣ ತೆತ್ತ ತಮಿಳುನಾಡಿನ ಡಿ.ವೈ.ಎಫ್.ಐ ಕಾರ್ಯಕರ್ತ ಕಾಮ್ರೇಡ್ ಕುಮಾರ್ ನೆನಪಿಗಾಗಿ ಸಮ್ಮೇಳನದ ಸ್ಥಳವನ್ನು ಕುಮಾರ್ ನಗರವಾಗಿ ಮಾರ್ಪಡಿಸಲಾಗಿತ್ತು.

ಕಾಮ್ರೇಡ್ ಕುಮಾರ್ ಪರಿಚಯ ಮಾಡಿಸಿದ ತಕ್ಷಣವೇ ಪ್ರತಿನಿಧಿಗಳು ಕೆಂಪು ವಂದನೆ ಮೊಳಗಿಸಿದರು. ಎಲ್ಲರೊಡನಿದ್ದು ಎಲ್ಲರಿಗಾಗಿ ಹೋರಾಡಿ ಹೋರಾಟಗಳಲ್ಲಿ ಪ್ರಾಣತೆತ್ತ ಯುವ ಕಾರ್ಯಕರ್ತರು, ಎಸ್.ಎಫ್.ಐ. ಸಂಗಾತಿಗಳು, ಪಕ್ಷದ ಹಿರಿಯರನ್ನು ಸಮ್ಮೇಳನ ನೆನಪಿಸಿಕೊಂಡಿತು.

ಡಿ.ವೈ.ಎಫ್.ಐ.ನ ಕೆಂಪು ನಕ್ಷತ್ರ ಹೊತ್ತ ಬಾವುಟವನ್ನು ಎತ್ತಿ ಹಿಡಿಯಲು ಹೋರಾಡಿದ ಎಲ್ಲಾ ಸಂಗಾತಿಗಳ ನೆನಪು ಸಮ್ಮೇಳನದಲ್ಲಿ ಅನುರಣನಗೊಂಡಿತು.

ಡಿ.ವೈ.ಎಫ್.ಐ. ಕಾರ್ಯಕರ್ತರು ಹುತಾತ್ಮ ಸ್ತಂಭಕ್ಕೆ ಹೂಪಕಳೆಗಳನ್ನು ಚೆಲ್ಲಿ ಕೆಂಪು ವಂದನೆ ಸಲ್ಲಿಸಿ ಮುನ್ನಡೆದರು.

ವಿಶ್ವಬ್ಯಾಂಕ್, ಐ.ಎಂ.ಎಫ್.ನ ಪ್ರಜಾಪ್ರಭುತ್ವೀಕರಣವಾಗಬೇಕು.

132 ಮೂರನೇ ಜಗತ್ತಿನ ದೇಶಗಳ ಒತ್ತಾಯ

ವಿಶ್ವಸಂಸ್ಥೆಯ ವ್ಯವಸ್ಥೆಯ ಸುಧಾರಣೆಯ ಭಾಗವಾಗಿ ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕ್ ನ ಕಾರ್ಯ ನಿರ್ವಹಣೆಯಲ್ಲಿ ಪ್ರಜಾಪ್ರಭುತ್ವೀಕರಣ ತರಬೇಕು ಎಂದು 132 ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಒಂದು ಜಂಟಿ ಘೋಷಣೆಯಲ್ಲಿ ಒತ್ತಾಯಿಸಿವೆ. ಕಳೆದ ತಿಂಗಳು ಅಮೇರಿಕನ್ ಸರಕಾರ ಬಿಡುಗಡೆ ಮಾಡಿದ ಒಂದು ಪ್ರಬಂಧ ವಿಶ್ವಸಂಸ್ಥೆಯ, ಅದರ ಎಲ್ಲಾ ಅಂಗ ಸಂಘಟನೆಗಳ ಸುಧಾರಣೆಯಾಗಬೇಕು, ಕೆಲವು ಸಂಸ್ಥೆಗಳನ್ನು ರದ್ದುಮಾಡಬೇಕೆಂದು ಪ್ರತಿಪಾದಿಸಿತ್ತು. ಆದರೆ ಅದರಲ್ಲಿ ಈ ಎರಡು ಸಂಸ್ಥೆಗಳ ಬಗ್ಗೆ ಪ್ರಸ್ತಾಪ ಕೂಡಾ ಇರಲಿಲ್ಲ. '77 ರ ಗುಂಪಿನ'ನ ದೇಶಗಳ ವಿದೇಶಾಂಗ ಮಂತ್ರಿಗಳ ಒಂದು ಸಭೆ ವಾಶಿಂಗ್ಟನ್ ನಲ್ಲಿರುವ ಈ ಸಂಸ್ಥೆಗಳ ಉದ್ದೇಶ ಹಾಗೂ ಕಾರ್ಯನಿರ್ವಹಣೆಯ ಪುನರ್ವಿಮರ್ಶೆ ಹಾಗೂ ಪುನರ್ನಿರೂಪಣೆಯಾಗಬೇಕು ಎಂದಿದೆ.

ವಿಶ್ವಸಂಸ್ಥೆಯ ಇತರೆಲ್ಲಾ ಸಂಘಟನೆಗಳು 'ಒಂದು ದೇಶ-ಒಂದು ಮತ'ದ ನೀತಿಯ ಮೇಲೆ ಕಾರ್ಯನಿರ್ವಹಿಸಿದರೆ ಈ ಎರಡು ಸಂಸ್ಥೆಗಳಲ್ಲಿ ಮಾತ್ರ ಮತದಾನದ ಹಕ್ಕು ಕೈಗಾರೀಕೃತ ದೇಶಗಳ ಪರವಾಗಿ ಇದೆ.

"ವಿಶ್ವ ಬ್ಯಾಂಕ್ ಮತ್ತು ಐ.ಎಂ.ಎಫ್. ಶಕ್ತಿಶಾಲಿ ಹಾಗೂ ಶ್ರೀಮಂತ ಲೇವಾದೇವಿಗಾರರಿಗೆ ಸಾಲ ವಸೂಲಿ ಮಾಡಿಕೊಡುವ ಕೆಲಸ ಮಾಡುವುದನ್ನು ನಿಲ್ಲಿಸಬೇಕು" ಎಂದು ಮಲೇಶ್ಯಾದ ಪ್ರಧಾನ ಮಂತ್ರಿ ಹೇಳಿದರೆ ಸಾಕಷ್ಟು ಹಣಕಾಸು ಸಂಪನ್ಮೂಲವಿಲ್ಲದೆ ವಿಶ್ವಸಂಸ್ಥೆಯ ವ್ಯವಸ್ಥೆಯನ್ನು ಸುಧಾರಿಸುವ ಮಾತು ನಿರರ್ಥಕ ಎಂದು ದಕ್ಷಿಣ ಆಫ್ರಿಕಾದ ರಾಯಭಾರಿ ಹೇಳಿದ್ದಾರೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳನ್ನು ತಟ್ಟುವ ನಿರ್ಣಯಗಳು ಈಗ ಹೆಚ್ಚೆಚ್ಚಾಗಿ ಐ.ಎಂ.ಎಫ್., ವಿಶ್ವಬ್ಯಾಂಕ್, ಡಬ್ಲ್ಯು.ಟಿ.ಓ ಹಾಗೂ ಶ್ರೀಮಂತ ದೇಶಗಳ ಗುಂಪು-7 ಕೈಯಲ್ಲಿ ಕೇಂದ್ರೀಕೃತವಾಗುವಂತಿದೆ. ವಿಶ್ವಸಂಸ್ಥೆಯನ್ನು ಮೂಲೆಗೊತ್ತಲಾಗುತ್ತಿದೆ ಎಂದು ಇಂಡೋನೇಷ್ಯಾದ ವಿದೇಶಾಂಗ ಮಂತ್ರಿ ಹೇಳಿದ್ದಾರೆ.

ಬೋಸ್ನಿಯಾದಲ್ಲಿ ಕೊನೆಗೂ ಸಮರ ವಿರಾಮ

ಅಕ್ಟೋಬರ್ 12ರಂದು ಇಡೀ ಬೋಸ್ನಿಯಾದಲ್ಲಿ ಯುದ್ಧವಿರಾಮ ಜ್ಯಾರಿಗೆ ಬಂದಿದೆ ಎಂದು ತಿಳಿದುಬಂದಿದೆ. ನಾಲ್ಕು ವರ್ಷಗಳ ಕಾಲ ಈ ಪ್ರದೇಶದಲ್ಲಿ ನಡೆಯುತ್ತಾ ಬಂದಿರುವ ಹಿಂಸಾತ್ಮಕ ಜನಾಂಗೀಯ ಕಲಹಕ್ಕೆ ತಾತ್ಕಾಲಿಕ ವಿರಾಮ ಸದ್ಯ ಉಂಟಾದಂತಿದೆ. ಈ ಯುದ್ಧ ವಿರಾಮ ಜ್ಯಾರಿ ಬರುವಾಗಲೂ 48 ಗಂಟೆಗಳ ವಿಳಂಬವಾಯಿತು. ಇದು 60 ದಿನಗಳ ಕಾಲ ಮುಂದುವರಿಯಬೇಕೆಂಬ ಒಪ್ಪಂದವಾಗಿದೆ. ಈ ನಡುವೆ ಅಕ್ಟೋಬರ್ 31 ರಿಂದ ಶಾಂತಿ ಮಾತುಕತೆಗಳು ನಡೆಯಬೇಕಾಗಿದೆ. ಅಲ್ಲಲ್ಲಿ ಇನ್ನೂ ಕಾದಾಟಗಳು ನಡೆಯುತ್ತಿದ್ದಾಗ್ಯೂ ಕೆಲವೇ ದಿನಗಳೊಳಗೆ ಅದು ಸಂಪೂರ್ಣ ನಿಲ್ಲಬಹುದು ಎಂದು ವಿಶ್ವಸಂಸ್ಥೆಯ ಅಧಿಕಾರಿಗಳು ಆಶಯ ವ್ಯಕ್ತಪಡಿಸಿದ್ದಾರೆ.

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬುಟ್ರೋಸ್ ಬುಟ್ರೋಸ್ ಘಾಲಿ ಈ ಸಮರ ವಿರಾಮ ಒಪ್ಪಂದಕ್ಕೆ ಮಾನ್ಯತೆ ನೀಡಿ ಒಂದು ಶಾಂತಿಯುತ ಇತ್ಯರ್ಥದತ್ತ ಸಾಗಬೇಕು ಎಂದು ಕರೆ ನೀಡಿದ್ದಾರೆ.

ಅಮೇರಿಕಾದ ಕಡೆಯಿಂದ ಬಂದಿರುವ ಈ ಶಾಂತಿ ಯೋಜನೆಯ ಪ್ರಕಾರ ಬೋಸ್ನಿಯಾ ಒಂದು ದೇಶವಾಗಿ ಉಳಿಯುತ್ತದೆಯಂತೆ, ಆದರೆ ಎಂದು ಪ್ರತ್ಯೇಕ ಮುಸ್ಲಿಂ-ಕ್ರೋಟ್ ಹಾಗೂ ಬೋಸ್ನಿಯಾ ಸರ್ಬ್ ಅಸ್ತಿತ್ವಗಳಿಗಾಗಿ ವಿಭಜಿಸಲಾಗುತ್ತದಂತೆ. ಇವೆರೆಡರ ಒಂದು ಒಕ್ಕೂಟ ರಚಿಸಿ ಅಧಿಕಾರ ಹಂಚಿಕೊಳ್ಳುವ ಯೋಜನೆ ಇದರಲ್ಲಿದೆ. ಇದರಿಂದ 'ಮಹಾನ್ ಸರ್ಬಿಯಾ' ರಚಿಸುವ ಬೋಸ್ನಿಯಾದ ಸರ್ಬಿಯನ್ನರ ಆಕಾಂಕ್ಷೆ ಈಡೇರದಿದ್ದರೂ ಅದು ಅವಿಭಜಿತ ದೇಶವಾಗಿರಬೇಕು ಎಂಬ ಬೋಸ್ನಿಯಾ ಸರಕಾರದ ಆಶಯವೂ ಈಡೇರಲಿಲ. ಅದು ಪಾಶ್ಚಿಮಾತ್ಯ ದೇಶಗಳು ಎಂದೂ ಬೆಂಬಲಿಸಿರಲಿಲ್ಲ. ಕೂಡಾ ಜನಾಂಗೀಯ ಆಧಾರದ ಮೇಲೆ ವಿಭಜಿಸುವುದೇ ಅವರ ಆಶಯವಿದ್ದಂತಿತ್ತು. ಈಗ ಈ ಯೋಜನೆ "ಇಬ್ಭಾಗವಲ್ಲ, ವಿಭಜನೆ ಮಾತ್ರ" ಎನ್ನುತ್ತಿದ್ದಾರೆ ಈ ಪಾಶ್ಚಿಮಾತ್ಯರು. ಈ ವಿಭಜಿತ ಒಕ್ಕೂಟ ಹೇಗೆ ಕೆಲಸ ಮಾಡುತ್ತದೋ, ನಾಲ್ಕು ವರ್ಷಗಳ ಕಾಲ ಈ ಪ್ರದೇಶದ ಜನ ಅನುಭವಿಸಿದ ದುಸ್ವಪ್ನಗಳ ಕೊನೆಗಾಣುತ್ತವೋ ಕಾದು ನೋಡಬೇಕಾಗಿದೆ.

ಸಾಮ್ರಾಜ್ಯಶಾಹಿ ಮಧ್ಯಪ್ರವೇಶ ಹಿಂದಿನ ಈ ಯುಗೋಸ್ಲಾವಿಕಿಯಾ ದೇಶವನ್ನು ಐದು ಪ್ರತ್ಯೇಕ ದೇಶಗಳನ್ನಾಗಿ ಒಡೆಯಿತು. ಈಗ ಅದನ್ನು ಒಂಭತ್ತು ದೇಶಗಳಾಗಿ ಒಡೆಯುವ ಗುರಿ ಹೊಂದಿದೆ. ತನ್ನ ಗುರಿ ಈಡೇರಿಕೆಗೆ ಅದು ಪ್ರಚೋದಿಸಿದ ಪ್ರತ್ಯೇಕತೆ ಸಾಮ್ರಾಜ್ಯಶಾಹಿಯ ಮುಖಕ್ಕೆ ಮಸಿ ಬಳಿಯುವಂತಾದರೂ ಬೋಸ್ನಿಯಾದ ಜನತೆಯನ್ನು ದುರವಸ್ಥೆಗೀಡು ಮಾಡುವಲ್ಲಿ ಅದು ಯಶಸ್ವಿಯಾಗಿದೆ.

ದಕ್ಷಿಣ ಕೊರಿಯಾ: ಅಮೇರಿಕನ್ ಶಸ್ತ್ರಾಸ್ತ್ರ ಹತೋಟಿಗೆ ಪ್ರತಿರೋಧ

ದಕ್ಷಿಣ ಕೊರಿಯಾದ ಸ್ವತಂತ್ರ ಅಭಿವೃದ್ಧಿ ಹಾಗೂ ಅಮೇರಿಕನ್ ತಂತ್ರಜ್ಞಾನದಿಂದ ಉತ್ಪಾದಿಸಿದ ಶಸ್ತ್ರಾಸ್ತ್ರಗಳ ರಫ್ತಿನ ಮೇಲೆ ಅಮೇರಿಕಾ ಹಾಕಿರುವ ಮಿತಿಗಳ ವಿರುದ್ಧ ದಕ್ಷಿಣ ಕೊರಿಯಾದ ಶಾಸಕರು ಕಳೆದ ತಿಂಗಳ ಅಂತ್ಯದಲ್ಲಿ ಒಂದು ಪ್ರಚಾರ-ಪ್ರಕ್ಷೋಭೆ ಆರಂಭಿಸಿದ್ದಾರೆ.

ಅಮೇರಿಕಾದ ಪಡೆಗಳನ್ನು ದೀರ್ಘ ಕಾಲದ ಆಧಾರದಲ್ಲಿ ದಕ್ಷಿಣ ಕೊರಿಯಾದಲ್ಲಿಡಲು ದಕ್ಷಿಣ ಕೊರಿಯಾ ಸರಕಾರದೊಡನೆ ಒಂದು ಸಂಧಿ ಮಾಡಿಕೊಂಡಿದೆ. ಅದೇ ರೀತಿ ಮಿಲಿಟರಿ ಸಹಕಾರದ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಆದರೆ ಇದು ತಮ್ಮ ದೇಶ ಸ್ವತಂತ್ರ ಸೇನಾ ವ್ಯವಸ್ಥೆ ಬೆಳೆಸಿಕೊಳ್ಳದಂತೆ ಮಾಡಿರುವ ಉಪಾಯ ಎಂಬ ಭಾವನೆ ಬೆಳೆದಿದ್ದು ಈ ಎಲ್ಲಾ ಒಪ್ಪಂದಗಳ ವಿರುದ್ಧ ಪ್ರಚಾರ ನಡೆಯುತ್ತಿದೆ. ಇಂತಹ ಅನ್ಯಾಯದ ರಕ್ಷಣಾ ಸಂಧಿಗಳನ್ನೆಲ್ಲಾ ರದ್ದು ಮಾಡಬೇಕೆಂಬ ಒತ್ತಾಯ ಸಂಸತ್ತಿನಲ್ಲಿ ಬಂತು. ಆಳುವ ಪಕ್ಷದ ಸದಸ್ಯರೂ ಅದಕ್ಕೆ ಬೆಂಬಲ ವ್ಯಕ್ತಪಡಿಸಿದರು.

ನಿಕರಾಗುವಾದಲ್ಲಿ ಹೊಸ ರಾಜಕೀಯ ಬಿಕ್ಕಟ್ಟು

1996ರಲ್ಲಿ ಅಧ್ಯಕ್ಷೀಯ ಚುನಾವಣೆಗಳು ಸಮೀಪಿಸುತ್ತಿರುವಂತೆ ನಿಕರಾಗುವಾದಲ್ಲಿ ಹಿಂಸಾಚಾರಗಳು ಹೆಚ್ಚುತ್ತಿವೆ. ಸಾರ್ವಜನಿಕ ಸಂಸ್ಥೆಗಳು, ಕ್ಯಾಥೋಲಿಕ್ ಚರ್ಚ್‌ಗಳ ಮೇಲೆ ಸ್ಫೋಟಕಗಳಿಂದ ಹಲ್ಲೆಗಳು ನಡೆಯುತ್ತಿವೆ. ಕಳೆದ ಮೂರು ತಿಂಗಳಲ್ಲಿ ಇಂತಹ 20ಹಲ್ಲೆಗಳು ನಡೆದಿವೆಯಂತೆ. ಈ ದಕ್ಷಿಣ ಅಮೇರಿಕಾದ ದೇಶದಲ್ಲಿ ಹೊಸದೊಂದು ರಾಜಕೀಯ ಬಿಕ್ಕಟ್ಟಿನ ಲಕ್ಷಣಗಳಿವು ಎಂದು ವೀಕ್ಷಕರ ಅಭಿಪ್ರಾಯ. ಇದರಿಂದ ನಿಕರಾಗುವಾ ಸಮಾಜದಲ್ಲಿ ಧ್ರುವೀಕರಣ ಹೆಚ್ಚುತ್ತಿದೆ. ಬಲಪಂಥೀಯ ಶಕ್ತಿಗಳು ಈ ಹಲ್ಲೆಗಳ ಲಾಭ ಪಡೆದು ಸ್ಯಾಂಡಿನಿಸ್ಟಾ ರಾಷ್ಟ್ರೀಯ ವಿಮೋಚನಾ ರಂಗ (FSLN) ಮೇಲೆ ಮತ್ತೆ ತೀವ್ರ ವಿಷ ಕಾರಲಾರಂಭಿಸಿವೆ. ಎಫ್ ಎಸ್ ಎಲ್ ಎನ್ ಮುಖಂಡ ಹಾಗೂ ಹಿಂದಿನ ಅಧ್ಯಕ್ಷ ಡೇನಿಯಲ್ ಒರ್ಟೆಗಾ ವಿರುದ್ಧ ಅಪಪ್ರಚಾರಕ್ಕೆ ಇವನ್ನು ಬಳಸಿಕೊಳ್ಳಲಾಗುತ್ತದೆ. ಎಫ್.ಎಸ್.ಎಲ್.ಎನ್. ಈ ಆಪಾದನೆಗಳು ಬುಡವಿಲ್ಲದ್ದು ಎಂದು ತಿರಸ್ಕರಿಸಿದ್ದಾರೆ.

ಈ ನಡುವೆ ನಿಕರಾಗುವಾದ ಶಾಸಕಾಂಗ ಮತ್ತು ಕಾರ್ಯಾಂಗದ ನಡುವೆ ತಿಕ್ಕಾಟ ಹೆಚ್ಚುತ್ತಿದೆ. ರಾಷ್ಟ್ರೀಯ ಅಸೆಂಬ್ಲಿಯ ಅನುಮತಿ ಪಡೆಯದೆ ಸರಕಾರ ಕಳೆದ ಮೂರು ತಿಂಗಳಲ್ಲಿ 18 ಆಜ್ಞೆಗಳು ಹೊರಡಿಸಿವೆ. ಇವನ್ನೆಲ್ಲಾ ರದ್ದು ಮಾಡಬೇಕೆಂಬ ಪ್ರಸ್ತಾಪ ಈಗ ಅಸೆಂಬ್ಲಿಯಲ್ಲಿ ಚರ್ಚೆಯಲ್ಲಿದೆ.

ಕ್ರಿಮಿನಲ್ ಹಣಕ್ಕಾಗಿ ಸ್ವಿಸ್ ಬ್ಯಾಂಕ್ ಗಳು!

ಈ ಟೀಕೆ ಬಂದಿರುವುದು ಸ್ವಿಟ್ಜರ್‌ಲೆಂಡಿನ ಪ್ರಧಾನ ಪ್ರಾಸಿಕ್ಯೂಟರಿಂದಲೇ. ದೇಶದ ಬ್ಯಾಂಕುಗಳು ಕಪ್ಪು ಹಣವನ್ನು ಬಿಳಿ ಮಾಡುವುದನ್ನು ತಪ್ಪಿಸಲು ಏನೇನೂ ಮಾಡುತ್ತಿಲ್ಲ, ಇಂತಹ ಸಂದರ್ಭಗಳಲ್ಲಿ ಪ್ರಮುಖ ಮಾಹಿತಿ ಕೂಡಾ ವಿದೇಶಗಳಿಂದಲೇ ಬಂದಿದೆ ಎಂದು ಅವರು ಖೇದ ವ್ಯಕ್ತಪಡಿಸಿದ್ದಾರೆ.

ಕಪ್ಪು ಹಣವನ್ನು ಬಿಳಿ ಮಾಡುವವರು ಮುಖ್ಯವಾಗಿ ಮಾದಕ ದ್ರವ್ಯಗಳ ಸಾಗಾಣಿಕೆದಾರರು ತಮ್ಮ ಲಾಭವನ್ನು ಸ್ವಿಟ್ಜರ್‌ಲೆಂಡಿನ ಬ್ಯಾಂಕುಗಳಲ್ಲಿ ಇಡುತ್ತಾರೆ. ಏಕೆಂದರೆ ಗುಟ್ಟನ್ನು ಕಾಪಾಡುವುದರಲ್ಲಿ ಹೆಸರಾದ ಬ್ಯಾಂಕುಗಳಿವು. ಇದನ್ನು ಪರಿಣಾಮಕಾರಿಯಾಗಿ ಎದುರಿಸಲಾಗದಿದ್ದರೆ ದೇಶದ ಆರ್ಥಿಕ, ಭದ್ರತೆಗೂ ರಾಜಕೀಯ ಸಂಸ್ಥೆಗಳಿಗೂ ಕುತ್ತು ಬರಲಿದೆ ಎಂದು ಅವರು ಎಚ್ಚರಿಸಿದ್ದಾರೆ.

ಕರಾಚಿ ಉರಿಯುತ್ತಲೇ ಇದೆ: ಭದ್ರತಾ ಏಜೆಂಸಿಗಳಿಗೆ ವರದಾನ

ಪಾಕಿಸ್ತಾನದ ಅತೀ ದೊಡ್ಡ ಹಾಗೂ ಅತ್ಯಂತ ಪ್ರಮುಖ ಹಣಕಾಸು ನಗರದ ಕರಾಚಿ ಈಗ ಅಲ್ಲಿನ ಜನರಿಗೆ, 'ಮುಖ್ಯವಾಗಿ ಮೊಹಾಜಿರ್ ಗಳಿಗೆ ಒಂದು ದುಸ್ವಪ್ನವಾಗಿ ಪರಿಣಮಿಸಿದೆ. 1.2 ಕೋಟಿ ಜನಸಂಖ್ಯೆಯ ಈ ನಗರದಲ್ಲಿ ಈ ವರ್ಷ ಒಟ್ಟು 1500 ಮಂದಿ ಹಿಂಸಾಚಾರಕ್ಕೆ ಬಲಿಯಾಗಿದ್ದಾರೆ ಎಂದು ಅಂದಾಜು ಮಾಡಲಾಗಿದೆ. "ನೀನು ಮೊಹಾಜಿರ್ ಆಗಿದ್ದರೆ, ನಿವು ಬದುಕಿರಬಾರದು. ನೀನು ಸಾಯಬೇಕು" ಇದು ಅಲ್ಲಿ ಬೆನಝಿರ್ ಸರಕಾರದ ಪೋಲೀಸರ ನೀತಿಯಾಗಿರುವಂತಿದೆ ಎಂದು ಒಬ್ಬ ಪ್ರಾಧ್ಯಾಪಕರು ಹೇಳುತ್ತಾರೆ.

ಈ ಭಯದ ವಾತಾವರಣ ಪಾಕಿಸ್ತಾನದ ಭದ್ರತಾ ಏಜೆಂಸಿಗಳಿಗೆ ಮಾತ್ರ ದೊಡ್ಡ ವರವಾಗಿ ಪರಿಣಮಿಸಿದೆಯಂತೆ. ಹಣಕೊಟ್ಟು ಭದ್ರತೆಯನ್ನು ಖರೀದಿಸಬಲ್ಲ ಶ್ರೀಮಂತರು ಖಾಸಗೀ ಭದ್ರತಾ ಏಜೆಂಸಿಗಳ ಸಹಾಯ ಪಡೆಯುತ್ತಿದ್ದಾರೆ. ಇದರಿಂದಾಗಿ ಇಂತಹ ಏಜೆಂಸಿಗಳಿಗೆ ಬೇಡಿಕೆ ನಾಲ್ಕು ಪಟ್ಟು ಏರಿದೆಯಂತೆ. ಈ ವಲಯದ ಮಾಸಿಕ ಟರ್ನ್ ಓವರ್ ಇದರಿಂದಾಗಿ ಈಗ 5 ಕೋಟಿ ರೂ.ಗಳಂತೆ!

ವಿಯೆಟ್ನಾಂನಲ್ಲಿ ಬಡವರಿಗೆ ಬ್ಯಾಂಕ್

ವಿಯೆಟ್ನಾಂ ತನ್ನ ಬಡವರು ಜೀವನೋಪಾಯ ಕಂಡುಕೊಳ್ಳಲು ನೆರವಾಗುವಂತೆ ಒಂದು ಲಾಭವಿಲ್ಲದ ಬ್ಯಾಂಕ್ ಸ್ಥಾಪಿಸಲಿದೆ. ದೇಶ-ವಿದೇಶದ ಸಂಘಟನೆಗಳು, ವ್ಯಕ್ತಿಗಳಿಂದ ಬಂಡವಾಳವನ್ನು, ಸರಕಾರ ಹಾಗೂ ಇತರ ಮೂಲಗಳಿಂದ ಸಾಲಗಳನ್ನು ಪಡೆದು ದೈಹಿಕವಾಗಿ ಸಮರ್ಥವಾಗಿರುವ ಆದರೆ ತಮ್ಮದೇ ವ್ಯವಹಾರ ನಡೆಸುವಷ್ಟು ಸಂಪನ್ಮೂಲಗಳಿಲ್ಲದ ವ್ಯಕ್ತಿಗಳಿಗೆ ಕಮ್ಮಿ ಬಡ್ಡಿದರದಲ್ಲಿ ಸಾಲ ಒದಗಿಸುತ್ತದೆ.

ಈ ಸಾಲ ಪಡೆದವರು ಅವನ್ನು ನೇರವಾಗಿ ಉತ್ಪಾದನಾ ಅಭಿವೃದ್ಧಿಯಲ್ಲಿ ಬಳಸಿ ಹಸಿವು ಮತ್ತು ಬಡತನ ನಿವಾರಣೆಯ ರಾಷ್ಟ್ರೀಯ ಗುರಿ ಸಾಧನೆಗೆ ನೆರವಾಗಬೇಕು.

ಸರಕಾರೀ ಒಡೆತನದ ಈ ಬ್ಯಾಂಕ್‌ನ ಮುಖ್ಯಾಲಯ ಹಾನೋಯ್‌ನಲ್ಲಿದ್ದು ದೇಶಾದ್ಯಂತ ಇದು ಕಾರ್ಯನಿರ್ವಹಿಸುತ್ತದೆ.

ಮಹಿಳಾ ಎಂ.ಪಿ.ಗಳ ಸಂಖ್ಯೆಯಲ್ಲಿ ಇಳಿತ!

ವಿಶ್ವದ ಸಂಸತ್ತುಗಳಲ್ಲಿ ಮಹಿಳೆಯರ ಪ್ರತಿಶತ ಕಡಿಮೆಯಾಗಿದೆ ಎಂದು ಅಂತರ-ಪಾರ್ಲಿಮೆಂಟರೀ ಯೂನಿಯನ್ (ಐಪಿಯು)ನ ಒಂದು ಪರಾಮರ್ಶೆ ತಿಳಿಸಿದೆ. 1988ರಲ್ಲಿ ಇದು 14.8ಶೇ. ಕ್ಕೇರಿತ್ತು. ಇದು ಅದುವರೆಗಿನ ಅತೀ ಹೆಚ್ಚು ಪ್ರತಿಶತ. 1995ರಲ್ಲಿ ಇದು 11.3ಶೇ. ಕ್ಕೆ ಇಳಿದಿದೆ. ಆದರೆ ಈ ಶತಮಾನ ಆರಂಭವಾದಾಗ ಕೇವಲ ಒಂದು ದೇಶದಲ್ಲಿ ಮಾತ್ರ ಮಹಿಳೆಯರಿಗೆ ಮತ ನೀಡುವ, ಚುನಾವಣೆಗೆ ನಿಲ್ಲುವ ಹಕ್ಕು ಇತ್ತು (ನ್ಯೂಝಿಲೆಂಡ್ ನಲ್ಲಿ!) ಈಗ ಸುಮಾರಾಗಿ ಎಲ್ಲಾ ದೇಶಗಳಲ್ಲಿ ಈ ಹಕ್ಕು ಇದೆಯೆಂಬುದು ಗಮನಾರ್ಹ ಎಂದು ಈ ಪರಾಮರ್ಶೆ ಗಮನಿಸುತ್ತದೆ.

ಏಶ್ಯಾ ಮತ್ತು ಯುರೋಪಿನ ಸಂಸತ್ತುಗಳಲ್ಲಿ ಮಹಿಳೆಯರ ಶೇಕಡಾವಾರು ಅಮೇರಿಕಾ ಶಾಂತಸಾಗರ ಪ್ರದೇಶ ಹಾಗೂ ಅರಬ್ ದೇಶಗಳಿಗಿಂತ ಹೆಚ್ಚು ಎಂದೂ ಈ ಅಧ್ಯಯನ ಗಮನಿಸಿದೆ.

ಅತೀ ಹೆಚ್ಚು ಮಹಿಳಾ ಪ್ರಾತಿನಿಧ್ಯ ಇರುವ ದೇಶಗಳೆಂದರೆ ಸ್ವೀಡನ್ (40.4ಶೇ), ನಾರ್ವೆ (39.4.ಶೇ.) ಫಿನ್‌ಲ್ಯಾಂಡ್ (33.5ಶೇ.) ಡೆನ್ಮಾರ್ಕ್ (33ಶೇ.) ಹಾಗೂ ನೆದರ್ ಲ್ಯಾಂಡ್ (21.4ಶೇ.)

ಕಳೆದ ತಿಂಗಳು ನಾಲ್ಕನೇ ವಿಶ್ವ ಮಹಿಳಾ ಸಮ್ಮೇಳನ ನಡೆಸಿಕೊಟ್ಟ ದೊಡ್ಡ ದೇಶ ಚೀಣಾದ ರಾಷ್ಟ್ರೀಯ ಜನತಾ ಕಾಂಗ್ರೆಸ್ ನಲ್ಲಿ ಮಹಿಳೆಯರ ಸಂಖ್ಯೆ ಶೇ. 21. ಆದರೆ ಅಮೇರಿಕಾದಲ್ಲಿ ಅದು ಕೇವಲ ಶೇ. 10.7 ಇದಕ್ಕೆ ವಿಶ್ವದಲ್ಲಿ 43ನೇ ಸ್ಥಾನ.

ಪೂರ್ವ ಯುರೋಪಿನ ದೇಶಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ವಿಪರೀತ ಇಳಿದಿದೆ. 1985ರಲ್ಲಿ ರೊಮಾನಿಯಾದಲ್ಲಿ ಶೇ. 34 ಇದ್ದದ್ದು ಈಗ 3ಕ್ಕಿಳಿದಿದೆ. ಪೋಲಂಡಿನಲ್ಲಿ 1980 ಮತ್ತು 1989ರ ನಡುವೆ ಶೇ. 23ಶೇ. ದಿಂದ 13.5ಕ್ಕೆ ಇಳಿದಿದೆ. ಹಂಗೇರಿಯಲ್ಲಿ 1980 ಮತ್ತು 1990 ರ ನಡುವೆ ಶೇ. 30.1 ರಿಂದ 7.3ಶೇ. ಕ್ಕೆ ಇಳಿದಿದೆ.

ಚೀಣಾ ಪ್ರಧಾನಿ ಲಿ ಫೆಂಗ್ ಇತ್ತೀಚೆಗೆ ಕ್ಯೂಬಾಕ್ಕೆ ಭೇಟಿ ನೀಡಿದಾಗ ಕ್ಯೂಬಾ ಅಧ್ಯಕ್ಷ ಫಿಡೆಲ್‌ಕಾಸ್ಟ್ರೋರೊಂದಿಗೆ



KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ. ರಾಮಚಂದ್ರರಾವ್, ಸಂಪಾದಕೀಯ ಕಛೇರಿ ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು -27 ಫೋನ್ ನಂ. 2236462

ನವೆಂಬರ್ 6,7,8ರಂದು ಬಿಜಾಪುರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ 11ನೇ ರಾಜ್ಯ ಸಮ್ಮೇಳನ

ಕೇಂದ್ರ-ರಾಜ್ಯ ಸರಕಾರಗಳ ರೈತ-ವಿರೋಧಿ ನೀತಿಗಳಿಗೆ ಪರ್ಯಾಯ ಕೃಷಿ ನೀತಿ

ಕಾಂಗ್ರೆಸ್(ಐ)ನ ಆರ್ಥಿಕ ನೀತಿಗಳಿಂದಾಗಿ ವಿದೇಶಿ ಸಾಲಕ್ಕಾಗಿ ರಾಷ್ಟ್ರದ ರೈತರು, ಕಾರ್ಮಿಕರು, ಇತರ ಶ್ರಮಜೀವಿಗಳು ಹಾಗೂ ಇಡೀ ರಾಷ್ಟ್ರವನ್ನು ಒತ್ತೆಯಿಡುವುದರ ಪರಿಣಾಮವಾಗಿ ಬಹುರಾಷ್ಟ್ರೀಯ ಕಂಪೆನಿಗಳನ್ನು ಸುಪ್ರೀತಗೊಳಿಸಲು ಇಡೀ ಭೂಮಿಯನ್ನು ಅವರಿಗೆ ಒದಗಿಸಿ ಆಹಾರ ಧಾನ್ಯವನ್ನು ಬೆಳೆಯುವುದನ್ನು ನಿಲ್ಲಿಸಿ ವಿದೇಶದವರು ಬೆಳೆಯುವ ಆಹಾರವನ್ನು ಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಒಂದೆಡೆ ದೇಶೀ-ವಿದೇಶೀ ಶ್ರೀಮಂತರು ನಮ್ಮ ರೈತರ ಭೂಮಿಯನ್ನು ಖರೀದಿಸಲು ಅಥವಾ ಗುತ್ತಿಗೆ ಪಡೆಯಲು ಅವಕಾಶ ನೀಡಬೇಕು, ಇನ್ನೊಂದೆಡೆ ನಮ್ಮ ದುಡಿಮೆಗಾರ ರೈತರು ವ್ಯವಸಾಯ ಮಾಡಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಿಸಿ ಅಂದರೆ ಸಬ್ಸಿಡಿಗಳನ್ನು ರದ್ದು ಮಾಡಿ, ರಸಗೊಬ್ಬರ, ಕ್ರಿಮಿನಾಶಕ, ಬೀಜ, ಕೃಷಿ ಉಪಕರಣಗಳ ಬೆಲೆಗಳನ್ನು ಹೆಚ್ಚಿಸಿ ಅವರು ಶ್ರೀಮಂತರಿಗೆ ತಮ್ಮ ಭೂಮಿಯನ್ನು ಮಾರಾಟ ಮಾಡುವಂತಾಗಬೇಕು, ವಿದ್ಯುತ್, ನೀರಾವರಿ ಯೋಜನೆಗಳನ್ನು ಖಾಸಗಿಯವರಿಗೆ, ವಿದೇಶೀಯರಿಗೆ ನೀಡಿ ಅವುಗಳ ಖರ್ಚನ್ನು ಹೆಚ್ಚಿಸಿ ಅಳಿದುಳಿದ ರೈತರೂ ತಮ್ಮ ಜಮೀನನ್ನು ಮಾರಾಟ ಮಾಡುವಂತಾಗಬೇಕು ಎಂಬುದು ಕಾಂಗ್ರೆಸ್ (ಐ)ನ ಕೃಷಿ ನೀತಿ ಎಂಬುದೀಗ ಸ್ಪಷ್ಟವಾಗುತ್ತಿದೆ. ಈ ನೀತಿ ಹಣ್ಣು, ಹೂವು, ತರಕಾರಿ ಇತ್ಯಾದಿ ಬೆಳೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಭರದಲ್ಲಿ ಆಹಾರ ಬೆಳೆಯುವ ಜಮೀನು ಕಡಿತವಾಗುತ್ತಿದೆ. ಇದು ದೇಶದ ಆಹಾರ ಭದ್ರತೆಗೆ ಕೊಡಲಿಯೇಟು ನೀಡುತ್ತಿದೆ ಎಂದು ತಜ್ಞರೂ ಎಚ್ಚರಿಸುತ್ತಿದ್ದಾರೆ. ಆದರೆ ಕಾಂಗ್ರೆಸ್(ಐ) ಸರಕಾರಕ್ಕೆ ಇದರ ಪರಿವೆಯೇ ಇದ್ದಂತಿಲ್ಲ. ದುಡಿಯುವ ರೈತ,ಕೃಷಿ ಕೂಲಿಕಾರರಿಗಂತೂ ಯಾವ ರಕ್ಷಣೆಯೂ ಇಲ್ಲ. ಬಹುಪಾಲು ಜನರನ್ನೂ ಕೂಲಿ ಗುಲಾಮರನ್ನಾಗಿ ಮಾಡುವುದೇ ಕಾಂಗ್ರೆಸ್(ಐ) ನೀತಿಗಳ ಹೂರಣ.

ರಾಜ್ಯದಲ್ಲೂ ಕಾಂಗ್ರೆ ದಾರಿ

ಇಂತಹ ನೀತಿಯನ್ನು ದೇಶದ ಹಲವೆಡೆ ಅವಕಾಶ ಸಿಕ್ಕಾಗಲೆಲ್ಲಾ ಜನ ನಿರ್ಣಾಯಕವಾಗಿ ತಿರಸ್ಕರಿಸಿದ್ದಾರೆ. ಕರ್ನಾಟಕ ವಿಧಾನಸಭಾ ಚುನಾವಣೆಗಳಲ್ಲೂ ಇದು ಕಂಡು ಬಂತು. ಆದರೆ ಇಂತಹ ಕೃಷಿ ನೀತಿಯನ್ನು ತಿರಸ್ಕರಿಸಿ ರೈತರ ಪರವಾದ ಕೃಷಿ ನೀತಿಯನ್ನು ರೂಪಿಸುವ ಬದಲು ರಾಜ್ಯದ ಜನತಾದಳ ಸರಕಾರ ಕಾಂಗ್ರೆಸ್(ಐ) ನೀತಿಗಳನ್ನೇ ಅನುಸರಿಸಲು ಮುಂದಾಗಿದೆ. ಕಳೆದ ಹದಿನೈದು ವರ್ಷಗಳಿಂದ ಸ್ಥಗಿತಗೊಂಡ ಆಹಾರ ಉತ್ಪಾದನೆಯನ್ನು ಹೆಚ್ಚಿಸುವ ಪ್ರೋತ್ಸಾಹ ನೀಡುವ ಬದಲು ಕೇವಲ ವಿದೇಶೀ ಬೇಡಿಕೆಯಿರುವ ರಫ್ತಿನ ಬೆಳೆಗಳಿಗೆ, ಹಣ್ಣು ಹೂವು, ತರಕಾರಿ ಮತ್ತಿತರ ಹಣಕಾಸು ಬೆಳೆಗಳಿಗೆ ಸಾವಿರಾರು ಕೋಟಿ ರೂಪಾಯಿಗಳನ್ನು ವಿನಿಯೋಗಿಸಲು ಮುಂದಾಗಿದೆ. ಕೃಷಿಯನ್ನು ಕೈಗಾರಿಕೆಯಾಗಿ ಮಾಡುವ ಹೆಸರಲ್ಲಿ ಬಹುಪಾಲು ರೈತರ ಭೂಮಿಗಳನ್ನು ಕಸಿದುಕೊಂಡು ಕೆಲವೇ ಬಂಡವಾಳ ಶಾಹಿ ಭೂಮಾಲಕರನ್ನು ನಿರ್ಮಾಣ ಮಾಡುವ ದಾರಿಯನ್ನು ಜನತಾದಳ ಸರಕಾರವೂ ಓಡಿಯುತ್ತಿದೆ. ಭೂ ಸುಧಾರಣಾ ತಿದ್ದುಪಡಿ ವಿಧೇಯಕ ಹಾಗೂ ನೂತನ ಕೃಷಿ ನೀತಿ ಈ ದಿಕ್ಕಿನಲ್ಲಿ ಇಟ್ಟಿರುವ ಹೆಜ್ಜೆಗಳು. ಆದ್ದರಿಂದ ಸಹಜವಾಗಿಯೇ ರಾಜ್ಯದ ರೈತರು, ಕೃಷಿ ಕೂಲಿಕಾರರು, ಈ ನೀತಿಯನ್ನು ಬಲವಾಗಿ ವಿರೋಧಿಸುತ್ತಿದ್ದಾರೆ.

ಹಿನ್ನೆಲೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮ್ಮೇಳನ ಬಿಜಾಪುರದಲ್ಲಿ ನಡೆಯಲಿದೆ.

ಕೈಗಾರಿಕಾ ವಲಯದಂತೆ ಕೃಷಿ ವಲಯದಲ್ಲೂ ಕಾಂಗ್ರೆಸ್(ಐ)ನ ನೀತಿಗಳಿಗೆ ಪರ್ಯಾಯವಿಲ್ಲವೆಂಬಂತೆ ವರ್ತಿಸಲಾಗುತ್ತಿದೆ. ಆದರೆ ಪರ್ಯಾಯ ಇದೆ ಎಂದು ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಕಳೆದ ಹದಿನೆಂಟು ವರ್ಷಗಳ ತನ್ನ ಆಳ್ವಿಕೆಯಲ್ಲಿ ಕಾರ್ಯತಃ ತೋರಿಸಿಕೊಟ್ಟಿದೆ: ಬಡ ರೈತಾಪಿ ಜನತೆಯ ಜೀವನಮಟ್ಟ ಸುಧಾರಿಸಿ ಅದರಿಂದ ಆಹಾರ ಉತ್ಪಾದನೆಯಲ್ಲಿ ಹೊಸ ದಾಖಲೆ ಗಳಿಸಿದೆಯಷ್ಟೇ ಅಲ್ಲ, ಕೈಗಾರಿಕಾ ವಸ್ತುಗಳಿಗೆ ಹೊಸ ಮಾರುಕಟ್ಟೆಯನ್ನು ಸೃಷ್ಟಿಸಲು ಅಲ್ಲಿ ಸಾಧ್ಯವಾಗಿದೆ. ಆದ್ದರಿಂದಲೇ ಪಶ್ಚಿಮ ಬಂಗಾಳದಲ್ಲಿ ಒಂದು ಕೋಟಿ ಸದಸ್ಯತ್ವವಿರುವ ಕಿಸಾನ್ ಸಭಾದ ಬೆಂಬಲವನ್ನು ಅದು ಗಳಿಸಿದೆ.

ಸಮ್ಮೇಳನದ ಮುಂದಿನ ಪ್ರಶ್ನೆಗಳು

ಪಶ್ಚಿಮ ಬಂಗಾಳದ ಅನುಭವವನ್ನು ಹಾಗೂ ರಾಜ್ಯದ ನಿರ್ದಿಷ್ಟ ಪರಿಸ್ಥಿತಿಗಳ ಅಧ್ಯಯನ ನಡೆಸಿ ರಾಜ್ಯದಲ್ಲಿ ಒಂದು ಪರ್ಯಾಯ ಕೃಷಿ ನೀತಿಯನ್ನು ರೂಪಿಸಿ ರಾಜ್ಯದ ರೈತರ ಮುಂದಿಡುವ ಕರ್ತವ್ಯ ಕರ್ನಾಟಕ ಪ್ರಾಂತ ರೈತ ಸಂಘದ ಈ ರಾಜ್ಯ ಸಮ್ಮೇಳನದ ಮುಂದಿದೆ.

ರಾಜ್ಯದಲ್ಲಿ 50 ಲಕ್ಷದಿಂದ ಒಂದು ಕೋಟಿ ಎಕರೆಯಷ್ಟು ಸರಕಾರಿ ಸ್ವಾಮ್ಯದ ಭೂಮಿಯಿದೆ. ಅದರಲ್ಲಿ ಹಲವು ಬಡರೈತರು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದಾರೆ. ಇವರಿಗೆ ಹಾಗೂ ಭೂ ರಹಿತರಿಗೆ ಜಮೀನಿನ ಮಾಲಿಕತ್ವ ನೀಡಿ, ಉತ್ಪಾದನೆಗೆ ವಿಶೇಷ ಸೌಲಭ್ಯ ಒದಗಿಸಿ ಈ ಬಡಜನರ ಜೀವನಮಟ್ಟ ಸುಧಾರಿಸುವುದು ಹಾಗೂ ಅದೇ ವೇಳೆಗೆ ಆಹಾರ ಉತ್ಪಾದನೆ ಹೆಚ್ಚಿಸುವುದು ಸಾಧ್ಯವಿದೆ. ಇಲ್ಲಿಯ ಭೂ ಸುದಾರಣೆ ಕಾಯ್ದೆ ಕ್ರಾಂತಿಕಾರಕವೆಂದು ಹೇಳಲಾಗುತ್ತಿತ್ತು. ಆದರೆ ಇದರಿಂದ ಜಮೀನು ದೊರೆತದ್ದು ಕೇವಲ 25 ಸಾವಿರ ಭೂರಹಿತರಿಗೆ ಮಾತ್ರ. ಹೆಚ್ಚುವರಿ ಎಂದು ವಶಪಡಿಸಿಕೊಂಡದ್ದೂ ಕೇವಲ 1.25 ಎಕರೆ ಅದರಲ್ಲಿ ವಿತರಣೆಯಾದದ್ದು ಇನ್ನಷ್ಟು ಕಡಿಮೆ. ಆದ್ದರಿಂದ ಪ್ರಸ್ತುತ ದೇವೇಗೌಡ ಸರಕಾರ ತರಲಿರುವ ತಿದ್ದುಪಡಿಗಳನ್ನು ಕೈಬಿಟ್ಟು ಪಶ್ಚಿಮ ಬಂಗಾಳ ಮಾದರಿಯಲ್ಲಿ ಪ್ರಗತಿಪರ ಅಂಶಗಳನ್ನು ಸೇರಿಸಿ ಈ ಕಾಯ್ದೆಯನ್ನು ಅರ್ಥಪೂರ್ಣಗೊಳಿಸಬೇಕಾಗಿದೆ. ನೀರಾವರಿ ವಲಯದಲ್ಲಿ ಹೆಚ್ಚಿನ ಸಂಪನ್ಮೂಲ ವಿನಿಯೋಗ, ಅದರ ನಿರ್ವಹಣೆ, ಉಸ್ತುವಾರಿಯ ಬಗ್ಗೆ ಯೋಚಿಸಬೇಕು. ಕೃಷಿ ಕೂಲಿಕಾರರಿಗೆ ಸಮಗ್ರ ಮಸೂದೆ ರೈತಾಪಿ ಜನಗಳ ಆಂದೋಲನದ ಒಂದು ದೀರ್ಘ ಕಾಲದ ಇತ್ಯರ್ಥವಾಗದ ಬೇಡಿಕೆ. ಜಲ ವಿದ್ಯುತ್ ಯೋಜನೆಗಳಿಗೆ ಪ್ರಾಶಸ್ತ್ಯ, ವಿದ್ಯುತ್ ಅಭಾವ ನೀಗಿಸಲು ಯೋಜನೆ, ಸಹಕಾರಿ ರಂಗವನ್ನು ಕ್ರೀಯಾಶೀಲಗೊಳಿಸುವುದು, ಬೆಳೆವಾರು ನಿಗಮಗಳನ್ನು ರಚಿಸಿ ರೈತರ ಬೆಳೆಗೆ ಯೋಗ್ಯ ಬೆಲೆ ಸಿಗುವಂತೆ ಮಾಡುವುದು, ಪಂಚಾಯತಿ ವ್ಯವಸ್ಥೆಯಲ್ಲಿ ಹೆಚ್ಚಿನ ಅಧಿಕಾರ ಹಾಗೂ ಸಂಪನ್ಮೂಲ ನೀಡಿ ಗ್ರಾಮ ಸಭೆಗಳು ನೇತೃತ್ವದ ಪಾತ್ರ ವಹಿಸುವಂತೆ ಮಾಡುವುದು ಇತ್ಯಾದಿ ಬಗ್ಗೆ ರಾಜ್ಯ ಸಮ್ಮೇಳನ ಚರ್ಚಿಸಿ ಪರ್ಯಾಯ ಕೃಷಿ ನೀತಿಯನ್ನು ರೈತರ ಮುಂದಿಡಲಿದೆ.

ಸಹಜವಾಗಿಯೇ ಕೇಂದ್ರ ಕಾಂಗ್ರೆ ಸರಕಾರದ ಹಾದಿಯಲ್ಲೇ ಸಾಗಬಯಸುತ್ತಿರುವ ರಾಜ್ಯ ಸರಕಾರದ ನೀತಿಗಳ ವಿರುದ್ಧ ರಾಜ್ಯದಲ್ಲಿ ಬೃಹತ್ ಚಳುವಳಿ ನಡೆಸುವ ಚರ್ಚಿಸಲಿದೆ.

‘ಸ್ವದೇಶಿ’ ಮಂತ್ರದ ಹಿಂದೇನಿದೆ?

5 ನೇ ಪುಟದಿಂದ

ಪರಿಸ್ಥಿತಿಯಲ್ಲಿ ಕಾವಿ ಪಡೆಗಳು ಆರಂಭದಲ್ಲಿ ಹೇಳಿದ ರೋಸ್ ಪೆರೋ ಗೊಂದಲದಲ್ಲಿ ಬಿದ್ದರೆ ಆಶ್ಚರ್ಯವೇನು?

ಈ ನೀತಿಗಳನ್ನು ವಿರೋಧಿಸುವುದು ಹೇಗೆ?

ಹಾಗಿದ್ದರೆ ಕಾಂಗ್ರೆಸ್ ಮುಖಂಡರು ವಾದ ಮಾಡುವಂತೆ ಈ ಜಾಗತೀಕರಣದ ಯುಗದಲ್ಲಿ ಏನು ಮಾಡಲೂ ಸಾಧ್ಯವಿಲ್ಲ, ಬಹುರಾಷ್ಟ್ರೀಯ ಕಂಪನಿಗಳೆದುರು ಶರಣಾಗಬೇಕು ಎಂದು ಅರ್ಥವೇ? ಖಂಡಿತಾ ಅಲ್ಲ. ಆದರೆ ಈ ಹೋರಾಟವನ್ನು ‘ಸ್ವದೇಶೀ’ ಅಥವಾ ‘ವಿದೇಶೀ’ ಪರಿಮಿತಿಗಳಲ್ಲಿ ನಡೆಸಲು ಸಾಧ್ಯವಾಗದು. ಪರಿಸ್ಥಿತಿಯನ್ನು ಈ ಪರಿಮಿತಿಗಳಲ್ಲಿ ಚಿತ್ರಿಸುವುದು ಕಾಂಗ್ರೆಸ್ ಮತ್ತು ಬಿಜೆಪಿಗಳೆರಡಕ್ಕೂ ಅನುಕೂಲ. ಮನಮೋಹನ್ ಸಿಂಗ್ ಬಿಜೆಪಿ ವಿರುದ್ಧವಾದ ಮಾಡುತ್ತಾ ಜಾಗತೀಕರಣದ ಈಗಿನ ಯುಗದಲ್ಲಿ ಇಂತಹ ‘ಸ್ವದೇಶೀ’ ಮಂತ್ರಕ್ಕೆ ಅರ್ಥವಿಲ್ಲ ಎಂದರೆ ಬಿಜೆಪಿ ಮೇಲೆ ಹೇಳಿದಂತಹ ಹಾಸ್ಯಾಸ್ಪದ ಸ್ಥಿತಿಯಲ್ಲಿ ಸಿಲುಕಿಕೊಂಡು, ಸ್ವದೇಶೀ-ವಿದೇಶೀ ನಡುವೆ ವ್ಯತ್ಯಾಸ ಮಾಡಲಾಗದೆ ಈ ನೀತಿಗಳಿಗೆ ಪರ್ಯಾಯವೇ ಇಲ್ಲವೆಂದು ಇನ್ನೊಂದು ದಿಕ್ಕಿನಿಂದ ಅನುಮೋದಿಸುತ್ತಿದೆ.

ಹಣಕಾಸು ಮತ್ತು ಕೈಗಾರಿಕಾ ಬಂಡವಾಳಗಳೆರಡೂ ಅಂತರ್ರಾಷ್ಟ್ರೀಕರಣಗೊಂಡಿರುವ ಪ್ರಸ್ತುತ ಯುಗದಲ್ಲಿ ಯಾವುದೇ ಆರ್ಥಿಕವನ್ನು ಇವುಗಳ ಪ್ರಭಾವ ತಟ್ಟದಂತೆ ದೂರಪಿರಿಸುವುದು ಸಾಧ್ಯವೂ ಇಲ್ಲ, ಅದರ ಅಗತ್ಯವೂ ಇಲ್ಲ. ಸ್ವಾವಲಂಬನೆ ಮತ್ತು ಆರ್ಥಿಕ ಸಾರ್ವಭೌಮತೆಯನ್ನು ರಕ್ಷಿಸಿಕೊಳ್ಳುವುದೆಂದರೆ ನಮ್ಮ ಆರ್ಥಿಕವನ್ನು ವಿಶ್ವ ಆರ್ಥಿಕದಿಂದ ಸಂಪೂರ್ಣ ದೂರ ಇಟ್ಟುಕೊಳ್ಳುವುದೆಂದೇನೂ ಅಲ್ಲ. ಅದರ ನಿಜವಾದ ಅರ್ಥ ಅಂತರ್ರಾಷ್ಟ್ರೀಯ ಆರ್ಥಿಕದಲ್ಲಿ ಭಾರತ ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವಂತೆ ಸಾಧಿಸುವ ರೀತಿಯಲ್ಲಿ ಭಾಗವಹಿಸಬೇಕು ಎಂದು. ಅದರ ಬದಲು ನಾವು ಕಾಣುವುದೇನು? ನರಸಿಂಹರಾವ್ ಮನಮೋಹನ್ ಸಿಂಗ್‌ರ ಆರ್ಥಿಕ ನೀತಿಗಳು ಜಾಗತೀಕರಣದ ಹೆಸರಲ್ಲಿ ದೇಶದ ಹಿತಾಸಕ್ತಿಗಳು ಹಾಗೂ ಜನರ ಕಲ್ಯಾಣಕ್ಕೆ ಕೆಡುಕುಂಟು ಮಾಡುವ ಶರತ್ತುಗಳ ಮೇಲೆ ವಿಶ್ವ ಆರ್ಥಿಕದಲ್ಲಿ ತೊಡಗುವಂತೆ ಮಾಡಿವೆ.

ಇದರಿಂದ ನೇರ ಲಾಭಗಳಿಸುವುದೆಂದರೆ ಭಾರತದ ಆಳುವ ವರ್ಗಗಳು, ಅದರಲ್ಲೂ ಮುಖ್ಯವಾಗಿ ಗುತ್ತೇದಾರಿ ಬಂಡವಾಳಶಾಹಿಗಳು ಹಾಗೂ ಅವರ ಸಾಮಾಜಿಕ ನೆಲೆಯಾದ ಮೇಲ್ ಮಧ್ಯಮ ವರ್ಗದ ಜನ. ಇಂತಹ ಸಂದರ್ಭದಲ್ಲಿ ‘ಸ್ವದೇಶೀ’ ಮಂತ್ರ ಹೇಳುತ್ತಾ ಯುನಿಲಿವರ್‌ನ ಸಾಬೂನಿನ ಬದಲು ಟಾಟಾದವರ ಸಾಬೂನು ಬಳಸಿ ಎಂದು ಹೇಳಿದರೆ, ಟಾಟಾನೇ ತನ್ನ ಉತ್ಪಾದನಾ ಘಟಕಗಳನ್ನು ಯುನಿಲಿವರ್ ಗೆ ಮಾರಿದರೆ ಆಗ ‘ಸ್ವದೇಶೀ’ ಮಂತ್ರದಲ್ಲಿ ಏನುಳಿಯುತ್ತದೆ?

ಆಳುವ ವರ್ಗಗಳ ಪ್ರತಿನಿಧಿಗಳ ಈ ಗೋಸುಂಬೆತನ, ಆತ್ಮವಂಚನೆ!

ಅಂದರೆ ಈ ಆರ್ಥಿಕ ನೀತಿಗಳನ್ನು ದೇಶೀ-ವಿದೇಶೀ ಸರಕುಗಳು ಎಂಬ ವ್ಯತ್ಯಾಸ ಕಲ್ಪಿಸುವುದರ ಮೂಲಕ ವಿರೋಧಿಸಲು ಸಾಧ್ಯವಿಲ್ಲ. ದೇಶದ ಸಂಪನ್ಮೂಲಗಳ ಲೂಟಿ ಮಾಡಲು ಬಹುರಾಷ್ಟ್ರೀಯ ಕಂಪೆನಿಗಳಿಗೆ ಯಾವ ಆಧಾರಗಳ ಮೇಲೆ ಅವಕಾಶ ನೀಡಲಾಗುತ್ತಿದೆಯೋ ಅವನ್ನು ಎಂಬುದನ್ನು ಸಂಪೂರ್ಣವಾಗಿ ವಿರೋಧಿಸಬೇಕು. ಒಂದೆಡೆ ಇಂತಹ ಆಧಾರಗಳನ್ನು ಮತ್ತು ಅದಕ್ಕನುಗುಣವಾದ ನೀತಿಗಳನ್ನು ಬೆಂಬಲಿಸುತ್ತಾ ಮತ್ತೊಂದೆಡೆ ‘ಸ್ವದೇಶೀ’ ಮಂತ್ರ ಜಪಿಸುವುದು ಆತ್ಮವಂಚನೆಯಷ್ಟೇ ಅಲ್ಲ, ಇದು ಜನಗಳನ್ನು ತಪ್ಪುದಾರಿಗೆಳೆದು ಈ ಇಡೀ ನೀತಿಗಳ ವಿರುದ್ಧ ಮೂಲಭೂತ ಹೋರಾಟದಿಂದ ಅವರ ಗಮನವನ್ನು ಬೇರೆಡೆಗೆ ಸೆಳೆಯುತ್ತದೆ.

ಕಾವಿಪಡೆಗಳೀಗ ಇದನ್ನೇ ಮಾಡುತ್ತಿವೆ. ಸ್ವಾತಂತ್ರ್ಯ ಹೋರಾಟದಿಂದ ಎರವಲು ತಂದ ಪರಿಕಲ್ಪನೆಗಳಿಂದ ರಾಷ್ಟ್ರೀಯ ಭಾವನೆಗಳನ್ನು ಉದ್ದೀಪನಗೊಳಿಸಲು ಎಷ್ಟೇ ಪ್ರಯತ್ನ ನಡೆಸಿದರೂ ಅದು ಬಿಜೆಪಿ ಕೂಡಾ ಒಂದು ಆಳುವ ವರ್ಗದ ಪಕ್ಷ ಎಂಬುದನ್ನು ಮರೆಮಾಚಲು ಸಾಧ್ಯವಿಲ್ಲ. ಹೊಸ ಆರ್ಥಿಕ ನೀತಿಗಳು ರೂಪಿತಗೊಂಡಿರುವುದು ಈ ಆಳುವ ವರ್ಗಗಳ ಹಿತಾಸಕ್ತಿಗಳಿಗಾಗಿಯೇ. ಬಿಜೆಪಿ ಅಲ್ಲೊಮ್ಮೆ-ಇಲ್ಲೊಮ್ಮೆ ಗದ್ದಲ ಎಬ್ಬಿಸಬಹುದಷ್ಟೇ. ಕೊನೆಗೆ ತಲೆಬಾಗಿ ಆ ನೀತಿಗಳನ್ನೇ ಅನುಮೋದಿಸುತ್ತದೆ. ಏಕೆಂದರೆ ಅದು ಪ್ರತಿನಿಧಿಸುವುದು ಆ ವರ್ಗಗಳ ಹಿತಾಸಕ್ತಿಗಳನ್ನೇ ತಾನೇ?

ಇತಿಹಾಸ ನ್ಯಾಯದೊರಕಿಸಿಕೊಡುವಲ್ಲಿ ತನ್ನದೇ ನಿಯಮಗಳನ್ನು ಪಾಲಿಸುತ್ತದಂತೆ. ಮಹಾತ್ಮಗಾಂಧೀಜಿಯ ಕೊಲೆಗಡುಕರು ಇಂದು ಅವರದೇ ಪರಿಕಲ್ಪನೆಗಳನ್ನು ಅಪಹರಿಸುವ ಪ್ರಯತ್ನದಲ್ಲಿರುವಾಗಲೇ ಅವರದ್ದೇ ರಾಜ್ಯ ಗುಜರಾತ್ ದಲ್ಲಿ ಗಾಂಧೀಜಿ ಜಯಂತಿಯ ವಾರದಲ್ಲೇ ಶಾಶ್ವತ ಕಳಂಕವನ್ನು ಮೆತ್ತಿಕೊಂಡಿದ್ದಾರೆ. ಅವರು ಆ ಬಗ್ಗೆ ಗೊಣಗುವಂತೆಯೂ ಇಲ್ಲ. ಏಕೆಂದರೆ ದೇವರು ಅವತಾರವೆತ್ತಿ ರಕ್ಷಿಸುತ್ತಾನೆ ಎಂಬ ನಂಬಿಕೆಯವರು ತಾನೇ ಅವರು!

ಬಿಜೆಪಿಯ ‘ನೀತಿವಂತಿಕೆ’ಯ ಗುಳ್ಳೆ ಒಡೆದ.....

ಪುಟ 5 ರಿಂದ

ಮೈತ್ರಿ ಮಾಡಿಕೊಂಡೆವು ಎನ್ನುವ ಈ ಪಕ್ಷ ಲಕ್ನೌನಲ್ಲಿ ಬಿ.ಎಸ್.ಪಿ. ನಡೆಸಿದ “ಪೆರಿಯಾರ್ ಮೇಳ” ತಮ್ಮ ಸಂಬಂಧಗಳನ್ನು ತಟ್ಟುವಷ್ಟು ದೊಡ್ಡ ಪ್ರಶ್ನೆಯೇನಲ್ಲ ಎಂದು ತಿಣುಕಾಡುತ್ತಿದೆ. ಪೆರಿಯಾರ್ ಎಂದೇ ಹೆಸರಾದ ಇ.ವಿ. ರಾಮಸ್ವಾಮಿ ನಾಯಕರ್ ಬ್ರಾಹ್ಮಣಿಕೆಯನ್ನು, ಶ್ರೀರಾಮ ಮತ್ತಿತರ ಹಿಂದೂ ದೇವತೆಗಳ ಆರಾಧನೆಗಳನ್ನು ಬಲವಾಗಿ ವಿರೋಧಿಸುತ್ತಿದ್ದವರು. ವಿ.ಹೆಚ್.ಪಿ. ಮುಖ್ಯಸ್ಥ ಸಿಂಘಾಲ್ ಪೆರಿಯಾರ್‌ರನ್ನು ಖಂಡಿಸುತ್ತಾ ಅವರನ್ನು ಜಿನ್ನಾರಿಗೆ ಹೋಲಿಸಿದರೂ ಬಿಜೆಪಿ ಮಾತ್ರ ಬಿ.ಎಸ್.ಪಿ.ಯ ಈ ಕಾರ್ಯಕ್ರಮದಿಂದಾಗಿ ತಾನು ಬೆಂಬಲ ಹಿಂತೆಗೆದುಕೊಳ್ಳಬೇಕಾಗಿಲ್ಲ ಎನ್ನಬೇಕಾಯಿತಷ್ಟೆ.

ಹಿಂದುತ್ವ-ದೊಡ್ಡ ವ್ಯಾಪಾರಸ್ಥರ ಸಂಚು

ಗುಜರಾತಿನ ಬಿಜೆಪಿ ಬಂಡವಾಳಶಾಹಿ ವಿಷಾಣುವಿನಿಂದ ತಪ್ಪಿಸಿಕೊಳ್ಳಲು ಹೇಗೆ ಸಾಧ್ಯ? ಅತ್ಯಂತ ಹೆಚ್ಚು ಕೈಗಾರಿಕಾಭಿವೃದ್ಧಿ ಹೊಂದಿದ ರಾಜ್ಯದಲ್ಲಿ ಕಾರ್ಯನಿರ್ವಹಿಸುವ ಆಳುವ ಪಕ್ಷ ವ್ಯಾಪಾರಸ್ಥರಿಗೆ ಸ್ನೇಹಮಯವಾದ ಪಕ್ಷವಾಗಿರಬೇಕು ತಾನೇ! ಸರಕಾರದ ನೀತಿಗಳಲ್ಲಿ ದೊಡ್ಡ ವ್ಯಾಪರಸ್ಥರ ಕೈವಾಡವಂತೂ ಬಹಿರಂಗವಾಗಿಯೇ ಇದೆ. ವಾಘೇಲಾ ಅವರೇ ಸಂಸತ್ತಿನಲ್ಲಿ ರಿಲಿಯಂಸ್ ನ ಅಂಬಾನಿಗಳ ಪರವಾಗಿ ದನಿಯೆತ್ತಲು ಹಿಂಜರಿಯಲಿಲ್ಲ. ಕಲಹಪೀಡಿತ ಬಿಜೆಪಿ ಗುಂಪುಗಳನ್ನು ಹತ್ತಿರ ತರುವ ವಿಫಲ ಪ್ರಯತ್ನ ನಡೆಸಿದ ಮಧ್ಯಸ್ಥಿಕೆದಾರರಲ್ಲಿ ಒಬ್ಬ ಮುಂಬೈ ಉದ್ಯಮಿ ಆಯ್ಯಂಕರ್ ವಾಲಾ ಎಂಬಾತನೂ ಇದ್ದು ಎಂಬುದು ಸಣ್ಣದಾದ ಅಡಿಟಿಪ್ಪಣಿಯಂತಿದ್ದರೂ ಇದೂ ಸಾಕಷ್ಟು ಅಂಶಗಳನ್ನು ತೆರೆದಿಟ್ಟಿದೆ. ಸ್ಪರ್ಧಾತ್ಮಕ ದೊಡ್ಡ ವ್ಯಾಪರಸ್ಥರ ಮೌಲ್ಯಗಳು ಒಂದು ಪಕ್ಷದಲ್ಲಿ ವ್ಯಾಪಿಸಲಾರಂಭಿಸಿದಾಗ ಅಧಿಕಾರದ ಪೀಠಗಳ ಹಂಚಿಕೆಗೆ ಕಚ್ಚಾಟ ಆರಂಭವಾಗುವುದು ಅನಿರೀಕ್ಷಿತವೇನಲ್ಲ.

ಬಿಜೆಪಿಯ ಹಿಂದುತ್ವ ದೃಷ್ಟಿಕೋಣ ದೊಡ್ಡ ವ್ಯಾಪಾರಸ್ಥರೊಂದಿಗೆ ನಿಕಟ ಸಂಬಂಧವನ್ನು ಪ್ರೋತ್ಸಾಹಿಸುತ್ತದೆ. ಗುಜರಾತಿನ ಬಿಜೆಪಿ ಸ್ವದೇಶೀ ಮಂತ್ರವನ್ನು ಗಂಬೀರವಾಗಿ ತಗೊಂಡಿಲ್ಲ.ಗಾಂಧೀಜಿಯ ಮೌಲ್ಯಗಳ ಬಗ್ಗೆಯಂತೂ ಅದರಲ್ಲಿರುವುದು ತುಚ್ಛ ಭಾವ ಮಾತ್ರ. ಅಕ್ಟೋಬರ್ 7 ರಂದು ಏನೇ ಆಗಿದ್ದರೂ ತನ್ನ ‘ನೈತಿಕತೆಯ’ ಕಾವಿ ಬಟ್ಟೆಯಲ್ಲಿ ಆಗಿರುವ ದೊಡ್ಡ-ದೊಡ್ಡ ತೂತುಗಳನ್ನು ಮುಚ್ಚುವುದು ಬಿಜೆಪಿಗೆ ಸುಲಭದ ಕೆಲಸವೇನಲ್ಲ.

ಬಿಜೆಪಿಯ “ಉನ್ನತ ಮೌಲ್ಯ”ಗಳ ಬಗ್ಗೆ ಸದಾ ಒಂದು ಸಂಪೂರ್ಣ ಗೋಸುಂಬೆತನ ಇದ್ದೇ ಇತ್ತು. ಚಂದ್ರಸ್ವಾಮಿಯೆದುರು ತಲೆಬಾಗುವ ರಾಜಮಾತೆಯಿರುವ, ಹಿಂದುಜಾಗಳೊಂದಿಗೆ ಸ್ನೇಹದಿಂದಿರುವ ವಾಜಪೇಯಿಯಿರುವ, ಹವಾಲಾ ಹಗರಣದ ಡೈರಿಗಳಲ್ಲಿ ಹೆಸರಿಸುವ ಅಡ್ವಾಣಿಯಿರುವ ಪಕ್ಷ ‘ಹಿಂದೂ’ ಮನಸ್ಸಿನ ಉದ್ದಿಮೆದಾರರಾದ ಸಿಂಘಾನಿಯಗಳು, ಬಿರ್ಲಾಗಳಿಂದ ಕೋಟ್ಯಾಂತರ ರೂಪಾಯಿ ಕಪ್ಪು ಹಣ ಪಡೆಯಲು ಹಿಂಜರಿಯದಿರುವ ಪಕ್ಷ ದೊಡ್ಡ ಬಂಡವಾಳಶಾಹಿಗಳ ಹಣದ ಚೀಲಗಳಿಗೆ ಕಟ್ಟಿ ಹಾಕಿಕೊಂಡ ಎಲ್ಲಾ ಪಕ್ಷಗಳಂತೆ ಗತಿ ಬಂದರೆ ಆಶ್ಚರ್ಯಪಡಬೇಕಾಗಿಲ್ಲ. ನೀತಿಬಾಹಿರ, ರಾಜಕೀಯ ವೈರುಧ್ಯಗಳೊಂದಿಗೆ ಅವರು ಬದುಕಲು ಕಲಿಯಬೇಕಾಗಿದೆ.